ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 23 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 37 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನವೆಂಬರ್‌ವರೆಗೂ ವಿಜಯೇಂದ್ರರೇ ರಾಜ್ಯ ಬಿಜೆಪಿ ಸಾರಥಿ!



ಬೆಂಗಳೂರು, ಮೇ 22(ಕೆಎಂಶಿ)– ಬರುವ ನವೆಂಬರ್‌ವರೆಗೆ ವಿಜಯೇಂದ್ರ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಮುಂದುವರೆಯಬೇಕು. ನಂತರ ವಸ್ತುಸ್ಥಿತಿ ಗಮನಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯ ಪಕ್ಷದ ರಾಷ್ಟ್ರೀಯ ಸಂಘಟನಾ ಸಹ ಕಾರ್ಯದರ್ಶಿ ಶಿವಪ್ರಕಾಶ್ ನೇತೃತ್ವದ ಸಭೆಯಲ್ಲಿ ವ್ಯಕ್ತವಾಗಿದೆ.

ಪದಾಧಿಕಾರಿಗಳಲ್ಲಿ ನಿಷ್ಕ್ರಿಯರಾಗಿರುವವರನ್ನು ಕೈಬಿಟ್ಟು ಉತ್ಸಾಹಿಗಳಿಗೆ ಅವಕಾಶ ನೀಡಬೇಕು. ಕೋರ್ ಕಮಿಟಿ ಪುನರ್ ರಚಿಸಬೇಕು ಎಂಬ ಅಭಿಪ್ರಾಯಗಳು ಕೇಳಿಬಂದಿರುವುದಾಗಿ ಮೂಲಗಳು ತಿಳಿಸಿವೆ. ಪ್ರಸ್ತುತ ಕೋರ್ ಕಮಿಟಿ ಮತ್ತು ಪದಾಧಿಕಾರಿಗಳ ಪಟ್ಟಿಯಲ್ಲಿ ಕೆಲವು ಬದಲಾವಣೆ ಹೊರತುಪಡಿಸಿ, ಬೇರೆ ಯಾವುದೇ ಬದಲಾವಣೆ ಮಾಡದಿರಲು ಪಕ್ಷದ ಹೈಕಮಾಂಡ್ ತೀರ್ಮಾನಿಸಿದೆ.

ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ವಿಧಾನಮಂಡಲದ ಪ್ರತಿಪಕ್ಷ ನಾಯಕರಾದ ಆರ್.ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ಕಾರ್ಯವೈಖರಿ ಕುರಿತಂತೆ ಅಭಿಪ್ರಾಯಗಳು ವ್ಯಕ್ತವಾಗಿವೆ.

ಉಭಯ ಸದನಗಳ ಪ್ರತಿಪಕ್ಷ ನಾಯಕರು ಉತ್ತಮ ಕೆಲಸ ನಿರ್ವಹಿಸುತ್ತಿದ್ದಾರೆ. ಕಾರ್ಯಶೈಲಿಯಲ್ಲಿ ಇನ್ನಷ್ಟು ಮೊನಚು ಬೇಕಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಮತ್ತಷ್ಟು ಪರಿಣಾಮಕಾರಿ ಕೆಲಸ ಮಾಡಬೇಕಿದೆ. ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು. ನಿಯಮಿತವಾಗಿ ಶಾಸಕರ ಸಭೆ ನಡೆಸುವ ಮೂಲಕ ಸರ್ಕಾರದ ವಿರುದ್ಧ ಹೋರಾಟದ ರೂಪುರೇಷೆ ಸಿದ್ಧಪಡಿಸಬೇಕು. ಸರ್ಕಾರದ ಹಗರಣಗಳನ್ನು ಬಯಲಿ ಗೆಳೆಯುವ ಮೂಲಕ ಬಿಜೆಪಿ ಮಾತ್ರ ರಾಜ್ಯದ ಜನರ ಪಾಲಿಗೆ ಪರ್ಯಾಯ ಪಕ್ಷ ಎಂಬುದನ್ನು ತಿಳಿಸಬೇಕು ಎಂಬ ಸಲಹೆ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಮೂಲಗಳು ತಿಳಿಸಿವೆ.

ಆಫ್ರಿಕಾ ಖಂಡದಲ್ಲಿ ಎಬೋಲಾ ಭೀತಿ

ರಾಜ್ಯದಲ್ಲಿ ಕಟ್ಟೆಚ್ಚರ

ಬೆಂಗಳೂರು, ಮೇ 22(ಕೆಎಂಶಿ)– ಆಫ್ರಿಕಾ ದೇಶಗಳಲ್ಲಿ ಎಬೋಲಾ ವೈರಸ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಆರೋಗ್ಯ ಇಲಾಖೆ ಸೂಚಿಸಿದೆ. ವಿದೇಶಗಳಿಂದ ಅದರಲ್ಲೂ ಆಫ್ರಿಕಾ ಖಂಡದಿಂದ ಬರುವವರನ್ನು ವಿಮಾನ ನಿಲ್ದಾಣಗಳಲ್ಲೇ ಆರೋಗ್ಯ ತಪಾಸಣೆಗೆ ಒಳಪಡಿಸುವಂತೆ ಆದೇಶಿಸಲಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಕೊಠಡಿಗಳನ್ನು ನಿಗದಿಪಡಿಸುವಂತೆ ತಿಳಿಸಲಾಗಿದೆ. ಆರೋಗ್ಯ ತಪಾಸಣೆಗಾಗಿ ಹೆಚ್ಚಿನ ಸಿಬ್ಬಂದಿ ನಿಯೋಜಿಸುವುದು ಹಾಗೂ ಅವರಿಗೆ ರೋಗ ಲಕ್ಷಣಗಳ ಬಗ್ಗೆ ಮಾಹಿತಿ ನೀಡಿ, ಲಕ್ಷಣಗಳು ಕಂಡುಬಂದಲ್ಲಿ ಔಷಧೋಪಚಾರ ಕ್ರಮಗಳ ಕುರಿತು ಮಾಹಿತಿ ನೀಡಲಾಗಿದೆ.

ಒಂದು ವೇಳೆ ರೋಗ ಪತ್ತೆಯಾದರೆ, ಕೂಡಲೇ ಕೇಂದ್ರ ಆರೋಗ್ಯ ಇಲಾಖೆಗೆ ಮಾಹಿತಿ ನೀಡಬೇಕು ಹಾಗೂ ಅಂತಹ ವ್ಯಕ್ತಿಯ ಪ್ರಯಾಣ ವಿವರಗಳನ್ನು ಸಂಗ್ರಹಿಸಿ ಕಳುಹಿಸಬೇಕು ಎಂದು ಸೂಚಿಸಲಾಗಿದೆ. ಆಫ್ರಿಕಾ ಖಂಡಗಳಿಂದ ಬರುವವರು ಸ್ವಯಂ ಪ್ರೇರಿತವಾಗಿ ಸ್ಥಳೀಯ ಸರ್ಕಾರಗಳಿಗೆ ಮಾಹಿತಿ ನೀಡುವಂತೆಯೂ ತಿಳಿಸಿದೆ. ಕೋವಿಡ್ ಸೋಂಕು ಪ್ರಕರಣಗಳಲ್ಲಿ ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳಿಗಿಂತ ಹೆಚ್ಚು ನಿಗಾ ವಹಿಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ.

ವಾರಸುದಾರರಿಲ್ಲದ ಜಮೀನು ಸರ್ಕಾರದ ವಶಕ್ಕೆ

ಬೆಳಗಾವಿ: ರಾಜ್ಯದಲ್ಲಿ ದಿನೇ ದಿನೆ ಹೆಚ್ಚಾಗುತ್ತಿರುವ ಭೂ ಅಕ್ರಮ, ನಕಲಿ ದಾಖಲೆ ಸೃಷ್ಟಿ ಹಾಗೂ ಅಕ್ರಮ ಪಹಣಿ ಬದಲಾವಣೆಗಳಿಗೆ ಕಡಿವಾಣ ಹಾಕಲು ಕರ್ನಾಟಕ ಕಂದಾಯ ಆಯುಕ್ತಾಲಯ ಮಹತ್ವದ ನಿರ್ಧಾರ ಕೈಗೊಂಡಿದೆ.

ರಾಜ್ಯದ ಕಂದಾಯ ಆಯುಕ್ತಾಲಯವು ಮೇ 20, 2026ರಂದು ಅತ್ಯಂತ ಮಹತ್ವದ ಸುತ್ತೋಲೆಯೊಂದನ್ನು ಹೊರಡಿಸಿದ್ದು, ಮೃತ ಭೂಮಾಲೀಕರಿಗೆ ಯಾವುದೇ ಕಾನೂನುಬದ್ಧ ವಾರಸುದಾರರು ಇಲ್ಲದಿರುವ ಜಮೀನುಗಳ ದುರುಪಯೋಗವನ್ನು ತಡೆಯಲು ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ.

ಕಂದಾಯ ಆಯುಕ್ತಾಲಯದ 'ಭೂಮಿ ಉಸ್ತುವಾರಿ ವಿಭಾಗ' ನೀಡಿರುವ ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹೊಸ ನಿಯಮಾವಳಿಗಳ ಪ್ರಕಾರ, ಸರ್ಕಾರದ ಇ–ಪೌತಿ ತಂತ್ರಾಂಶ ಮತ್ತು ಆಧಾರ್ ಜೋಡಣೆ ಪರಿಶೀಲನೆಯ ಸಂದರ್ಭದಲ್ಲಿ, ಯಾವುದೇ ಒಬ್ಬ ಮೃತ ಜಮೀನು ಮಾಲೀಕನಿಗೆ ಕಾನೂನುಬದ್ಧ ವಾರಸುದಾರರು ಇಲ್ಲ ಎಂಬುದು ಗ್ರಾಮ ಆಡಳಿತಾಧಿಕಾರಿಗಳ ಪರಿಶೀಲನೆಯಲ್ಲಿ ದೃಢಪಟ್ಟರೆ, ಅಂತಹ ಜಮೀನುಗಳನ್ನು ತಂತ್ರಾಂಶದಲ್ಲಿ ಸ್ವಯಂಚಾಲಿತವಾಗಿ "ಸರ್ಕಾರಿ ಮೀಸಲು" ಎಂದು ದಾಖಲಿಸಲಾಗುತ್ತದೆ.


ವಂಚನೆ ತಡೆಯಲು ಕಠಿಣ ನಿಯಮ ಜಾರಿ; ಭೂ ಮಾಫಿಯಾಗೆ ಬಿಗ್ ಬ್ರೇಕ್



ಸಂಗ್ರಹ ಚಿತ್ರ

ರಾಜ್ಯದ ಹಲವು ಜಿಲ್ಲೆಗಳಲ್ಲಿ ಜಮೀನಿನ ಅಸಲಿ ಮಾಲೀಕರು ಅಥವಾ ವಾರಸುದಾರರು ಇಲ್ಲದಿರುವುದನ್ನು ಬಂಡವಾಳ ಮಾಡಿಕೊಳ್ಳುತ್ತಿದ್ದ ಭೂ ಮಾಫಿಯಾದವರು, ಕೆಲವು ಭ್ರಷ್ಟ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನಕಲಿ ದಾಖಲೆಗಳ ಮೂಲಕ ಪಹಣಿಯಲ್ಲಿ ತಮ್ಮ ಹೆಸರುಗಳನ್ನು ಸೇರಿಸಿಕೊಳ್ಳುತ್ತಿದ್ದರು, ಈ ಬಗ್ಗೆ ಹಲವು ದೂರುಗಳು ಕೇಳಿ ಬಂದಿದ್ದವು. ಈ ಹಿನ್ನೆಲೆಯಲ್ಲಿ ಸರ್ಕಾರ ಕಠಿಣ ಕ್ರಮ ಕೈಗೊಂಡಿದೆ.

ಒಮ್ಮೆ ಈ ರೀತಿ ದಾಖಲಾದ ತಕ್ಷಣವೇ, ಆ ಜಮೀನುಗಳ ಖರೀದಿ, ಮಾರಾಟ, ಹಸ್ತಾಂತರ ಅಥವಾ ನೋಂದಣಿಯನ್ನು ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಸರ್ಕಾರದ 'ಕಾವೇರಿ' ತಂತ್ರಾಂಶದಲ್ಲಿ ಆಸ್ತಿಯ ವಹಿವಾಟನ್ನು ಲಾಕ್ ಮಾಡಲಾಗುತ್ತದೆ. ಇದರಿಂದಾಗಿ ಯಾವುದೇ ವ್ಯಕ್ತಿ ಆ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಲು ಅಥವಾ ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ▶ 6ನೇ ಪುಟಕ್ಕೆ



ಯಾವ ಲೋಪವಿಲ್ಲದೆ ಮರು ನೀಟ್–ಯುಜಿ

ಶಿಕ್ಷಣ ಸಚಿವ ಧರ್ಮೇಂದ್ರ ಭರವಸೆ



ನವದೆಹಲಿ: ಜೂನ್ 21ರಂದು ಮರು ನೀಟ್–ಯುಜಿಯನ್ನು ಯಾವುದೇ ಲೋಪವಿಲ್ಲದೆ ನಡೆಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭರವಸೆ ನೀಡಿದ್ದಾರೆ. ವೈದ್ಯಕೀಯ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಇದೇ ಮೇ 3ರಂದು ನಡೆದಿದ್ದ ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಕಾರಣಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ರದ್ದುಗೊಳಿಸಿತ್ತು. ನೀಟ್–ಯುಜಿ ಅಕ್ರಮ ನಡೆದಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಬೇಕಾಯಿತು. ಪರೀಕ್ಷಾ ಮಾಫಿಯಾದಿಂದಾಗಿ ಒಬ್ಬ ▶ 6ನೇ ಪುಟಕ್ಕೆ

ಜೂ.18ಕ್ಕೆ ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆ ನಾಲ್ಕು ಸ್ಥಾನಕ್ಕೆ ಚುನಾವಣೆ

- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಈರಣ್ಣ ಕಡಾಡಿ, ಕೆ.ನಾರಾಯಣ್ ನಿವೃತ್ತಿ
- ಗೌಡರು ಬಿಜೆಪಿ ನೆರವಿಂದ ಮತ್ತೆ ರಾಜ್ಯಸಭೆ ಪ್ರವೇಶ ಸಾಧ್ಯತೆ; ಕಾಂಗ್ರೆಸ್‌ನಿಂದ ಡಿ.ಬಿ.ಶ್ರೀನಿವಾಸ್, ಬಿ.ಜೆ.ವಿಜಯಕುಮಾರ್, ಮೋಹನ್ ಕಾತರಕಿ, ಅಂಜಲಿ ನಿಂಬಾಳ್ಕರ್, ಪವನ್ ಖೇಡ ಹೆಸರು ಪ್ರಸ್ತಾಪ; ಬಿಜೆಪಿಯಿಂದ ಸದಾನಂದಗೌಡರ ಶಿಫಾರಸು



ಹೆಚ್.ಡಿ.ದೇವೇಗೌಡ ಮಲ್ಲಿಕಾರ್ಜುನ ಖರ್ಗೆ ವಿಜಯಕುಮಾರ್ ಡಿ.ಬಿ.ಸದಾನಂದಗೌಡ

ಬೆಂಗಳೂರು, ಮೇ 22(ಕೆಎಂಶಿ)– ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ತೆರವಾಗಲಿರುವ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಜೂನ್ 18ರಂದು ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ.

ದೇವೇಗೌಡ ಹಾಗೂ ಖರ್ಗೆ ಅವರಲ್ಲದೆ, ಬಿಜೆಪಿಯ ಈರಣ್ಣ ಕಡಾಡಿ, ಕೆ.ನಾರಾಯಣ್ ಅವರ ಸದಸ್ಯತ್ವ ಅವಧಿಯೂ ಜೂನ್ 25ಕ್ಕೆ ಪೂರ್ಣಗೊಳ್ಳಲಿದೆ. ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ದ್ವೈವಾರ್ಷಿಕ ಚುನಾವಣೆಯಲ್ಲಿ ನಾಲ್ಕು ಸ್ಥಾನಗಳಿಗೆ ನಾಮಪತ್ರ ಸಲ್ಲಿಸಲು ಜೂನ್ 8 ಕೊನೆಯ ದಿನ, ನಾಮಪತ್ರ ಹಿಂಪಡೆಯಲು ಜೂನ್ 11, ಜೂನ್ 18ರಂದು ಮತದಾನ ನಡೆದು ಅಂದೇ ಸಂಜೆ ಫಲಿತಾಂಶ ಪ್ರಕಟಗೊಳ್ಳಲಿದೆ. ವಿಧಾನಸಭೆಯಲ್ಲಿನ ಸಂಖ್ಯಾಬಲದ ಆಧಾರದ ಮೇಲೆ ಕಾಂಗ್ರೆಸ್ ಮೂರು ಹಾಗೂ ಬಿಜೆಪಿ ಒಂದು ಸ್ಥಾನದಲ್ಲಿ ಸುಲಭ ಜಯ ಗಳಿಸಬಹುದಾಗಿದೆ.

ಕಳೆದ ಬಾರಿ ಕಾಂಗ್ರೆಸ್ ಬೆಂಬಲದೊಂದಿಗೆ ಜೆಡಿಎಸ್‌ನಿಂದ ದೇವೇಗೌಡ ರಾಜ್ಯಸಭೆ ಪ್ರವೇಶಿಸಿದ್ದರು. ಆದರೆ, ಈ ಬಾರಿ ಅವರಿಗೆ ರಾಜ್ಯಸಭೆ ಪ್ರವೇಶಿಸುವಷ್ಟು ಸಂಖ್ಯಾಬಲ ರಾಜ್ಯ ವಿಧಾನಸಭೆಯಲ್ಲಿ ಜೆಡಿಎಸ್‌ಗೆ ಲಭ್ಯವಿಲ್ಲ.

ಕಾಂಗ್ರೆಸ್‌ನ ಮೂರು ಸ್ಥಾನಗಳಿಗಾಗಿ ಪಕ್ಷದಲ್ಲಿ ಭಾರೀ ಪೈಪೋಟಿ ನಡೆದಿದೆ. ಮಲ್ಲಿಕಾರ್ಜುನ ಖರ್ಗೆ ಅವರ ಪುನರ್ ಆಯ್ಕೆಗೆ ಪಕ್ಷ ತೀರ್ಮಾನ ಕೈಗೊಳ್ಳಬಹುದು. ಉಳಿದಂತೆ ಎರಡು ಸ್ಥಾನಗಳಿಗೆ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಡಿ.ಬಿ. ಶ್ರೀನಿವಾಸ್ (ಹಿಂದುಳಿದ ವರ್ಗ), ಬಿ.ಜೆ. ವಿಜಯಕುಮಾರ್ (ಒಕ್ಕಲಿಗ, ಮೈಸೂರು) ಹೆಸರುಗಳು ಪ್ರಬಲವಾಗಿ ಕೇಳಿಬರುತ್ತಿವೆ.

ರಾಜ್ಯದ ಜಲವಿವಾದ ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಸಮರ್ಥ ವಾದ ಮಂಡಿಸುತ್ತಿರುವ ಮೋಹನ್ ಕಾತರಕಿ (ಲಿಂಗಾಯತ), ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಹೆಸರುಗಳೂ ಚರ್ಚೆಯಲ್ಲಿವೆ. ಈ ಮಧ್ಯೆ, ಎಐಸಿಸಿ ವಕ್ತಾರ ಪವನ್ ಖೇಡ ಅವರನ್ನು ▶ 6ನೇ ಪುಟಕ್ಕೆ

ದುಬಾರೆ ದುರಂತ; ಇಬ್ಬರು ಅರಣ್ಯ ಅಧಿಕಾರಿಗಳ ವಿರುದ್ಧ ಉಪ ಲೋಕಾಯುಕ್ತ ಕೇಸ್



ಮಡಿಕೇರಿ: ದುಬಾರೆ ಆನೆ ಕ್ಯಾಂಪ್‌ನಲ್ಲಿ ಪ್ರವಾಸಿ ಮಹಿಳೆ ಹಾಗೂ ಸಾಕಾನೆ ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅರಣ್ಯ ಅಧಿಕಾರಿಗಳ ವಿರುದ್ಧ ಉಪ ಲೋಕಾಯುಕ್ತ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದಾರೆ.

ಸೋಮವಾರಪೇಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್ ಎ. ಹಾಗೂ ಕುಶಾಲನಗರ ಪ್ರಾದೇಶಿಕ ವಲಯದ ಅರಣ್ಯಾಧಿಕಾರಿ ರಕ್ಷಿತ್ ವಿರುದ್ಧ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಪ್ರಕರಣ ದಾಖಲಿಸಿದ್ದಾರೆ. ಮೇ 18ರಂದು ದುಬಾರೆ ಸಾಕಾನೆ ಶಿಬಿರದಲ್ಲಿ ಎರಡು ಆನೆಗಳ ನಡುವೆ ನಡೆದ ಕಾದಾಟದ ವೇಳೆ ತಮಿಳುನಾಡಿನ 33 ವರ್ಷದ ಪ್ರವಾಸಿ ಮಹಿಳೆ ಜುನೇಷ ಎಸ್ ಮೃತಪಟ್ಟಿದ್ದಳು. ಇದೇ ಘಟನೆ ವೇಳೆ ಜೈ ಮಾರ್ತಾಂಡ ಎಂಬ ಸಾಕಾನೆ ಕೂಡ ಗಂಭೀರವಾಗಿ ಗಾಯಗೊಂಡು ಬಳಿಕ ಸಾವನ್ನಪ್ಪಿತ್ತು. ಈ ಘಟನೆ ಅರಣ್ಯ ಅಧಿಕಾರಿಗಳ ವೈಫಲ್ಯ ಮತ್ತು ನಿರ್ಲಕ್ಷ್ಯದ ಪರಿಣಾಮವಾಗಿದೆ ಎಂದು ನ್ಯಾಯಮೂರ್ತಿ ಫಣೀಂದ್ರ ಅಭಿಪ್ರಾಯಪಟ್ಟಿದ್ದಾರೆ. ದುಬಾರೆ ಸಾಕಾನೆ ಶಿಬಿರದಲ್ಲಿ ಹಲವು ಗಂಭೀರ ಸಮಸ್ಯೆಗಳಿದ್ದು, ಅವುಗಳನ್ನು ತಕ್ಷಣ ಪರಿಹರಿಸಬೇಕಿದೆ ಎಂದು ಸೂಚಿಸಿದ್ದಾರೆ. ▶ 6ನೇ ಪುಟಕ್ಕೆ

15 ದಿನದೊಳಗೆ ಸಂಪುಟ ಪುನರ್ರಚಿಸಿ

- 30ಕ್ಕೂ ಅಧಿಕ ಶಾಸಕರು ಪಟ್ಟು
- ಮೇ 28 ಇಲ್ಲವೆ 29ಕ್ಕೆ ವರಿಷ್ಠರ ಭೇಟಿ ನಿರ್ಧಾರ
- ಬೇಡಿಕೆ ಈಡೇರದಿದ್ದರೆ ಬೇರೆ ಯೋಜನೆ ಇದೆ: ಬೇಳೂರು ಗೋಪಾಲಕೃಷ್ಣ



ಗೋಪಾಲಕೃಷ್ಣ

ಶಿವಮೊಗ್ಗ, ಮೇ 22–ಕಾಂಗ್ರೆಸ್ ಪಕ್ಷದ ಕನಿಷ್ಠ 30–35 ಶಾಸಕರು ಮೇ 28 ಅಥವಾ 29ರೊಳಗೆ ರಾಷ್ಟ್ರ ರಾಜಧಾನಿಗೆ ಪ್ರಯಾಣ ಬೆಳೆಸಲಿದ್ದು, ಅವರಲ್ಲಿ ಸುಮಾರು 20 ಜನರಿಗೆ ಸಚಿವ ಸ್ಥಾನ ನೀಡುವಂತೆ ಹಾಗೂ ಕೂಡಲೇ ಸಂಪುಟ ಪುನರ್ ರಚನೆ ಆಗಬೇಕೆಂದು ಪಕ್ಷದ ನಾಯಕತ್ವದ ಮೇಲೆ ಒತ್ತಡ ಹೇರಲಿದ್ದೇವೆ ಎಂದು ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ಶುಕ್ರವಾರ ಹೇಳಿದ್ದಾರೆ.

ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳನ್ನು ಪೂರೈಸಿದ 15 ದಿನಗಳ ಒಳಗೆ ಸಂಪುಟ ಪುನಾರಚನೆ ನಡೆಯಬೇಕೆಂದು ಒತ್ತಾಯಿಸಿದ ಅವರು, ಸಂಪುಟ ಪುನರ್ ರಚನೆ ನಡೆಯದಿದ್ದರೆ ಮತ್ತು ಹೊಸ ಮುಖಗಳನ್ನು ಸಂಪುಟಕ್ಕೆ ಸೇರಿಸಿಕೊಳ್ಳದಿದ್ದರೆ. ಅವರು ಬಲವಾದ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಎಚ್ಚರಿಸಿದರು.

ಕೇರಳ ಮುಖ್ಯಮಂತ್ರಿ ಆಯ್ಕೆಯಾದ ನಂತರ ದೆಹಲಿಗೆ ಹೋಗಲು ಮೊದಲೇ ನಿರ್ಧರಿಸಲಾಗಿತ್ತು. ನಂತರ, ನಾವು ಎರಡು–ಮೂರು ದಿನಗಳಲ್ಲಿ ಸಭೆ ಸೇರುತ್ತೇವೆ ಮತ್ತು ನಮ್ಮಲ್ಲಿ 30–35 ಶಾಸಕರು ದೆಹಲಿಗೆ ಹೋಗುತ್ತೇವೆ. ಈ ಬಾರಿ, ಸರ್ಕಾರ ಅಧಿಕಾರ ವಹಿಸಿಕೊಂಡು 3 ವರ್ಷ ಕಳೆದಿವೆ. ಆದರೆ ಇನ್ನೂ ಯಾರೂ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚಿಸುತ್ತಿಲ್ಲವಾದ್ದರಿಂದ ಮಾಡು ಇಲ್ಲವೇ ಮಡಿ ಪರಿಸ್ಥಿತಿ ನಮ್ಮಲ್ಲಿದೆ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಸಚಿವ ಸಂಪುಟ ಪುನರ್‌ರಚನೆ ಮಾಡಲಾಗುವುದು, 15 ಹೊಸಬರನ್ನು ಸೇರಿಸಿಕೊಳ್ಳಲಾಗುವುದು ಎಂದು ಹೇಳಿದ್ದಾಗಿ ತಿಳಿಸಿದರು. ಈಗ ಸಚಿವರಾಗಿರುವವರು 3 ವರ್ಷ ಅಧಿಕಾರ ಅನುಭವಿಸಿರುವುದರಿಂದ ಹೊಸ 20 ಜನರಿಗೆ ಸಚಿವ ಸ್ಥಾನ ನೀಡುವಂತೆ ನಾವು ವಿನಂತಿಸಿದ್ದೇವೆ. ಆದ್ದರಿಂದ ನಾವು ಮೇ 28 ಅಥವಾ 29ರೊಳಗೆ ದೆಹಲಿಗೆ ಹೋಗಲು ನಿರ್ಧರಿಸಿದ್ದೇವೆ. ಮೊದಲು, ನಮ್ಮಲ್ಲಿ 25 ಜನರು ಹೋಗಿದ್ದರು. ಈಗ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ನಮ್ಮಲ್ಲಿ ಸುಮಾರು 35 ಜನರು ಹೋಗಬಹುದು ಎಂದು ಅವರು ಹೇಳಿದರು.

ಈಗ ಇರುವವರೇ ಸಚಿವರಾಗಿ ಮುಂದುವರಿಯಬೇಕು ಎಂದು ಏನೂ ಇಲ್ಲ. ನಾವು ಅವರಿಗೆ ಮೂರು ವರ್ಷಗಳ ಕಾಲಾವಕಾಶ ನೀಡಿದ್ದೇವೆ. ಎರಡೂವರೆ ವರ್ಷಕ್ಕಿಂತ ಆರು ತಿಂಗಳು ಹೆಚ್ಚಿಗೆ ಅವರು ಸಚಿವರಾಗಿ ಮುಂದುವರಿದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಲವಾಗಿ ಉಳಿಯಬೇಕಾದರೆ, ಸಚಿವ ಸಂಪುಟವನ್ನು ಪುನರ್ ರಚಿಸುವ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಮುಖ್ಯಮಂತ್ರಿ ಬದಲಾವಣೆ ವಿಷಯ ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟದ್ದು, ▶ 6ನೇ ಪುಟಕ್ಕೆ

ಜಾನುವಾರುಗಳಿಗೂ 'ಆಧಾರ್' ಭಾಗ್ಯ!

ಬಯೋಮೆಟ್ರಿಕ್ ಆಧಾರಿತ ಗುರುತು ವ್ಯವಸ್ಥೆ ಜಾರಿಗೆ ಸರ್ಕಾರ ನಿರ್ಧಾರ



ಬೆಂಗಳೂರು: ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ರೈತರ ಜೀವನಾಡಿಯಾಗಿರುವ ಜಾನುವಾರುಗಳಿಗೂ ಆಧಾರ್ ಮಾದರಿಯ ಬಯೋಮೆಟ್ರಿಕ್ ಗುರುತಿನ ವ್ಯವಸ್ಥೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ.

ಕರ್ನಾಟಕದಲ್ಲಿ ಪಶುಸಂಗೋಪನಾ ಕ್ಷೇತ್ರದಲ್ಲಿ ಮಹತ್ವದ ಡಿಜಿಟಲ್ ಕ್ರಾಂತಿಗೆ ರಾಜ್ಯ ಸರ್ಕಾರ ಮುಂದಾಗಿದ್ದು, ಶೀಘ್ರದಲ್ಲೇ ಜಾನುವಾರುಗಳಿಗೆ 'ಆಧಾರ್' ಮಾದರಿಯ ಡಿಜಿಟಲ್ ಗುರುತು ವ್ಯವಸ್ಥೆ ಜಾರಿಗೆ ಬರಲಿದೆ. ಈ ಹೊಸ ವ್ಯವಸ್ಥೆಯಲ್ಲಿ ಜಾನುವಾರುಗಳ ಮೂಗಿನ ಭಾಗದ ವೈಶಿಷ್ಟ್ಯಪೂರ್ಣ ಗುರುತುಗಳನ್ನು ಆಧರಿಸಿ ಬಯೋಮೆಟ್ರಿಕ್ ▶ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆ ಸುತ್ತಮುತ್ತ ಸ್ವಚ್ಛತೆ ಸವಾಲು; ಮೈಸೂರು ಪಾಲಿಕೆಯಿಂದ ನಾಯಿ ಎಚ್ಚರಿಕಾ ಸಂದೇಶ!

'ಇಲ್ಲಿ ಕಸ ಹಾಕುವವರು ನಮ್ಮ ಸಂತತಿಯ ಯಜಮಾನರು ಮತ್ತು ನಮ್ಮ ಕುಟುಂಬದ ಮುಖ್ಯಸ್ಥರು'



ಮೈಸೂರಿನ ಸಿಎಂ ಸಿದ್ದರಾಮಯ್ಯ ಅವರ ಮನೆ ಬಳಿಯ ಶಾರದಾದೇವಿನಗರದಿಂದ ಕುವೆಂಪುನಗರಕ್ಕೆ ಹೋಗುವ ಜೋಡಿ ರಸ್ತೆಯಲ್ಲಿ ಕಸ ಸುರಿಯುವುದನ್ನು ತಡೆಗಟ್ಟಲು ಪಾಲಿಕೆ ರೂಪಿಸಿರುವ ವಿನೂತನ ಜಾಗೃತಿ ಹಾಗೂ ದಂಡಾಸ್ತ್ರದ ಎಚ್ಚರಿಕೆ.

- ಕಸ ಹಾಕುವವರ ಮೇಲೆ ನಿಂದನೆ ಅಸ್ತ್ರ!
- 500ರಿಂದ 50 ಸಾವಿರ ದಂಡದ ಎಚ್ಚರಿಕೆ
- ಸದ್ಯಕ್ಕೆ ಕಸ ಸುರಿಯುವುದನ್ನು ಕೈಬಿಟ್ಟ ನಾಗರಿಕರು

ಮೈಸೂರು, ಮೇ22(ಬಿಎಲ್‌ಯು)– ಮೈಸೂರಲ್ಲಿ ಕಂಡ ಕಂಡಲ್ಲಿ ಕಸ ಸುರಿಯುವುದನ್ನು ತಡೆಗಟ್ಟಲು ಮೈಸೂರು ನಗರ ಪಾಲಿಕೆ ಹರಸಾಹಸ ಪಡುತ್ತಿದ್ದಾರೆ. ಸಿಸಿ ಕ್ಯಾಮರಾ ಹಾಕಿದ್ದಾಯ್ತು... ದಂಡ ವಿಧಿಸಿದ್ದು ಆಯ್ತು... ಕಾದು ಕುಳಿತು ಬುದ್ಧಿ ಹೇಳಿದ್ದು ಆಯ್ತು... ಮೂತ್ರ ವಿಸರ್ಜಿಸುವವರಿಗೆ ಮುಖಕ್ಕೆ ಹೊಡೆದಂತೆ ಕನ್ನಡಿ ಇಟ್ಟಿದ್ದು ಆಯ್ತು... ಹೀಗೆ ಅವಿರತವಾಗಿ ವಿನೂತನ ಹಾಗೂ ಪರಿಣಾಮಕಾರಿ ಜಾಗೃತಿ ಕಾರ್ಯಕ್ರಮ ಕೈಗೊಳ್ಳುತ್ತಾ ಬಂದಿದೆ. ಆದರೆ ಇದಾವುದೂ ನಿರೀಕ್ಷಿತ ಫಲ ನೀಡಿಲ್ಲ. ಹಾಗಾಗಿ ನಾಯಿ ಮೂಲಕ ಎಚ್ಚರಿಕಾ ಸಂದೇಶ ನೀಡುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೈಸೂರಿನ ಶಾರದಾದೇವಿನಗರದ ಮನೆ ಬಳಿ ಕಸ ಸುರಿಯುವುದನ್ನು ತಡೆಗಟ್ಟಲು ಮತ್ತೆ ಹರಸಾಹಸಕ್ಕಿಳಿದಿದೆ. ಪ್ರತಿದಿನ ಬೆಳಿಗ್ಗೆ ಪೌರ ಕಾರ್ಮಿಕರು ಪ್ರತಿ ಮನೆ ಮನೆಗೆ ಬಂದು ಕಸ ಸಂಗ್ರಹಿಸುತ್ತಿದ್ದರೂ ಕೆಲವರು ರಸ್ತೆಯಲ್ಲಿ ಕಸ ಸುರಿಯುವುದನ್ನು ಕುಲಕಸುಬು ಮಾಡಿಕೊಂಡಿದ್ದಾರೆ. ಎಷ್ಟೇ ಹೇಳಿದರೂ, ಜಾಗೃತಿ ಮೂಡಿಸುತ್ತಿದ್ದರೂ ಹೇಸಿಗೆ ಮಾಡುವ ಜನರಿಗೆ ಬುದ್ಧಿ ಬಂದಂತಿಲ್ಲ.

> “ನಗರಪಾಲಿಕೆ ಕೈಗೊಂಡಿರುವ ಈ ಕ್ರಮದಿಂದ ಸದ್ಯ ಯಾರೂ ಇಲ್ಲಿ ಈಗ ಕಸ ಸುರಿಯುತ್ತಿಲ್ಲ. ಪಾಲಿಕೆ ಮೂಡಿಸುವ ಜಾಗೃತಿ ಹಾಗೂ ದಂಡಾಸ್ತ್ರಕ್ಕೆ ಹೆದರಿಯೋ, ಎಚ್ಚೆತ್ತೋ ಇಲ್ಲ ನಾಚಿಕೆಯಿಂದಲೋ ಕಸ ಸುರಿಯುವುದನ್ನು ಬಿಟ್ಟಿದ್ದಾರೆ. ಮೈಸೂರು ನಗರದಲ್ಲಿ ಎಲ್ಲೆಲ್ಲಿ ಹೀಗೆ ಕಸ ಹಾಕುತ್ತಾರೋ ಅಲ್ಲೆಲ್ಲಾ ಪ್ರತಿಯೊಂದು ಸ್ಥಳಗಳಲ್ಲಿ ಇದೇ ರೀತಿಯ ಜಾಗೃತಿ, ಎಚ್ಚರಿಕೆ ಕ್ರಮವನ್ನ ನಗರ ಪಾಲಿಕೆ ಸಿಬ್ಬಂದಿ ಕೈಗೊಂಡಿದ್ದರೆ ನಗರವೂ ಸ್ವಚ್ಛವಾಗಿರುತ್ತಿತ್ತು. ಉತ್ತಮ ಆರೋಗ್ಯ, ನಗರದ ಸೌಂದರ್ಯವೂ ಹೆಚ್ಚಾಗುತ್ತಿತ್ತು. ಈಗ ನೋಡಿ ಮುಖ್ಯಮಂತ್ರಿಗಳ ಭಯದಿಂದಾಗಿ ಅವರ ಮನೆಯ ಸುತ್ತಲೂ ಸ್ವಚ್ಛತೆಗೆ ಆದ್ಯತೆ ನೀಡಿದ್ದಾರೆ ಎಂದು ಜನ ಮಾತಾಡಿಕೊಳ್ಳುತ್ತಿದ್ದಾರೆ.

ಮೈಸೂರಿನ ಶಾರದಾದೇವಿನಗರದಿಂದ ಕುವೆಂಪುನಗರಕ್ಕೆ ಹೋಗುವ ಹೈಟೆನ್ಷನ್ ವೈರ್ ಹಾದು ಹೋಗಿರುವ ಜೋಡಿ ರಸ್ತೆಯಲ್ಲಿ ಭಾರೀ ಪ್ರಮಾಣದಲ್ಲಿ ಕಸ ಸುರಿಯಲಾಗುತ್ತಿದೆ. ರಸ್ತೆ ಪಕ್ಕದಲ್ಲಿ ಇರುವ ಪಾಲಿಕೆ ಖಾಲಿ ಜಾಗದಲ್ಲೂ ಕಸ ಮಾತ್ರವಲ್ಲದೆ ಕಟ್ಟಡದ ತ್ಯಾಜ್ಯಗಳನ್ನು ಕೂಡ ಸುರಿಯಲಾಗುತ್ತಿದೆ. ಪೌರ ಕಾರ್ಮಿಕರು ಪ್ರತಿನಿತ್ಯ ಬೆಳಗ್ಗೆ ಈ ಕಸ ತೆರವು ಮಾಡಿದರೂ ಸಂಜೆ ವೇಳೆಗೆ ಮತ್ತೆ ಕಸದ ರಾಶಿಯೇ ಬಿದ್ದಿರುತ್ತಿತ್ತು. ಹಾಗಾಗಿ ಈ ರಸ್ತೆಯ ಕಸ ವಿಲೇವಾರಿ ಪೌರಕಾರ್ಮಿಕರಿಗೆ ದೊಡ್ಡ ತಲೆನೋವಾಗಿತ್ತು. ಇದರಿಂದ ಈ ರಸ್ತೆಯಲ್ಲಿ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿತ್ತು. ಅಲ್ಲದೆ ನಗರದ ಟಿ.ಕೆ.ಬಡಾವಣೆಯಿಂದ ರಿಂಗ್ ರಸ್ತೆ ಸೇರಿದಂತೆ ಇತರೆಡೆ ಹೋಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ▶ 6ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 23 ಮೇ 2026

ಮೈಸೂರಲ್ಲಿ ಎಂಐಟಿ ಕಾನೂನು ಕಾಲೇಜು ಆರಂಭ



ಡಾ.ಹೇಮಂತ್‌ಕುಮಾರ್

ಮೈಸೂರು, ಮೇ 22(ಜಿಎ)– ಮಹಾರಾಜ ಎಜುಕೇಷನ್ ಟ್ರಸ್ಟ್ ವತಿಯಿಂದ ನೂತನ ಸಂಸ್ಥೆ ಎಂ.ಐ.ಟಿ ಕಾನೂನು ಕಾಲೇಜನ್ನು ಹಳೇ ಕೆಸರೆಯ ಎ ಂ ಐ ಟಿ ಎ ಂ ಕ್ಯಾಂಪಸ್‌ನಲ್ಲಿ ಆರಂಭಿಸಲಾಗಿದೆ ಎಂದು ಎಂಐಟಿ ಕಾಲೇಜಿನ ಉಪಾಧ್ಯಕ್ಷ ಡಾ.ಜಿ. ಹೇಮಂತ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ಶಿಕ್ಷಣಕ್ಕೆ ಹೊಸ ಆಯಾಮ ನೀಡುವ ನಿಟ್ಟಿನಲ್ಲಿ ನೂತನ ಶೈಕ್ಷಣಿಕ ಸಾಲಿನ 5 ವರ್ಷಗಳ ಸಂಯೋಜಿತ ಬಿಬಿಎ ಎಲ್‌ಎಲ್‌ಬಿ ಕೋರ್ಸ್ ಅಧಿಕೃತವಾಗಿ ಪ್ರವೇಶಾತಿ ಆಹ್ವಾನಿಸಲಾಗಿದ್ದು, ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು. ಎಂಐಟಿ ಸಂಸ್ಥೆಯು ನವದೆಹಲಿಯ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಮಾನ್ಯತೆ ಪಡೆದಿದ್ದು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡಿದೆ. ರಾಜ್ಯ ಸರ್ಕಾರದಿಂದ ಅನುಮೋದಿಸಲ್ಪಟ್ಟಿದೆ. ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಕೈಗೆಟಕುವ ಶುಲ್ಕದಲ್ಲಿ ಗುಣಮಟ್ಟದ ಕಾನೂನು ಶಿಕ್ಷಣವನ್ನು ಇಲ್ಲಿ ನೀಡಲಾಗುತ್ತದೆ ಎಂದರು.

ಹಾಸ್ಟೆಲ್ ಸೌಲಭ್ಯ, ಸುರಕ್ಷಿತ ಸಾರಿಗೆ ವ್ಯವಸ್ಥೆ

ಕಾನೂನು ಪದವಿಗೆ ಸೇರ ಬಯಸುವವರು ದ್ವಿತೀಯ ಪಿಯುಸಿ ಅಥವಾ ತತ್ಸಮಾನ (10+2) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಹಾಸ್ಟೆಲ್, ಸಾರಿಗೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. 100ಕ್ಕೂ ಹೆಚ್ಚು ಬಸ್ ನೆರವಿನೊಂದಿಗೆ ಮೈಸೂರಿನ ಸುತ್ತಮುತ್ತಲಿನ ಪ್ರಮುಖ ಪ್ರದೇಶಗಳಾದ ಮದ್ದೂರು, ಚನ್ನಪಟ್ಟಣ, ಮಂಡ್ಯ, ಚಾಮರಾಜನಗರ, ಪಾಂಡವಪುರ, ಮಳವಳ್ಳಿ, ಬನ್ನೂರು, ಕೆ.ಆರ್.ಎಸ್. ಕೆ.ಆರ್.ನಗರ, ಕೆ.ಆರ್.ಪೇಟೆ, ಹುಣಸೂರು, ನಂಜನಗೂಡು, ಕೊಳ್ಳೇಗಾಲ, ಹೆಚ್.ಡಿ.ಕೋಟೆ, ಟಿ.ನರಸೀಪುರ, ಪಿರಿಯಾಪಟ್ಟಣ, ಗುಂಡ್ಲುಪೇಟೆ, ನಾಗಮಂಗಲ, ಅಕ್ಕಿ ಹೆಬ್ಬಾಳು, ಮಿರ್ಲೆ ಮತ್ತು ಮೈಸೂರಿನ ಎಲ್ಲಾ ಸ್ಥಳೀಯ ಪ್ರದೇಶಗಳಿಗೆ ಸುರಕ್ಷಿತ ಸಾರಿಗೆ ಸೌಕರ್ಯ ಕಲ್ಪಿಸಲಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಎಂಐಟಿ ಕಾನೂನು ಕಾಲೇಜಿನ ಕಾರ್ಯದರ್ಶಿ ಡಾ.ವೈ.ಟಿ.ಕೃಷ್ಣೇಗೌಡ, ಆಡಳಿತಾಧಿಕಾರಿ ಅನಿರುದ್ಧ್ ಉಪಸ್ಥಿತರಿದ್ದರು.

ಸಾರಿಗೆ ಮುಷ್ಕರಕ್ಕೆ ವಿಧಿಸಿದ್ದ ನಿರ್ಬಂಧ ಜೂ.2ರವರೆಗೆ ವಿಸ್ತರಣೆ

ರಾಜೀ ಸಂಧಾನದ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಿ: ಹೈಕೋರ್ಟ್



ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಮೇ 20ರಿಂದ ಕರೆದಿದ್ದ ಮುಷ್ಕರವನ್ನು ನಿರ್ಬಂಧಿಸಿ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಜೂನ್ 2ರವರೆಗೆ ವಿಸ್ತರಿಸಿರುವ ಹೈಕೋರ್ಟ್, ರಾಜೀ ಸಂಧಾನದ ಮೂಲಕ ವೇತನ ಪರಿಷ್ಕರಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಸರ್ಕಾರ ಮತ್ತು ಜಂಟಿ ಕ್ರಿಯಾ ಸಮಿತಿಗೆ ಮತ್ತೊಮ್ಮೆ ಸಲಹೆ ನೀಡಿದೆ.

ಮುಷ್ಕರ ಪ್ರಶ್ನಿಸಿ ಬೆಂಗಳೂರಿನಲ್ಲಿ ಮನೆಗೆಲಸ ಮಾಡುತ್ತಿರುವ ಸಿ. ವೇದವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ. ಶ್ರೀಧರ ಎಂಬವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಹಾಗೂ ನ್ಯಾಯಮೂರ್ತಿ ಡಾ. ಕೆ.ಮನ್ಮಥ ರಾವ್ ಅವರಿದ್ದ ರಜಾಕಾಲದ ವಿಭಾಗೀಯ ನ್ಯಾಯಪೀಠ ಈ ಆದೇಶ ಮಾಡಿತು.

ಜಂಟಿ ಕ್ರಿಯಾ ಸಮಿತಿ ಕರೆದಿದ್ದ ಮುಷ್ಕರವನ್ನು ಆಕ್ಷೇಪಿಸಿ ಸಾರಿಗೆ ನೌಕರರ ವೇತನ ಹೆಚ್ಚಳ ಸಂಬಂಧ ರಾಜೀ ಸಂಧಾನ ಪ್ರಕ್ರಿಯೆ ನಡೆಯುತ್ತಿದೆ. ಮೇ 25ರಂದು ಸಮಾಲೋಚನಾ ಸಭೆ ನಡೆಸಲಿದ್ದು, ಅಂದು ಸಾರಿಗೆ ನಿಗಮಗಳ 9 ಮಂದಿ ನಿರ್ದೇಶಕರು ಭಾಗವಹಿಸಲಿದ್ದಾರೆ. ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಸಮಾಲೋಚಿಸಲಾಗುತ್ತದೆ ಎಂದು ಸರ್ಕಾರಿ ವಕೀಲರು ತಿಳಿಸಿದ್ದಾರೆ. ಸಂಧಾನ ಸಭೆಯಲ್ಲಿ ಜಂಟಿ ಕ್ರಿಯಾಸಮಿತಿ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಸಮಿತಿ ಪರ ವಕೀಲರು ತಿಳಿಸಿದ್ದಾರೆ. ಆದ್ದರಿಂದ, ಮುಷ್ಕರ ನಡೆಸ ಬಾರದು. ನೌಕರರ ಮತ್ತು ಸರ್ಕಾರದ ನಡುವಿನ ತಿಕ್ಕಾಟದಿಂದ ಜನಸಾಮಾನ್ಯರಿಗೆ ತೊಂದರೆಯಾಗಬಾರದು. ಮಾತು ಕತೆ ಮೂಲಕವೇ ವೇತನ ಪರಿಷ್ಕರಣೆ ವಿವಾದವನ್ನು ಬಗೆಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ನ್ಯಾಯಪೀಠ, ವಿಚಾರಣೆಯನ್ನು ಜೂ. 2ಕ್ಕೆ ಮುಂದೂಡಿತು.

ನಾಳೆ ವೀರಶೈವ ಲಿಂಗಾಯತ ಮಹಾಸಭಾದ ನಗರ ಅಧ್ಯಕ್ಷ, ನಿರ್ದೇಶಕ ಸ್ಥಾನಕ್ಕೆ ಚುನಾವಣೆ

ಮೈಸೂರು, ಮೇ 22(ಜಿಎ)–ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಗರಪಾಲಿಕೆ ವ್ಯಾಪ್ತಿಯ ಅಧ್ಯಕ್ಷರು ಹಾಗೂ ನಿರ್ದೇಶಕರ ಸ್ಥಾನಕ್ಕಾಗಿ ಮೇ 24ರಂದು ಬೆಳಗ್ಗೆ 8ರಿಂದ ಸಂಜೆ 4 ರವರೆಗೆ ಹಾರ್ಡ್ವಿಕ್ ಶಾಲೆಯಲ್ಲಿ ಚುನಾವಣೆ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಉಪ ಚುನಾವಣಾಧಿಕಾರಿ ಬಿ.ಆರ್.ರಮಾಕಾಂತ್ ಈ ವಿಷಯ ತಿಳಿಸಿ. ಮತದಾರರು ತಮ್ಮ ಗುರುತು ಸಾಬೀತುಪಡಿಸುವ ಮತದಾನದ ವೇಳೆ ಆಧಾರ್ ಕಾರ್ಡ್, ಪಾನ್‌ಕಾರ್ಡ್, ಡಿಎಲ್, ಪಡಿತರ ಚೀಟಿ ಮೊದಲಾದವುಗಳಲ್ಲಿ ಯಾವುದಾದರೊಂದು ಗುರುತಿನ ಚೀಟಿ ತಪ್ಪದೇ ತೋರಿಸಬೇಕು. ಸುಮಾರು 3173 ಮತದಾರರಿದ್ದು, ಮತದಾರರ ಪಟ್ಟಿಯನ್ನು ಜೆಎಸ್‌ಎಸ್ ವಿದ್ಯಾಪೀಠ ಬಳಿಯ ಅಖಿಲ ಭಾರತ ವೀರಶೈವ ಮಹಾಸಭಾದಲ್ಲಿ ಪ್ರಕಟಿಸಲಾಗಿದೆ. ಮತ ಎಣಿಕೆ ನಂತರ ವಿಜಯೋತ್ಸವಕ್ಕೆ ಅವಕಾಶವಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಸಹಾಯಕ ಚುನಾವಣಾಧಿಕಾರಿಗಳಾದ ಆರ್. ನಾಗೇಶ್, ನಾಗಸುಂದರ್ ಉಪಸ್ಥಿತರಿದ್ದರು.

51 ಸಾವಿರ ಅತಿಥಿ ಶಿಕ್ಷಕರ ನೇಮಕಾತಿಗೆ ಸರ್ಕಾರ ಆದೇಶ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 51 ಸಾವಿರ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಕೃತ ಆದೇಶ ಹೊರಡಿಸಿದೆ.

2026–27ನೇ ಶೈಕ್ಷಣಿಕ ಸಾಲು ಮೇ ತಿಂಗಳಿನಿಂದಲೇ ಆರಂಭವಾಗುತ್ತಿರುವುದರಿಂದ, ಶಾಲೆಗಳ ಆರಂಭದಲ್ಲೇ ಶಿಕ್ಷಕರ ಕೊರತೆಯಾಗದಂತೆ ತಡೆಯಲು ಈ ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಪ್ರಾಥಮಿಕ ಶಾಲೆಗಳಿಗೆ 40 ಸಾವಿರ, ಪ್ರೌಢಶಾಲೆಗಳು 11 ಸಾವಿರ ಶಿಕ್ಷಕರ ನೇಮಕಾತಿಗೆ ಅನುಮತಿ ಸಿಕ್ಕಿದೆ.

ಈ ನೇಮಕಾತಿಯು ಕೇವಲ ತಾತ್ಕಾಲಿಕ ವ್ಯವಸ್ಥೆಯಾಗಿದ್ದು, ಖಾಯಂ ಶಿಕ್ಷಕರು ನೇಮಕವಾಗುವವರೆಗೆ ಅಥವಾ ಪ್ರಸ್ತುತ ಶೈಕ್ಷಣಿಕ ವರ್ಷದ (2026–27) ಅಂತ್ಯದವರೆಗೆ ಮಾತ್ರ ಅನ್ವಯಿಸುತ್ತದೆ.

ಶೈಕ್ಷಣಿಕ ವರ್ಷದ ಆರಂಭದಲ್ಲೇ ಅತಿಥಿ ಶಿಕ್ಷಕರು ಲಭ್ಯವಾಗುವುದರಿಂದ ವಿದ್ಯಾರ್ಥಿಗಳ ನಿರಂತರ ಕಲಿಕೆಗೆ ಮತ್ತು ಶಾಲಾ ಚಟುವಟಿಕೆಗಳ ಸುಗಮ ನಿರ್ವಹಣೆಗೆ ಅನುಕೂಲವಾಗಲಿದೆ.

ಅತಿಥಿ ಶಿಕ್ಷಕರ ಗೌರವಧನ ಪಾವತಿಗೆ ಅಗತ್ಯವಿರುವ ಅನುದಾನದ ವಿವರ ಹಾಗೂ ಜಿಲ್ಲಾ, ತಾಲೂಕುವಾರು ಹಂಚಿಕೆಯ ಸಂಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರ ಸೂಚಿಸಿದೆ.


ನಿಧನ



ಎಂ.ರಾಜಣ್ಣ

ಮೈಸೂರಿನ ಬೋಗಾದಿಯಲ್ಲಿರುವ ಮಂಜುನಾಥ ಗ್ಯಾಸ್ ಏಜೆನ್ಸಿ ನೌಕರ ಹಾಗೂ ಟಿ.ಕೆ.ಬಡಾವಣೆ ನಿವಾಸಿ ಎಂ.ರಾಜಣ್ಣ (58) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಜನತಾ ನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಪ್ರೇಮ್‌ಕುಮಾರ್



ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಟೆಂಪ್ಟೇಷನ್ಸ್ ಫಾಸ್ಟ್‌ಫುಡ್ ಮಾಲೀಕರು ಹಾಗೂ ವಿಜಯನಗರ 1ನೇ ಹಂತದ ನಿವಾಸಿ ಕೆ.ಪ್ರೇಮ್‌ಕುಮಾರ್(63) ಬುಧವಾರ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈ ರಿಯಾಲ್ಟಿ ರಿಯಲ್ ಎಸ್ಟೇಟ್ ಪ್ರದರ್ಶನಕ್ಕೆ ಚಾಲನೆ

ಮೈಸೂರು, ಮೇ 22(ಜಿಎ)– ಮೈಸೂರು ಬಿಲ್ಡರ್ಸ್ ಸಂಸ್ಥೆ, ಕ್ರೆಡಾಯ್ ಹಾಗೂ ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಆಯೋಜಿಸಿರುವ 4 ದಿನಗಳ ಮೈ ರಿಯಾಲ್ಟಿ ರಿಯಲ್ ಎಸ್ಟೇಟ್ ಪ್ರದರ್ಶನಕ್ಕೆ ಬಿಲ್ಡರ್ ಅಸೋಸಿಯೇಷನ್‌ನ ಸಾಮಾನ್ಯ ಮಂಡಳಿ ಮತ್ತು ವ್ಯವಸ್ಥಾಪಕ ಸಮಿತಿಯ ಸದಸ್ಯ ಕೆ.ಶ್ರೀರಾಮ್ ಚಾಲನೆ ನೀಡಿದರು.

ಮೈ ರಿಯಾಲ್ಟಿ ರಿಯಲ್ ಎಸ್ಟೇಟ್ ಪ್ರದರ್ಶನದಲ್ಲಿ 7 ಪ್ಲಾಟಿನಂ, 6 ಗೋಲ್ಡನ್, 6 ಸಿಲ್ವರ್ ಹಾಗೂ 31 ಸಾಮಾನ್ಯ ಮಳಿಗೆಗಳಲ್ಲಿ ರಿಯಲ್ ಎಸ್ಟೇಟ್ ಡೆವಲಪರ್‌ಗಳು, ಪ್ರಮೋಟರ್‌ಗಳು, ಬ್ಯಾಂಕ್‌ಗಳನ್ನು ಒಂದೇ ಸೂರಿನಡಿ ತರಲಾಗಿದೆ. ರಿಯಲ್ ಎಸ್ಟೇಟ್‌ನಲ್ಲಿನ ಇತ್ತೀಚಿನ ವಿದ್ಯಮಾನ, ನಾವೀನ್ಯತೆ, ಅವಕಾಶಗಳ ವಿವರ ಪಡೆದುಕೊಳ್ಳಬಹುದು. ಅಪಾರ್ಟ್ಮೆಂಟ್, ಲೇಔಟ್, ವಿಲ್ಲಾ, ರೋಹೌಸ್ ಮೊದಲಾದವುಗಳ ಮಾಹಿತಿ ದೊರೆಯಲಿದೆ.

ಪ್ರದರ್ಶನಕ್ಕೆ ಚಾಲನೆ ನೀಡಿದ ಶ್ರೀರಾಮ್ ಮಾತನಾಡಿ, 1991ರ ಆರ್ಥಿಕ ಸುಧಾರಣೆಗಳಂತೆ ಮುಂದಿನ ಕೆಲ ತಿಂಗಳಲ್ಲಿ ದೇಶದಲ್ಲಿ ಮಹತ್ವದ ಬದಲಾವಣೆಗಳು ಆಗಲಿವೆ. ಈ ತಾತ್ಕಾಲಿಕ ಸಂಕಷ್ಟವನ್ನು ಶಾಂತವಾಗಿ ಎದುರಿಸಿದರೆ, ನಂತರ ಭಾರತದ ಮುಂದಿರುವುದು ಚಿನ್ನದ ಯುಗ ಎಂದರು.

ಪ್ರಸ್ತುತ ಜಾಗತಿಕ ಆರ್ಥಿಕ ಸ್ಥಿತಿ 2008–09ರ ಆರ್ಥಿಕ ಮಂದಿಗಿಂತಲೂ ಗಂಭೀರ ಹಂತ ತಲುಪುವ ಸಾಧ್ಯತೆ ಇದೆ. ಪ್ರಧಾನಿ ನರೇಂದ್ರ ಮೋದಿ ನೀಡಿರುವ ಮಿತ ವ್ಯಯ ಮತ್ತು ಎಚ್ಚರಿಕೆಯ ಕರೆ ಅನಗತ್ಯ ಭೀತಿ ಸೃಷ್ಟಿಸಿದೆ ಎಂಬ ಟೀಕೆಗಳ ನಡುವೆಯೂ ದೇಶದ ಆರ್ಥಿಕ ಸ್ಥಿತಿ ಅತ್ಯಂತ ಗಂಭೀರವಾಗಿದೆ ಎಂದು ತಿಳಿಸಿದರು.

ಇದು ಭಾರತ ಮಾತ್ರ ಎದುರಿಸುತ್ತಿರುವ ಸಮಸ್ಯೆಯಲ್ಲ. 'ಟಿ' ಅಕ್ಷರದಿಂದ ಆರಂಭವಾಗುವ ಒಬ್ಬ ನಾಯಕನ ಅತಾರ್ಕಿಕ ನಿರ್ಧಾರಗಳಿಂದ ಜಗತ್ತಿನ ಆರ್ಥಿಕ ವ್ಯವಸ್ಥೆಯೇ ಅಸ್ಥಿರಗೊಂಡಿದೆ. ಮುಂದಿನ ಎರಡು–ಮೂರು ತಿಂಗಳು ತೀವ್ರ ಆರ್ಥಿಕ ದುಸ್ಥಿತಿ ಎದುರಾಗ ಬಹುದು. ಅದಕ್ಕಾಗಿ ನಾವು ಎಲ್ಲರೂ ಸಿದ್ಧರಾಗಿರಬೇಕು. ಆರ್ಥಿಕ ಅಸ್ಥಿರತೆಯ ಪರಿಣಾಮವಾಗಿ ಸಾಮಾಜಿಕ ಅಶಾಂತಿಯೂ ಉಂಟಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಭಾರತ ಸರ್ಕಾರ ಕೈಗೊಂಡ ಹಲವು ಕ್ರಮಗಳಿಂದ ದೇಶವು ಸಾಕಷ್ಟು ಮಟ್ಟಿಗೆ ಸುರಕ್ಷಿತ ಸ್ಥಿತಿಯಲ್ಲಿದೆ. ದೇಶದ ಸಾರಿಗೆ ಮತ್ತು ಲಾಜಿಸ್ಟಿಕ್ಸ್ ವೆಚ್ಚವು ಜಿಡಿಪಿಯ ಶೇ.15–16ರಿಂದ ಶೇ.8ಕ್ಕೆ ಇಳಿದಿರುವುದು ದೊಡ್ಡ ಸಾಧನೆ. ವಿಕಸಿತ ರಾಷ್ಟ್ರಗಳಲ್ಲಿ ಈ ವೆಚ್ಚ ಶೇ.5ಕ್ಕಿಂತ ಕಡಿಮೆ ಇರುತ್ತದೆ. ಭಾರತವು ಈ ದಿಕ್ಕಿನಲ್ಲಿ ಮಹತ್ವದ ಪ್ರಗತಿ ಸಾಧಿಸಿದೆ ಎಂದು ತಿಳಿಸಿದರು.

ಈ ವರ್ಷ ಮಳೆಯ ಅಸ್ಥಿರತೆ ಎದುರಾಗುವ ಸಾಧ್ಯತೆ ಇದ್ದು, ಕೃಷಿ ಆಧಾರಿತ ಭಾರತದ ಆರ್ಥಿಕತೆಗೆ ಇದು ದೊಡ್ಡ ಸವಾಲಾಗಬಹುದು. ಅಲ್ಲದೆ ಗಲ್ಫ್ ರಾಷ್ಟ್ರಗಳ ಆರ್ಥಿಕ ಸಮಸ್ಯೆಗಳ ಪರಿಣಾಮವಾಗಿ ವಿದೇಶದಲ್ಲಿರುವ ಭಾರತೀಯರಿಂದ ಬರುತ್ತಿದ್ದ ಹಣ ವರ್ಗಾವಣೆ ಕೂಡ ಕಡಿಮೆಯಾಗುವ ಸಾಧ್ಯತೆ ಇದೆ. ಕಳೆದ ವರ್ಷ ವಿದೇಶದಲ್ಲಿರುವ ಭಾರತೀಯರು ಸುಮಾರು 140 ಬಿಲಿಯನ್ ಡಾಲರ್ ಹಣ ಕಳುಹಿಸಿದ್ದರು. ಆದರೆ ಈ ವರ್ಷ ಆ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ. ಆದರೆ, ಭಾರತದಲ್ಲಿ ದೊಡ್ಡ ಮಟ್ಟದ ಆರ್ಥಿಕ ಕುಸಿತ ಸಂಭವಿಸುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಕ್ರಿಕೆಟ್‌ನಲ್ಲಿ ಕೆಟ್ಟ ಪಿಚ್‌ನಲ್ಲೂ ಉತ್ತಮ ಬ್ಯಾಟ್ಸ್‌ಮನ್‌ಗಳು ಹೇಗೆ ಆಡುತ್ತಾರೋ, ಹಾಗೆಯೇ ನಾವು ಸಹ ಧೈರ್ಯದಿಂದ ಈ ಪರಿಸ್ಥಿತಿಯನ್ನು ಎದುರಿಸಬೇಕು. ಉದ್ಯಮಿಗಳು ಆತುರದ ನಿರ್ಧಾರಗಳನ್ನು ಕೈಗೊಳ್ಳಬೇಡಿ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕ್ರೆಡಾಯಿ ಮೈಸೂರು ಅಧ್ಯಕ್ಷ ಹರೀಶ್‌ಶಣ್ಯೈ, ಗೌರವ ಕಾರ್ಯದರ್ಶಿ ನಾಗರಾಜ್ ವಿ.ಭೈರಿ, ಬಿಎಐ ಗೌರವ ಕಾರ್ಯದರ್ಶಿ ಪ್ರವೀಣ್ ಪಾಲ್, ಪ್ರಭಾಕರ್‌ರಾವ್, ಕೆ.ಎಸ್.ಪ್ರಕಾಶ್, ಆಯೋಜನಾ ಸಮಿತಿ ಅಧ್ಯಕ್ಷ ಅಶ್ವಿನ್ ಆರ್.ಪಾಳೇಗಾರ್ ಉಪಸ್ಥಿತರಿದ್ದರು.



ಮೈ ರಿಯಾಲ್ಟಿ ರಿಯಲ್ ಎಸ್ಟೇಟ್ ಪ್ರದರ್ಶನಕ್ಕೆ ಬಿಲ್ಡರ್ ಅಸೋಸಿಯೇಷನ್‌ನ ಸಾಮಾನ್ಯ ಮಂಡಳಿ ಮತ್ತು ವ್ಯವಸ್ಥಾಪಕ ಸಮಿತಿ ಸದಸ್ಯ ಕೆ.ಶ್ರೀರಾಮ್ ಚಾಲನೆ ನೀಡಿ, ವಿವಿಧ ಮಳಿಗೆಗಳನ್ನು ವೀಕ್ಷಿಸಿದರು.

7 ಪ್ಲಾಟಿನಂ, 6 ಗೋಲ್ಡನ್, 6 ಸಿಲ್ವರ್, 31 ಸಾಮಾನ್ಯ ಮಳಿಗೆಗಳಲ್ಲಿ ಮಾಹಿತಿ ಲಭ್ಯ

> **"ರಿಯಲ್ ಎಸ್ಟೇಟ್ ಮತ್ತು ಕೈಗಾರಿಕಾ ವಲಯದವರು ಆತಂಕಕ್ಕೊಳಗಾಗದೆ, ತಾಳ್ಮೆಯಿಂದ ನಡೆದುಕೊಳ್ಳಬೇಕು. 2008–09ರ ಆರ್ಥಿಕ ಸಂಕಷ್ಟದ ಬಳಿಕ ಚೀನಾ ಹೇಗೆ ದೊಡ್ಡ ಮಟ್ಟದ ಸುಧಾರಣೆಗಳನ್ನು ಕೈಗೊಂಡು ಇಂದು 20 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಬೆಳೆದಿದೆಯೋ, ಅದೇ ರೀತಿಯ ಮಹತ್ವದ ಸುಧಾರಣೆಗಳು ಭಾರತದಲ್ಲೂ ಶೀಘ್ರ ಜಾರಿಗೆ ಬರಲಿವೆ. –ಕೆ.ಶ್ರೀರಾಮ್**

ಪೆಟ್ರೋಲ್, ಡೀಸೆಲ್ ದರ ಇಳಿಸಲು ಆಗ್ರಹ

ಮೈಸೂರು,ಮೇ 22(ಜಿಎ)–ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿರುವುದು ರೈತರಿಗೆ ದೊಡ್ಡ ಹೊಡೆತವುಂಟು ಮಾಡಿದೆ. ಹೀಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅವುಗಳ ಮೇಲಿನ ತೆರಿಗೆ ಇಳಿಸ ಬೇಕೆಂದು ವಿಶ್ವಮಾನವ ರೈತ ಸಂಘದ ರಾಜ್ಯಾಧ್ಯಕ್ಷ ಮೋಹಿತ್‌ಗೌಡ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಗತ್ಯ ವಸ್ತುಗಳ ದರ ಏರಿಕೆಗೂ ಕಡಿವಾಣ ಹಾಕಬೇಕು. ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಕಚೇರಿಗಳಿಗೆ ರೈತರು ಕೆಲಸ ಕಾರ್ಯಗಳಿಗೆ ಬಂದಾಗ ಅಧಿಕಾರಿಗಳು, ಸಿಬ್ಬಂದಿ ಸೌಜನ್ಯದಿಂದ ವರ್ತಿಸಬೇಕು. ಸುಖಾ ಸುಮ್ಮನೆ ಅಲೆದಾಡಿಸಬಾರದು ಎಂದು ಒತ್ತಾಯಿಸಿ, ಜಿಲ್ಲೆ ವ್ಯಾಪ್ತಿಯ ಹೆಚ್.ಡಿ. ಕೋಟೆ, ನಂಜನಗೂಡು, ಸರಗೂರು, ಹುಣಸೂರು ಹಾಗೂ ಪಿರಿಯಾಪಟ್ಟಣ ಭಾಗಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇವುಗಳು ರೈತರ ಮೇಲೆ ದಾಳಿ ಮಾಡುವುದಲ್ಲದೆ, ಬೆಳೆ ಹಾನಿ ಮಾಡುತ್ತಿವೆ. ಹೀಗಾಗಿ ಅರಣ್ಯ ಇಲಾಖೆ ಇವನ್ನು ನಿಯಂತ್ರಿಸಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಶಂಕರ್, ಸಂದೇಶ್ ಪವಾರ್, ಹಳ್ಳಿಕಾರ್ ದರ್ಶನ್, ಅಭಿಷೇಕ್ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ 615 ಅಂಕ ಪಡೆದ ಪೃಥ್ವಿಗೆ ಅಭಿನಂದನೆ



ರೋಟರಿ ಪಶ್ಚಿಮ ಅಧ್ಯಕ್ಷ ಡಾ.ರಾಘವೇಂದ್ರ ಮಾತನಾಡಿದರು.

ಮೈಸೂರು, ಮೇ 22(ಜಿಎ)–ಸರಸ್ವತಿಪುರಂ ರೋಟರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 615 ಅಂಕ ಪಡೆದ ಪೃಥ್ವಿ ಜಯಸುಂದರ್ ಅವರನ್ನು ರೋಟರಿ ಪಶ್ಚಿಮ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

ಈ ವೇಳೆ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್ ಮಾತನಾಡಿ, ಪೃಥ್ವಿ ಜಯಸುಂದರ್ ಮೊದಲ ಫಲಿತಾಂಶ ಬಂದಾಗ ಆತನ ಅಂಕವು 610 ಇತ್ತು. ನಂತರ ಅನುಮಾನಗೊಂಡು ಮರು ಮೌಲ್ಯಮಾಪನಕ್ಕೆ ಹಾಕಿದ್ದಾಗ 5 ಅಂಕ ಹೆಚ್ಚುವರಿಗೆ ಬಂದಿರುವುದು ಮತ್ತೊಂದು ಸಾಧನೆಯಾಗಿದೆ. ಪೃಥ್ವಿ ಜಯಸುಂದರ್ ಯಾವುದೇ ಟ್ಯೂಷನ್‌ಗೆ ಹೋಗದೇ ಮನೆಯಲ್ಲಿ ಓದಿ ಉತ್ತಮ ಅಂಕ ಗಳಿಸಿರುವುದು ಹೆಮ್ಮೆಯ ವಿಚಾರವಾಗಿದೆ ಎಂದರು.

ತಮ್ಮ ಸಂಸ್ಥೆ ಸಮುದಾಯ ಸೇವೆಗೆ ಒತ್ತು ನೀಡಿದೆ. ಸಂಸ್ಥೆ ಅಡಿಯಲ್ಲಿ ಬರುವ 2 ಶಾಲೆಗಳಲ್ಲಿ ವಾರ್ಷಿಕ ಕೇವಲ 15 ಸಾವಿರ ಶುಲ್ಕದ ಆಧಾರದ ಮೇಲೆ ಲಕ್ಷಾಂತರ ಹಣ ಕಟ್ಟಿಸಿಕೊಳ್ಳುವ ಪ್ರತಿಷ್ಠಿತ ಶಾಲೆಗಳಿಗೆ ಸಮನಾಗಿ ಶಿಕ್ಷಣ ನೀಡಲಾಗುತ್ತಿದೆ. ಪ್ರತಿಷ್ಠಿತ ಶಾಲೆಗಳ ಮಕ್ಕಳೊಡನೆ ಸ್ಪರ್ಧೆ ನೀಡಲು ಸಾಧ್ಯವಿಲ್ಲ ಎಂಬ ಹತಾಶೆಯಲ್ಲಿರುವ ಹಲವಾರು ಮಕ್ಕಳು ತಮ್ಮ ಶಾಲೆಯಲ್ಲಿ ಶಿಕ್ಷಣ ಪಡೆದು ಎಲ್ಲರೊಡನೆ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆಂದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಪೂರ್ಣಿಮಾ ಅರವಿಂದ್, ಉದ್ಯಮಿ ಎ.ಪಿ.ನಾಗೇಶ್, ಸಿ.ಆರ್.ಹನುಮಂತು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.5.2026 ಶನಿವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 9.30ರಿಂದ ಕಣ್ಣಿನ ದೃಷ್ಟಿ ಸಮಸ್ಯೆಗಳಿಗೆ ವಿಶೇಷ ಬೇಸಿಗೆ ಶಿಬಿರ, ಪಿಎಂಜಿಎಸ್ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಮಹಿಳಾ ಕಾಲೇಜು :** 18ನೇ ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಗಿರೀಶ್ ಸಿ. ಹೊಸೂರ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.
- **ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜು :** ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ. ಎಂ.ಎಸ್.ಕೆ. ನರಹರಿ ಬಾಬು, ಅತಿಥಿಗಳು : ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10.30ಕ್ಕೆ.
- **ಮೈಸೂರು ಶರಣ ಮಂಡಲಿ, ಶ್ರೀ ನಟರಾಜ ಪ್ರತಿಷ್ಠಾನ :** ಬಸವ ಜಯಂತಿ ಹಾಗೂ ಬಸವರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ವಾಟಾಳು ಮಠದ ಸೂರ್ಯಸಿಂಹಾಸನ ಮಠಾಧ್ಯಕ್ಷರಾದ ಡಾ. ಶ್ರೀ ಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಆಹಾರ ನಾಗರಿಕ ಸರಬರಾಜು ಸಚಿವ ಕೆ.ಹೆಚ್. ಮುನಿಯಪ್ಪ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮತ್ತು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಬೆಳಗ್ಗೆ 10.30ಕ್ಕೆ.
- **ಮೈಸೂರು ಕನ್ನಡ ವೇದಿಕೆ :** ಕಾರ್ಮಿಕರ ದಿನಾಚರಣೆ ಪ್ರಯುಕ್ತ ಅಸಂಘಟಿತ ಕಾರ್ಮಿಕರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸಮಾಜ ಸೇವಕ ಎ.ಪಿ. ನಾಗೇಶ್, ಪ್ರಧಾನ ಭಾಷಣ : ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ. ಕೆ.ಬಿ. ಲಿಂಗರಾಜು, ಪ್ರಶಸ್ತಿ ಪ್ರಧಾನಿಸುವವರು : ಸಮಾಜ ಸೇವಕ ರಘುರಾಂ ವಾಜಪೇಯಿ, ಎಚ್.ಎನ್. ರೇಣುಕೇಶ್ವರ, ಮುಖ್ಯ ಅತಿಥಿಗಳು : ಎಂ.ಜೆ. ಚಿಕ್ಕಣ್ಣ, ಯದುನಂದ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸ್ನೇಹ ಸಿಂಚನ ಟ್ರಸ್ಟ್ :** ವಿಶ್ವ ತಾಯಂದಿರ ದಿನಾಚರಣೆ ಪ್ರಯುಕ್ತ ಆದರ್ಶ ಅಮ್ಮ ಪ್ರಶಸ್ತಿ ಪ್ರದಾನ, ಕವಿ–ಕಾವ್ಯ–ಗಾಯನದ ಸಮರ್ಪಣಾ ಸಮಾರಂಭ, ಉದ್ಘಾಟನೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸನ್ಮಾನಿಸುವವರು: ಡಾ.ಪುಷ್ಪಾ ಅಯ್ಯಂಗಾರ್, ಪ್ರಾಸ್ತಾವಿಕ ನುಡಿ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ. ನಾಗರಾಜ ವಿ.ಬೈರಿ, ಮುಖ್ಯ ಅತಿಥಿಗಳು: ಸತ್ಸಂಗ ಪ್ರಚಾರಕರಾದ ಸುಮತಿ ಸುಬ್ರಹ್ಮಣ್ಯ, ಮ.ನ.ಲತಾಮೋಹನ್, ಸ್ಥಳ: ವಿಜಯ ವಿಠ್ಠಲ ಶಾಲೆ, ಸರಸ್ವತಿಪುರಂ, ಸಂಜೆ 4ಕ್ಕೆ.
- **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–933, ಕಥೆ ಹೇಳುವವರು: ಶಶಿಧರ ಡೋಂಗ್ರೆ ಎಂ, ಇಂಜಿನಿಯರ್, ಎಲ್ & ಟಿ ಟೆಕ್ನಾಲಜಿ ಸರ್ವೀಸಸ್ ಅವರು ಮಕ್ಕಳಿಗೆ ಮೆಗಲನ್‌ನ ಸಮುದ್ರ ದಂಡಯಾತ್ರೆಯ ಹಾಗೂ ಇತರೆ ಕಥೆ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5–30 ರವರೆಗೆ
- **ಮೈಸೂರು ಆರ್ಟ್ ಗ್ಯಾಲರಿ :** ಜೀವನಯಾನ ಪುಸ್ತಕ ಬಿಡುಗಡೆ ಸಮಾರಂಭ, ಕೃತಿ ಲೋಕಾರ್ಪಣೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೃತಿ ಕುರಿತು : ಡಾ.ನಳಿನಿ ಚಂದರ್, ಅಧ್ಯಕ್ಷತೆ : ವಿಶ್ರಾಂತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ, ಉಪಸ್ಥಿತರು: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್.ಶಿವಲಿಂಗಪ್ಪ, ಕಲಾವಿದೆ ಡಾ.ಜಮುನಾ ರಾಣಿ ಮರ್ಲೆ, ವರ್ಷಿಣಿ, ಸ್ಥಳ: ಭಗಿನಿ ಸೇವಾ ಸಮಾಜ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.
- **ಜಿ.ಎಸ್.ಜಗದೀಶ್ ಸ್ನೇಹ ಬಳಗ:** ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉದ್ಘಾಟನೆ: ಸಂಸದ ಯದುವೀರ್ ಒಡೆಯರ್, ಅಧ್ಯಕ್ಷತೆ : ಶಾಸಕ ಶ್ರೀವತ್ಸ, ಉಪಸ್ಥಿತರು: ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ವಿನಯ್‌ಕುಮಾರ್, ಡಾ.ಯಶಸ್ವಿನಿ ಸಂಜಯ್, ಮಾಜಿ ಶಾಸಕ ಎಲ್.ನಾಗೇಂದ್ರ, ವಲಯ ಆಯುಕ್ತ ಸಂದೀಪ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಸ್ಥಳ: ಎಸ್.ಆರ್. ಸುಬ್ಬರಾವ್ ಉದ್ಯಾನವನ, ನಿವೇದಿತಾನಗರ, ಸಂಜೆ 5ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಸಾಂಸ್ಕೃತಿಕ ಕಾರ್ಯಕ್ರಮಗಳು, ಪಂಡಿತ್ ಶ್ರೀ ಪವಮಾನಾಚಾರ್ಯ, ಪಂಡಿತ್ ಶ್ರೀ ಪ್ರವೀಣಾಚಾರ್ಯ ಹುನಗುಂದ, ಪಂಡಿತ್ ಶ್ರೀ ಭೀಮಸೇನಾಚಾರ್ಯ ಕುಲಕರ್ಣಿ, ಪಂಡಿತ್ ಶ್ರೀ ರವಿ ಆಚಾರ್ಯ ಮತ್ತಿಹಳ್ಳಿ ಅವರೊಂದಿಗೆ ಸಂವಾದ ಕಾರ್ಯಕ್ರಮ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.
- **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ನೆನಪಿನಂಗಳ ಸಂವಾದ–2, ಹಿರಿಯ ರಂಗಕರ್ಮಿ ಪ್ರಕಾಶ್ ಶೆಣೈ ಅವರೊಂದಿಗೆ ಮುಕ್ತ ಸಂವಾದ, ಉಪಸ್ಥಿತರು : ಎಚ್.ಎಸ್. ಉಮೇಶ್, ಅಮರ ಕಲಾ ಸಂಘದ ವಾಸು, ನ. ರತ್ನ, ಸಿಂಧುವಳ್ಳಿ ಅನಂತಮೂರ್ತಿ, ರಾಜಶೇಖರ ಕದಂಬ, ಸ್ಥಳ: ಶ್ರೀರಂಗ, ರಂಗ ಚಾವಡಿ, ರಂಗಾಯಣ ಆವರಣ, ಸಂಜೆ 6ಕ್ಕೆ.
- **ಪರಂಪರೆ :** ಹಿರಿಯ ಕಾನೂನು ಪ್ರಾಧ್ಯಾಪಕ, ಹಾಸ್ಯ ಸಾಹಿತಿ ಪ್ರೊ. ಸಿ.ಕೆ.ಎನ್. ರಾಜ ನುಡಿನಮನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನುಡಿನಮನ : ಪ್ರೊ. ಪ್ರಧಾನ್ ಗುರುದತ್ತ, ಪ್ರೊ. ಪಿ. ಈಶ್ವರ ಭಟ್, ಡಿ.ವಿ. ಗುರುಪ್ರಸಾದ್, ಡಾ. ಜ್ಯೋತಿಶಂಕರ್, ಪ್ರೊ. ಸಿ.ಕೆ.ಎನ್. ರಾಜ ವಿರಚಿತ ಶ್ರೀ ಗುರುಚರಿತ್ರೆ, ಕಾವ್ಯದ ಗಮಕ ಕಾರ್ಯಕ್ರಮ : ವಾಚನ : ವಿದುಷಿ ಶುಭ ರಾಘವೇಂದ್ರ, ವ್ಯಾಖ್ಯಾನ : ಡಾ. ಜ್ಯೋತಿಶಂಕರ್, ಸ್ಥಳ: ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಶ್ರೀನಿಧಿ ಶಿರೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ ಕಾರ್ಯಕ್ರಮ, ವಿದ್ವಾನ್ ರೂಪನಗುಡಿ ರತ್ನತೇಜ–ವಯೋಲಿನ್, ವಿದ್ವಾನ್ ಪ್ರಣವ್ ಸುಬ್ರಮಣ್ಯ–ಮೃದಂಗ, ಸ್ಥಳ: ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಸಂಜೆ 6.30ಕ್ಕೆ.
- **ಸುರುಚಿ ರಂಗಮನೆ :** ಅರ್ಥಾರ್ಥ ಎಂಬ ಅರ್ಥಶಾಸ್ತ್ರ ಹಾಗೂ ವಾಣಿಜ್ಯ ಕ್ಷೇತ್ರಗಳ ಬಗ್ಗೆ ನಿಯಮಿತವಾಗಿ ಕಾರ್ಯಕ್ರಮ, ಪ್ರೊ ಟಿ ಎಸ್ ವೇಣುಗೋಪಾಲ್ ಅವರು 'ಭಾರತದ ಆರ್ಥಿಕತೆಯ ಕಥನ – ಪ್ರೊ ಕಾರ್ತಿಕ್ ಮುರುಳಿಧರನ್ ಅವರ ನೋಟ' ಎಂಬ ವಿಷಯದ ಕುರಿತು ಕನ್ನಡದಲ್ಲಿ ಭಾಷಣ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಸಂಜೆ 6.30 ರಿಂದ.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಲಕ್ಷ್ಮಿ ಹೆಚ್.ಎಂ. ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ–ಪಿಟೀಲು, ವಿದ್ವಾನ್ ಉದಯ್ ಕುಮಾರ್–ಮೃದಂಗ, ಸ್ಥಳ: ಶ್ರೀ ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30ಕ್ಕೆ.
- **ಸಂಚಲನ ಮೈಸೂರು, ಬೆಂಗಳೂರಿನ ಉದ್ಭವ ಕಲಾವಿದರು, ಅರಳಿ ಸೇವಾ ಟ್ರಸ್ಟ್, ತಸ್ಮೈ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಗ್ರೀಷ್ಮ ರಂಗೋತ್ಸವ, ಜನಮನ ಸಾಂಸ್ಕೃತಿಕ ಸಂಘಟನೆಯಿಂದ ದೇವನೂರು ಮಹಾದೇವರ ಕೃತಿ ಆಧರಿಸಿದ 'ಸಂಬಂಜ ಅನ್ನೋದು ದೊಡ್ಡು ಕನಾ' ನಾಟಕ ಪ್ರದರ್ಶನ, ನಿರ್ದೇಶನ: ಡಾ.ಹೆಚ್.ಜನಾರ್ಧನ (ಜನ್ನಿ), ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ – ಹಸಿರೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ 3.30 ಮಕ್ಕಳ ಮಂಟಪ, 4.00 ನಾಟಕ– ಸ್ವಾಮಿ ನಿಷ್ಠೆ, ರಚನೆ–ಸಿ.ವಿ. ಶಿವಶಂಕರ್, ನಿರ್ದೇಶನ–ರಘುಪತಿ ಹೆಗ್ಡೆ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮದ್ದೂರು ತಾಲ್ಲೂಕು, ಮಾದನಾಯಕನ ಹಳ್ಳಿಯ ಕೃಷಿಕ ದಂಪತಿ ಎಂ.ಕೆ. ದೇವರಾಜು ಹಾಗೂ ಮಂಜುಳ, ಪ್ರಸ್ತುತಿ– ಎನ್. ಕೇಶವ ಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

PUBLIC NOTICE

This is to notify to the General Public that our client is intending to purchase the property more fully described in the schedule below from its owner Smt. Priyadarshini B, wife of Deepak Raj, who is the resident of No.69, 3rd A Main Road, East Cross, Vidyagiri Layout, Nagarabhavi, Bengaluru-560 072.
If anyone is having any right, title, interest or any kind of charge or mortgage or any sort of Court attachments or right of maintenance etc., over the schedule property, they may file their written objections before the undersigned within 7 days, failing which our client will proceed to purchase the schedule property from its owner.

SCHEDULE

All that piece and parcel of residential property bearing **Site No. 1098, New Property ID No.9383464580** (in form no.3 issued by Nagarasabhe, Hootagalli), measuring East to West 9.00 Meters and North to south 12.00 Meters, totally measuring 108 Sq. Meters situated at Vijayanagara, 4th Stage, 2nd phase, Mysore city and bound on : East by : Site No. 1099, West by: Site No. 1097, North by : Road, South by: Site No.1119
Date: 22.05.2026

Sd/- Sri. P.K Ponnaiah, Sri. Naveen Ponnaiah
Advocates, P.K.P. Law Associates, No.1662/1A, First floor Radhamadhav Connect, Narayana Shastry Road, Beside Secure Hospital, Mysore

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ಷೆಡ್ಯೂಲ್ ಸ್ವತ್ತಿನ ಹಾಲಿ ಮಾಲೀಕರಾದ, ಮೈಸೂರು ಜಿಲ್ಲೆ –571103, ಹುಣಸೂರು ತಾಲ್ಲೂಕು ಹಳೇಬೀಡು ಅಂಚೆ, ಬಿಳಿಕೆರೆ ಹೋಬಳಿ, ಗೆರಸನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್. ತಗಡೇಗೌಡ ರವರ ಮಗನಾದ **ಶ್ರೀ. ಮಾದೇಗೌಡ** ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ , ಕೃಷ್ಣರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಮರ್ಚಹಳ್ಳಿ ಗ್ರಾಮದ ಸರ್ವೆ ನಂಬರ್ 366/1 ರ 01 ಎಕರೆ 12.08 ಗುಂಟೆ ತರಿ ಜಮೀನು ಹಾಗೂ ಇದರ ಚಕ್ಕುಬಂದಿ – ಪೂರ್ವಕ್ಕೆ: ಶ್ರೀ ಹಲಗನಾಯಕ ರವರ ಜಮೀನು; ಪಶ್ಚಿಮಕ್ಕೆ: ಶ್ರೀ. ಪ್ರಕಾಶ ರವರ ಜಮೀನು, ಉತ್ತರಕ್ಕೆ: ಶ್ರೀ ಎಂ. ಮಹದೇವ ರವರ ಜಮೀನು ಹಾಗೂ ದಕ್ಷಿಣಕ್ಕೆ: ಹಿತ್ತಲು.

ಸಹಿ/– ನಾಗೇಂದ್ರ ಪ್ರಸಾದ್ ಡಿ.ಜಿ. ವಕೀಲರು
ನಂ.405, 4ನೇ ಮೇನ್, ಲಾಲ್‌ಲಜಪತಿ ರಾಯ್ ರಸ್ತೆ, ಲಲಿತಾದ್ರಿಪುರ ಅಂಚೆ, ಪೊಲೀಸ್ ಲೇಔಟ್ 2ನೇ ಹಂತ, ಟಿ. ನರಸೀಪುರ ರಸ್ತೆ, ಮೈಸೂರು–570028
ಮೊ.ನಂ. 9916139244
ದಿನಾಂಕ: 22.05.2026 ಸ್ಥಳ: ಮೈಸೂರು

PUBLIC NOTICE

Notice is hereby issued to the General Public that Sri. B. ANOOP KUMAR, S/o. Late. B. Mahesh, Residing at # 366, 12th Cross, 5th Main, Dollars Colony, Bengaluru North, R. M. V. Extension, II Stage, Bengaluru-560 094 have agreed to Sell the Schedule Property to my client/s.
Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within SEVEN (07) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE PROPERTY:

ALL THAT PIECE AND PARCEL OF All that piece and parcel of industrial property bearing No. 1/B, E-Aasthi No. 40-2-575-1/B, measuring East to West 202.3 feet and North to South 124.5 feet, totally measuring 25079 square feet, situated at C. V. Road, Bannimantap Industrial Layout, Mandi Mohalla, Mysuru & bounded on :
East by : portion of 1/B retained by the sellers
West by : Road
North by : Drainage & Road
South by : Property bearing No. 1/A

Sd/- M. Sanjay Jain, BBM, LL.B, CCL, CMJFS Advocate
L 50/2A, 1st Floor, Ashoka Road, Mysuru - 570001.
Cell: 93414 64636
E-mail: msj186@yahoo.co.in
Date: 15.05.2026, Place: Mysuru



NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

RAM TUITION CENTER
CET / NEET - 2027
Weekend CET Classes
Commencing From Sun - 24th May 2026
Timings : 8.30 am to 1.30 pm
For Admission Contact
Mahendra : 81973 63131
Mon to Sat - 4.30 pm to 7.30 pm
Branches : Agrahara & Kuvempunagar
Admission Open for
I PUC & II PUC - PCMB CLASSES

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್
ಮತ್ತು
ಸೆಕ್ಯೂರಿಟಿ ಗಾರ್ಡ್
ಸ್ಥಳ : ಕುಶಾಲನಗರ, ಕೂರ್ಗ್
ಇ.ಎಸ್.ಐ. ಮತ್ತು ಪಿ.ಎಫ್. ಜೊತೆಗೆ ಉತ್ತಮ ಸಂಬಳ.
ಸಂಪರ್ಕಿಸಿ :
8296136433, 9663724937

REQUIRED LAND FOR PURCHASE
Require 2 to 3 acres of land in Mysore for warehouse purpose close to highway.
Contact:
636 6236 307
948 0834 448

WANTED
SALES BOYS / GIRLS
For a REPUTED MEDICAL STORE @ HEART OF THE CITY, Mysuru
Experience Persons will be preferred
Please send Resume with your Recent Photo to WhatsApp
9986080655

ನೇರವಾಗಿ ಫ್ಯಾಕ್ಟರಿಯಿಂದ
ಬ್ರಾ ಮಾರಾಟ
ಮಾರಾಟ ಕಡೆಯ 2 ದಿನಗಳು ಮಾತ್ರ – ಶನಿವಾರ ಮತ್ತು ಭಾನುವಾರ
ಮಹಿಳೆಯರ ಬ್ರಾಗಳು, ಒಳ ಉಡುಪುಗಳು, ಜಾಕೆಟ್, ಪುಲ್‌ಓವರ್, ಶೇಪ್‌ವೇರ್ ಮತ್ತು ನೈಟ್‌ವೇರ್
UPTO 70% OFF
enamor
₹3499 WORTH 3 BRANDED WOMEN'S BRA ₹1199 Only
₹1999 WORTH 3 BRANDED WOMEN'S PANTIES ₹499 Only
ಸ್ಥಳ : ನಂಜರಾಜ ಬಹದ್ದೂರು ಛತ್ರ
ವಿನೋಬಾ ರಸ್ತೆ, ಮೆಟ್ರೋಪೋಲ್ ಸರ್ಕಲ್ ಹತ್ತಿರ, ಮೈಸೂರು – 01
Car Parking Available | Time : 10 am to 10 pm

Lucky English school
4634, Shivaji Main Road, N.R. Mohalla, Mysore.
Ph: 0821-2497335 / 2493157
ADMISSIONS OPEN
PRE KG-LKG-UKG
Grade 1 to 10
- Robotics
- Hi-tech Digital Classrooms with Innovative Teaching
- Karate And Martial Arts Classes
- Shlokas And Deeniyat Course
- School Van Facility

Tuitions Available In School Premises From Grade 1 to10



ಶ್ರೀ ಅವಧೂತ ದತ್ತ ಪೀಠ
ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ
ದತ್ತನಗರ, ಮೈಸೂರು, ದೂರವಾಣಿ–2486486

ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 84ನೇ ಜನ್ಮದಿನೋತ್ಸವ, ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 27ನೇ ಬ್ರಹ್ಮೋತ್ಸವ, ನಾದಮಂಟಪದ 28ನೇ ವಾರ್ಷಿಕೋತ್ಸವ

ಕಾರ್ಯಕ್ರಮಗಳು ದಿನಾಂಕ 24-5-2026 ರಿಂದ 31-5-2026

ಪ್ರತಿದಿನ ಬೆಳಗ್ಗೆ 8.00: ನಾದಮಂಟಪದಲ್ಲಿ ಶ್ರೀಚಕ್ರಪೂಜೆ
24–05–2026, ಭಾನುವಾರ, ಬೆಳಗ್ಗೆ 9.00: ಶ್ರೀ ಮಹಾಗಣಪತಿ ಹೋಮ
ಸಂಜೆ 5.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಶೇಷವಾಹನೋತ್ಸವ
ಸಂಜೆ 6.00 – ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 84ನೇ ಜನ್ಮದಿನೋತ್ಸವ ಮತ್ತು ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 27ನೇ ಬ್ರಹ್ಮೋತ್ಸವ ಉದ್ಘಾಟನೆ: ಪರಮ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಸುತ್ತೂರುಮಠ, ಸುತ್ತೂರು
ದಿವ್ಯಸಾನಿಧ್ಯ : ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ
ಪೂಜ್ಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ
25–05–2026, ಸೋಮವಾರ ಸಂಜೆ 5.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಸಿಂಹವಾಹನೋತ್ಸವ
ಸಂಜೆ 7.00 – ನಾದಮಂಟಪ 28ನೇ ವಾರ್ಷಿಕೋತ್ಸವ ಉದ್ಘಾಟನೆ
ಹಿಂದೂಸ್ತಾನಿ ಕೊಳಲು ವಾದನ – ಪಂಡಿತ್ ರಾಕೇಶ್ ಚೌರಾಸಿಯಾ ಅವರಿಂದ
ತಬಲ– ಪಂಡಿತ್ ಅನಿಂದೋ ಚಟರ್ಜಿ
26–05–2026 ಮಂಗಳವಾರ–**ಪರಮ ಪೂಜ್ಯ ಶ್ರೀ ಸ್ವಾಮೀಜಿಯವರ 84ನೇ ಹುಟ್ಟುಹಬ್ಬ**
ಬೆಳಗ್ಗೆ 8.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಪದ್ಮಾವತಿ ದೇವಿಯವರಿಗೆ ಅಭಿಷೇಕ, ಲಕ್ಷ್ಮೀ ಹೋಮ
ಬೆಳಗ್ಗೆ 10.00 – ಎಸ್.ಜಿಎಸ್. ವೇದನಿಧಿ ಅಕಾಡೆಮಿ ಮತ್ತು ಮಾಸ್ಟರ್ಸ್ ಸಂಸ್ಥೆಯ ಕಾರ್ಯಕ್ರಮ ಮತ್ತು **"ಸಂಸ್ಕೃತ ಶಿಕ್ಷಣ ಸೇವೆ"** ಉದ್ಘಾಟನೆ.
ಸಂಜೆ 5.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಹನುಮದ್ವಾಹನೋತ್ಸವ
ಸಂಜೆ 7.00– ಸಾಂಸ್ಕೃತಿಕ ಕಾರ್ಯಕ್ರಮ
27.05.2026 ಬುಧವಾರ– ಅಧಿಕ ಜೇಷ್ಠ ಶುದ್ಧ ಏಕಾದಶಿ–
ಬೆಳಿಗ್ಗೆ 7.00 – ರುದ್ರಹೋಮ, ಆಯುಷ್ಯ ಹೋಮ, ರುದ್ರಾಭಿಷೇಕ.
ಬೆಳಗ್ಗೆ 10.00 – ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಪ್ರತ್ಯಕ್ಷ ಪಾದಪೂಜೆ
ಬೆಳಗ್ಗೆ 11.00 – ಚೈತನ್ಯಾರ್ಚನೆ – ದತ್ತ ಪೀಠ ಪ್ರಶಸ್ತಿ ಪ್ರದಾನ :
ವೇದ ನಿಧಿ – ಶ್ರೀ ವಿ. ಜಂಬುನಾಥ ಘನಪಾಠಿ,
ಶಾಸ್ತ್ರ ನಿಧಿ – ಶ್ರೀ ಕುಪ್ಪಾ ವಿಶ್ವನಾಥ ಶರ್ಮ
ನಾದ ನಿಧಿ – ವಿದ್ವಾನ್ ಸುರೇಶ್ ವೈದ್ಯನಾಥನ್
ಪ್ರವಚನ ಚಕ್ರವರ್ತಿ –ಶ್ರೀ ಸಾಮವೇದಮ್ ಷಣ್ಮುಖ ಶರ್ಮ
ಧರ್ಮ ಬಂಧು – ಶ್ರೀ ರವೀಂದರ್ ಪಂಡಿತ
ಸಸ್ಯ ಬಂಧು – ಶ್ರೀಮತಿ ಅನುಪಮ ವೇದಾಚಲ
ಸಂಜೆ 5.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಗರುಡ ವಾಹನೋತ್ಸವ.
ಸಂಜೆ 7.00 – ಅನ್ನಮಯ್ಯ ಕೀರ್ತನ ನೃತ್ಯಾಂಜಲಿ – ಪರಿಕಲ್ಪನೆ, ನಿರ್ಮಾಣ, ನಿರ್ದೇಶನ ಶ್ರೀಮತಿ ರಂಜಿತ ವಿವಿನ್, ನೃತ್ಯರಂಜನಿ ಭರತನಾಟ್ಯ ಶಾಲೆ.
28–05–2026 ಗುರುವಾರ ಬೆಳಗ್ಗೆ 9.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಸಾಲಗ್ರಾಮ ಪೂಜೆ ಮತ್ತು
ಬೆಳಗ್ಗೆ 10.00 – ಧನ್ವಂತರಿ ಪೂಜೆ, ಧನ್ವಂತರಿ ಹೋಮ.
ಸಂಜೆ 5.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಡೋಲೋತ್ಸವ.
ಸಂಜೆ 7.00 – ಸಪ್ತರ್ಷಿ ಸರೋವರದಲ್ಲಿ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ತೆಪ್ಪೋತ್ಸವ.
29–05–2026 ಶುಕ್ರವಾರ ಬೆಳಗ್ಗೆ 9.00 – ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ಬ್ರಹ್ಮೋತ್ಸವ ಮಹಾಭಿಷೇಕ.
ಸಂಜೆ 7.00 – ಹಿಂದುಸ್ಥಾನಿ ದ್ವಂದ್ವ ವಾದನ – ಪಂಡಿತ್ ವಿಶ್ವ ಮೋಹನ್ ಭಟ್ (ಮೋಹನ ವೀಣೆ) ಮತ್ತು ಪಂಡಿತ್ ಸಲೀಲ್ ವಿಶ್ವ ಮೋಹನ್ ಭಟ್ (ಸಾತ್ವಿಕ ವೀಣೆ)
ತಬಲ – ಪಂಡಿತ್ ಹಿಮಾಂಶು ಮಹಂತ್.
30.05.2026 ಶನಿವಾರ ಬೆಳಗ್ಗೆ 9.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ಶಾಂತಿ ಕಲ್ಯಾಣ ಮಹೋತ್ಸವ
10.00 – ವಿಶೇಷ ಚೇತನರಿಗೆ ಸಹಾಯಕ ಉಪಕರಣಗಳ ವಿತರಣೆ
ಸಂಜೆ 5.00 – ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ರುದ್ರಾಕ್ಷಿ ರಥೋತ್ಸವ.
ಸಂಜೆ 7.00 – ಹಿಂದುಸ್ಥಾನಿ ಗಾಯನ – ಪಂಡಿತ್ ಸಂಜೀವ್ ಅಭಯಂಕರ್
31–05–2026 ಭಾನುವಾರ ಬೆಳಗ್ಗೆ 7.00 – ನಾದ ಮಂಟಪದಲ್ಲಿ ದತ್ತಾತ್ರೇಯ, ಮೃತ್ಯುಂಜಯ ಮತ್ತು ಆಯುಷ್ಯ ಹೋಮ.
ಬೆಳಗ್ಗೆ 9.00 – ಔದುಂಬರ ಸಿಂಹಾಸನ ಅಧಿರೋಹಣ ಮತ್ತು ಭಕ್ತಾದಿಗಳಿಂದ ಸಮರ್ಪಣೆ.
ಸಂಜೆ 6.00 – ವೀಣೆ ಮತ್ತು ಪಿಟೀಲು ವಾದನ – ವಿದ್ವಾನ್ ಕುಮರೇಶ್ ರಾಜಗೋಪಾಲನ್ ಮತ್ತು ಶ್ರೀಮತಿ ಜಯಂತಿ ಕುಮರೇಶ್ ಅವರಿಂದ ಮೇಳ.

ಪ್ರತಿ ದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಾದ ಮಂಟಪದಲ್ಲಿ ನಡೆಯುತ್ತದೆ.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಶ್ರೀ ದತ್ತ ವೆಂಕಟೇಶ್ವರ ದೇವಾಲಯ
ದೂರವಾಣಿ: 2483200, ಆಶ್ರಮ ಕಾರ್ಯಾಲಯ : ದೂರವಾಣಿ: 2486486

ಎಲ್ಲರಿಗೂ ಸುಸ್ವಾಗತ

SCHOOL 10X
CREATED BY INDUS
ENABLED BY MALAVALLI

10X ಇಂಟೆರ್‌ನ್ಯಾಷನಲ್ ಸ್ಕೂಲ್ ಮೈಸೂರು

ನೀವು ಕೇಳಿದಿರಿ
ನಾವು ಆಲಿಸಿದ್ದೇವೆ

ಪೋಷಕರ ಅಗಾಧ ಆಸಕ್ತಿಯ ನಂತರ, 10X ಇಂಟರ್ನ್ಯಾಷನಲ್ ಸ್ಕೂಲ್ ಇದೀಗ ಘೋಷಿಸುತ್ತಿದೆ


2026-27 ನೇ ಸಾಲಿನ ಗ್ರೇಡ್ 8 ರ ಪರಿಚಯ

ಜಾಗತಿಕ ದೃಷ್ಟಿಕೋನದೊಂದಿಗೆ ಭವಿಷ್ಯಕ್ಕೆ ಸಿದ್ಧವಾದ, ವಿಚಾರಣೆ ಆಧಾರಿತ ಕಲಿಕೆಯ ಮೂಲಕ 10X ಪ್ರಯಾಣಕ್ಕೆ ಈಗ ವಿದ್ಯಾರ್ಥಿಗಳಿಗೆ ಮೊದಲೇ ಆರಂಭವನ್ನು ನೀಡುತ್ತಿದೆ.



8, 9 ಮತ್ತು 11 ನೇ ತರಗತಿಗಳಿಗೆ ಪ್ರವೇಶಗಳು ಈಗ ಪ್ರಾರಂಭವಾಗಿವೆ

+91 82966 08340/+91 91873 63687 | www.10xmysuru.org
ನಂ. 11, 11ಎ, ಮಾನಂತವಾಡಿ ರಸ್ತೆ, ವಿದ್ಯಾರಣ್ಯಪುರ, ಮೈಸೂರು



ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ
ವೇದಾಂತ ಶ್ರವಣ
ಪುನರಪಿ ಜನನಂ ಪುನರಪಿ ಮರಣಂ
ಹುಟ್ಟು-ಸಾವಿನ ಪ್ರಕ್ರಿಯೆ ಮತ್ತು ಕರ್ಮ ಸಿದ್ಧಾಂತ
ಮೈಸೂರು | ಕನ್ನಡ
23-24 ಮೇ 2026 ಶನಿವಾರ-ಭಾನುವಾರ
5:30 PM - 8:00 PM
ಶ್ರೀ ಶೃಂಗೇರಿ ಶಂಕರ ಮಠ ಅಭಿನವ ಶಂಕರಾಲಯ

ಜೀವನವೆಂದರೆ ಕೇವಲ ದೇಹದ ಹುಟ್ಟು ಮತ್ತು ನಾಶವಲ್ಲ. ಅದು ಆತ್ಮನ ಅನಾದಿ ಪ್ರಯಾಣವೆಂದು ಶಾಸ್ತ್ರಗಳು ತಿಳಿಸುತ್ತವೆ.
ಕರ್ಮ, ವಾಸನ ಮತ್ತು ಪುನರ್ಜನ್ಮಗಳ ಆಧಾರದ ಮೇಲೆ ಜೀವಿಯ ಹುಟ್ಟು-ಸಾವು ನಡೆಯುತ್ತದೆ ಎಂಬುದನ್ನು ವೇದಾಂತ ವಿವರಿಸುತ್ತದೆ. ಜನನ ಮತ್ತು ಮರಣದ ಹಿಂದೆ ಇರುವ ದೈವ ನಿಯಮ ಹಾಗೂ ಕರ್ಮಸಿದ್ಧಾಂತವನ್ನು ತಿಳಿಯುವ ಅವಕಾಶ. ಬನ್ನಿ, ಶಾಸ್ತ್ರಗಳ ಬೆಳಕಿನಲ್ಲಿ ಜೀವಿಗಳ ಈ ಗೂಢ ಪ್ರಯಾಣವನ್ನು ಅರಿಯೋಣ.



ವಿದ್ವಾನ್ ಡಾ. ವಿಶ್ವನಾಥ ಹೆಗಡೆ ಸುಂಕಸಾಳ

EVENT MANAGED BY:
AhamBrahmaasmi.org A UNIT OF DAKSHINAMNAYA SRI SHARADA PEETHAM www.Sringeri.net

ಪ್ರವೇಶ ಉಚಿತ, ಆದರೆ ಪೂರ್ವ ನೋಂದಣಿ ಕಡ್ಡಾಯವಾಗಿದೆ:
ಕಾರ್ಯಕ್ರಮದ ನಂತರ ಪ್ರಸಾದದ ವ್ಯವಸ್ಥೆ ಇರಲಿದೆ
tinyurl.com/VedantaMYS

ನಕ್ಕರೆ ಅದೇ ಸ್ವರ್ಗ

ಗಂಡ : ಒಂದು ವೇಳೆ ನಾನು ಲಾಟರಿಯಲ್ಲಿ ಗೆದ್ದರೆ ನೀನು ಏನ್ ಮಾಡ್ತೀಯಾ?
ಹೆಂಡತಿ : ಅರ್ಧ ಹಣ ತಗೊಂಡು ತವರು ಮನೆಗೆ ಹೋಗ್ತೀನಿ. ನೀವು ಹಾಯಾಗಿರಿ. ನಾನು ಆರಾಮಾಗಿ ಇರ್ತೀನಿ.
ಗಂಡ : 20 ರೂ. ಲಾಟರಿ ಗೆದ್ದಿದ್ದೀನಿ. ಇದೋ ತಗೋ 10 ರೂ. ಇಲ್ಲಿಂದ ಜಾಗ ಖಾಲಿ ಮಾಡು!

ಮೈಸೂರು ಮಿತ್ರ
ಶನಿವಾರ, ಮೇ 23, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೊಟ್ಟಿದ್ದನ್ನು, ಸ್ವಲ್ಪ ತಡವಾದರೂ ಸರಿ ಮರಳಿ ಕೊಡುವುದು ಸೃಷ್ಟಿಯ ನಿಯಮ. ಅದು ಪಾಪವಾದ್ರೂ ಸರಿ...! ಪುಣ್ಯವಾದ್ರೂ ಸರಿ...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

ವಾಹನಗಳ ವೇಗ ತಗ್ಗಿಸಿ, ಅಳಿಲುಗಳ ಜೀವ ಉಳಿಸಿ

ಮಾನ್ಯರೇ,



ಮೈಸೂರಿನ ಪ್ರಕೃತಿ ಸೌಂದರ್ಯಕ್ಕೆ ಸಾಕ್ಷಿಯಂತಿರುವ ಮಾನಸಗಂಗೋತ್ರಿ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣಗಳು ಸಾವಿರಾರು ಹಸಿರು ಮರಗಿಡಗಳಿಂದ ಕಂಗೊಳಿಸುತ್ತಿವೆ. ಈ ಸುಂದರ ಹಸಿರಸಿರಿಯ ನಡುವೆ ನೂರಾರು ಅಳಿಲುಗಳು ಆಶ್ರಯ ಕಂಡುಕೊಂಡಿವೆ. ಇಲ್ಲಿನ ರಸ್ತೆಗಳ ಎರಡೂ ಬದಿಗಳಲ್ಲಿ ಸಾಲುಸಾಲು ಮರಗಳಿರುವುದರಿಂದ, ಅಳಿಲುಗಳು ಆಹಾರಕ್ಕಾಗಿ ಮತ್ತು ಆಟವಾಡಲು ಒಂದು ಮರದಿಂದ ಮತ್ತೊಂದು ಮರಕ್ಕೆ ರಸ್ತೆಯ ಮೂಲಕ ವೇಗವಾಗಿ ಓಡಾಡುತ್ತಿರುತ್ತವೆ.

ಆದರೆ, ಇತ್ತೀಚಿನ ದಿನಗಳಲ್ಲಿ ಈ ಆವರಣದ ರಸ್ತೆಗಳಲ್ಲಿ ವಾಹನ ಸವಾರರು ಅತಿಯಾದ ವೇಗದಿಂದ ಚಲಿಸುತ್ತಿದ್ದಾರೆ. ರಸ್ತೆ ದಾಟುವ ಸಣ್ಣ ಜೀವಗಳಾದ ಅಳಿಲುಗಳು ಈ ವೇಗದ ವಾಹನಗಳ ಚಕ್ರಕ್ಕೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿವೆ. ಈ ಹಸಿರು ಕ್ಯಾಂಪಸ್ ಕೇವಲ ಮನುಷ್ಯರಿಗಷ್ಟೇ ಅಲ್ಲ, ಅಲ್ಲಿನ ಪ್ರಾಣಿ–ಪಕ್ಷಿ ಸಂಕುಲಕ್ಕೂ ಸೇರಿದ್ದಾಗಿದೆ ಎಂಬುದನ್ನು ನಾವು ಮರೆಯಬಾರದು. ಆದುದರಿಂದ, ಅಳಿಲುಗಳ ಈ ನಿರಂತರ ಸಾವನ್ನು ತಡೆಯಲು ಆವರಣದ ಪ್ರಮುಖ ರಸ್ತೆಗಳಲ್ಲಿ ಅಲ್ಲಲ್ಲಿ ವ್ಯವಸ್ಥಿತವಾಗಿ ರಸ್ತೆ ಉಬ್ಬುಗಳನ್ನು (Speed Breakers) ನಿರ್ಮಿಸಬೇಕಿದೆ. ಅಲ್ಲದೆ, ಚಾಲಕರಿಗೆ ದೂರದಿಂದಲೇ ತಿಳಿಯುವಂತೆ ಈ ಉಬ್ಬುಗಳ ಮೇಲೆ ಬಿಳಿ ಪಟ್ಟೆಗಳನ್ನು ಬಳಿಯುವುದರಿಂದ ವಾಹನಗಳ ವೇಗ ತಗ್ಗಿ, ಅಳಿಲುಗಳ ಅಮೂಲ್ಯ ಜೀವ ಉಳಿಯುತ್ತದೆ.

ರಾಮಾಯಣದ ಕಾಲದಲ್ಲಿ ಸೇತುವೆ ಕಟ್ಟಲು ಅಳಿಲು ತನ್ನದೇ ಆದ ಪುಟ್ಟ ಸೇವೆಯನ್ನು ನೀಡಿತ್ತು. ಇಂದು ಆ ಅಳಿಲುಗಳ ಜೀವ ಉಳಿಸಲು ರಸ್ತೆ ಉಬ್ಬುಗಳನ್ನು ನಿರ್ಮಿಸುವ ಮೂಲಕ ನಾವು ಅವುಗಳಿಗೆ ಸಣ್ಣದೊಂದು 'ಅಳಿಲು ಸೇವೆ'ಯನ್ನು ಮಾಡಬೇಕಿದೆ. ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ಸ್ಥಳೀಯ ಆಡಳಿತ ದವರು ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.

ಸೊಳ್ಳೆ ಬತ್ತಿಗಳು ಆರೋಗ್ಯಕ್ಕೆ ಹಾನಿಕಾರಕ

ಮಾನ್ಯರೇ,

ಸೊಳ್ಳೆ ನಿವಾರಕ ಅಗರಬತ್ತಿಗಳಿಂದ ಎದುರಾಗುವ ಗಂಭೀರ ಆರೋಗ್ಯದ ಅಪಾಯಗಳ ಕುರಿತು ವರದಿಗಳಾಗಿವೆ. ಮಾರುಕಟ್ಟೆಯಲ್ಲಿರುವ ಶೇಕಡಾ 85 ರಷ್ಟು ಉತ್ಪನ್ನಗಳು ಕೇಂದ್ರ ಕೀಟನಾಶಕಗಳ ನೋಂದಣಿ ಅನುಮೋದನೆ ಹೊಂದಿಲ್ಲದಿರುವುದು ಆತಂಕಕಾರಿ ಸಂಗತಿ. ಧೂಮಪಾನದಷ್ಟೇ ಮಾರಕವಾಗಿರುವ ಈ ಹೊಗೆಯಿಂದ ಶೇಕಡಾ 70 ರಷ್ಟು ವೈದ್ಯರು ಉಸಿರಾಟದ ತೊಂದರೆಗಳನ್ನು ಗುರುತಿಸಿದ್ದಾರೆ. ಜನರು ಇವು ಸುರಕ್ಷಿತವೆಂದು ನಂಬಿರುವುದು ಜಾಗೃತಿಯ ಕೊರತೆಯನ್ನು ತೋರಿಸುತ್ತದೆ. ಸರ್ಕಾರವು ತಕ್ಷಣವೇ ಇಂತಹ ಕಾನೂನುಬಾಹಿರ ಮತ್ತು ಅಸುರಕ್ಷಿತ ಉತ್ಪನ್ನಗಳ ಮಾರಾಟದ ಮೇಲೆ ಕಟ್ಟುನಿಟ್ಟಿನ ನಿಷೇಧ ಹೇರಬೇಕು. ಸಾರ್ವಜನಿಕರು ಆಯುರ್ವೇದ ಮೂಲಿಕೆಗಳು ಹಾಗೂ ಬೇವಿನ ಎಣ್ಣೆಯಂತಹ ನೈಸರ್ಗಿಕ ಪರ್ಯಾಯಗಳನ್ನು ಬಳಸಲು ಪ್ರೇರೇಪಿಸಬೇಕು.

–ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.

ಮೋದಿಯವರಿಗೆ ಅಭಿನಂದನೆಗಳು

ಮಾನ್ಯರೆ,

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಸ್ವೀಡನ್ ದೇಶದ ಅತ್ಯುನ್ನತ ಗೌರವ ಪ್ರಶಸ್ತಿಯಾದ "ರಾಯಲ್ ಆರ್ಡರ್ ಆಫ್ ಪೋಲಾರ್ ಸ್ಟಾರ್ ಕಮಾಂಡರ್ ಗ್ರಾಂಡ್ ಕ್ರಾಸ್" ಅನ್ನು ಪ್ರಧಾನ ಮಾಡಿರುವುದು ಸಂತಸದ ವಿಚಾರವಾಗಿದೆ. ಸ್ವೀಡನ್ನಿಗೆ ಇತ್ತೀಚೆಗೆ ಭೇಟಿ ನೀಡಿರುವ ಮೋದಿಯವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇದರೊಂದಿಗೆ, ಮೋದಿಯವರು 31 ದೇಶಗಳ ಅತ್ಯುನ್ನತ ಗೌರವ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. ದೇಶದ ಜನರಿಗೆ ಇದೊಂದು ಹೆಮ್ಮೆಯ ವಿಚಾರವಾಗಿದ್ದು, ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಎರಡು ಹೊಸ ಯಂತ್ರ ಶ್ಲಾಘನೀಯ

ಮಾನ್ಯರೆ,

ನೌಕರರ ಪ್ರತಿಭಟನೆ ಹಾಗೂ ಸಾರ್ವಜನಿಕರ ಹೋರಾಟದ ಫಲವಾಗಿ ತಿ.ನರಸೀಪುರ ತಾಲೂಕಿನ ರೇಷ್ಮೆ ನೂಲು ತಯಾರಿಕಾ ಘಟಕದ 5 ಎಕರೆ ಭೂಮಿಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಿದ್ದುದನ್ನು, ವಾಪಸ್ಸು ಪಡೆದು ಅಲ್ಲಿ ಹೊಸದಾಗಿ ಎರಡು ನೂಲು ತಯಾರಿಕಾ ಯಂತ್ರವನ್ನು ಅಳವಡಿಸುತ್ತಿರುವುದು ತುಂಬಾ ಶ್ಲಾಘನೀಯ.

ಹೊಸ ಯಂತ್ರಗಳ ಅಳವಡಿಕೆಯ ಹಿನ್ನೆಲೆಯಲ್ಲಿ 30 ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುತ್ತಿರುವುದರ ಪರಿಣಾಮವಾಗಿ, ಹೆಚ್ಚಿನ ರೇಷ್ಮೆ ನೂಲು ತಯಾರಿಕೆಯಾಗುವುದರಿಂದ ಮೈಸೂರಿನ ರೇಷ್ಮೆ ಸೀರೆ ತಯಾರಿಕಾ ಘಟಕದ ಬೇಡಿಕೆಗೆ ಅನುಗುಣವಾಗಿ, ರೇಷ್ಮೆ ನೂಲು ಪೂರೈಸಲು ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಹೊಸ ಯಂತ್ರಗಳು ಸಹಕಾರಿಯಾಗುವ ಸಂಗತಿ ಮೆಚ್ಚುವಂತದ್ದು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ್ದ ಈ ಕಾರ್ಖಾನೆಯಲ್ಲಿ ತಯಾರಾಗುವ ರೇಷ್ಮೆ ಸೀರೆ, ಪಂಚೆ ಮುಂತಾದವು ತಮ್ಮ ಸಾಂಪ್ರದಾಯಿಕ ಶೈಲಿ ಮತ್ತು ಗುಣಮಟ್ಟದಿಂದಾಗಿ ಪ್ರಖ್ಯಾತವಾಗಿದ್ದು ಈಗ ಹೊಸ ಯಂತ್ರಗಳ ಅಳವಡಿಕೆಯಿಂದ ಹೆಚ್ಚು ಉತ್ಪಾದನೆಯಾಗುವುದು ಸ್ವಾಗತಾರ್ಹ. ತಿ.ನರಸೀಪುರದ ಈ ರೇಷ್ಮೆ ನೂಲು ತಯಾರಿಕಾ ಘಟಕ ಉಳಿಸಿಕೊಳ್ಳಲು ಹೋರಾಟ ನಡೆಸಿದ ಪ್ರತಿಯೊಬ್ಬರೂ ಅಭಿನಂದನಾರ್ಹರು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ವಿವೇಚನೆ ಜತೆ ದೇಶದ ಹಿತವೂ ಇರಬೇಕು...!

ನಮ್ಮೆಲ್ಲರ ಸಹಜ ಗುಣವೆಂದರೆ ನಾವು ಆದಷ್ಟೂ ನೆಮ್ಮದಿಯಾಗಿ ಬಾಳಬೇಕು. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳ ಬೇಕು. ಮುಂದೆ ಬರಬಹುದಾದ ಕಷ್ಟಗಳನ್ನು ಎದುರಿಸಲು ಈಗಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದೇ ಆಗಿರುತ್ತದೆ. ಈಗ ಮಳೆಗಾಲದ ಆರಂಭದ ಸಮಯ. ಮಳೆ ಬರುವಾಗ ಹೊರಗೆ ಹೋಗಲಾಗುವುದಿಲ್ಲ ಎಂಬ ಕಾರಣದಿಂದ ಹಲವು ತಿಂಗಳಿಗೆ ಆಗುವಷ್ಟು ಸಾಮಾಗ್ರಿಗಳನ್ನು ಖರೀದಿಸಿ ಇಟ್ಟುಕೊಂಡರೆ ಒಳ್ಳೆಯದು ಎಂದು ಭಾವಿಸಿ ಖರೀದಿಸುತ್ತೇವೆ. ಇದನ್ನು ಮುಂಜಾಗರೂಕತಾ ಕ್ರಮ ಎಂದು ಭಾವಿಸುತ್ತೇವೆ.

ಇದು ಸಹಜವಾದದ್ದು. ಇದು ತಪ್ಪು ಎಂದೇನಲ್ಲ. ಆದರೆ ಎಷ್ಟನ್ನು ಖರೀದಿಸಬೇಕು ಎಂಬ ಬಗ್ಗೆ ವಿವೇಚನೆ ಬೇಕಾಗುತ್ತದೆ. ಹಾಗೆಯೇ ನಾಳೆ ಬರಬಹುದಾದ ಆರ್ಥಿಕ ಸಂಕಷ್ಟಗಳ ಸಮಯದಲ್ಲಿ ಅನುಕೂಲವಾಗಲಿ ಎಂದು ಮೊದಲಿನಿಂದಲೂ ಕೂಡಿಡುವುದು ಸಹ ನಮ್ಮಲ್ಲಿ ಸಹಜವಾಗಿ ಬಂದಿರುವಂತಹುದು. ಇದು ಎಷ್ಟು ಉಪಕಾರಿ ಕ್ರಮ ಎಂದರೆ ಈ ಹಿಂದೆ ಅನೇಕ ದೇಶಗಳು ಆರ್ಥಿಕ ಸಮಸ್ಯೆಯಿಂದ ಬಳಲುವಂತಾದಾಗ ನಮ್ಮ ದೇಶಕ್ಕೆ ಅದು ಅಂತಹ ಸಮಸ್ಯೆಯೇ ಆಗಲಿಲ್ಲ. ಮುಂದೆ ಇಂತಹ ಸಮಸ್ಯೆ ದೇಶಕ್ಕೆ ಆಗಬಾರದು ಎಂದು ನಮ್ಮ ದೇಶವು ಸಹಜ ಸ್ಥಿತಿಯಲ್ಲಿ ಇದ್ದಾಗ ಕೇಂದ್ರ ಸರ್ಕಾರವೇ ಚಿನ್ನ ಖರೀದಿಸುತ್ತದೆ. ಇದರಿಂದಾಗಿ ನಮ್ಮ ದೇಶದಲ್ಲಿ ಅರಾಜಕತೆ ಉಂಟಾಗುವುದಿಲ್ಲ. ಇದೂ ಸರಿಯಾದ ಕ್ರಮವೇ. ಇದನ್ನು ನಾವು ಬಹಳ ವರ್ಷಗಳಿಂದ ಪಾಲಿಸಿಕೊಂಡು ಬರುತ್ತಿದ್ದೇವೆ.

ಆದರೆ ಈಗ ಇಡೀ ವಿಶ್ವದಲ್ಲಿ ಆರ್ಥಿಕ ಸಂಕಟ ಒದಗಿದೆ. ಈ ಸಮಯದಲ್ಲಿ ನಡೆಯುತ್ತಿರುವ ಅನವಶ್ಯಕವಾದ ಯುದ್ಧಗಳು ಮತ್ತೆ ಪ್ರಪಂಚದ ಆರ್ಥಿಕ ಸ್ಥಿತಿಯನ್ನು ಅಲ್ಲೋಲ–ಕಲ್ಲೋಲ ಮಾಡುತ್ತಿದೆ. ಕೆಲವು ದೇಶಗಳು ನೇರವಾಗಿ ಯುದ್ಧದಲ್ಲಿ ಭಾಗಿಯಾದರೆ, ಕೆಲವು ದೇಶಗಳು ಪರೋಕ್ಷವಾಗಿ ಯುದ್ಧ ಮಾಡುವ ದೇಶಗಳಿಗೆ ಬೆಂಬಲ ನೀಡುತ್ತಿವೆ. ನಮ್ಮ ದೇಶ ಯುದ್ಧದಲ್ಲಿ ನೇರವಾಗಿ ಭಾಗಿಯಾಗದಿದ್ದರೂ ದೇಶದ ಆರ್ಥಿಕ ಸ್ಥಿತಿಯ ಮೇಲೆ ಹೊಡೆತ ಕಂಡುಬರುತ್ತಿದೆ. ಹೀಗಾಗಿ ದೇಶದ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಆರ್ಥಿಕ ಸ್ಥಿತಿಯ ಸುಧಾರಿಸುವ ತನಕ ಕೆಲವು ಕ್ರಮಗಳನ್ನು ಕೈಗೊಳ್ಳುವಂತೆ ದೇಶದ ಜನರಿಗೆ ಕರೆ ನೀಡಿದ್ದಾರೆ.

ನಮ್ಮ ದೇಶ ಕೆಲವು ವಿಷಯಗಳಲ್ಲಿ ಸ್ವಾವಲಂಬಿಯಾದರೂ, ಅನೇಕ ವಿಷಯಗಳಲ್ಲಿ ಪರಾವಲಂಬಿಯಾಗಿದೆ. ಉದಾಹರಣೆಗೆ ಇಂಧನ ಕ್ಷೇತ್ರ. ನಮ್ಮ ದೇಶದಲ್ಲಿನ ಇಂಧನ ಉತ್ಪಾದನೆ ಬಹಳ ಕಡಿಮೆ. ಇಂದು ದೇಶಾದ್ಯಂತ ದಿನದಿಂದ ದಿನಕ್ಕೆ ಇಂಧನ ಬಳಕೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ಅದನ್ನು ಪೂರೈಸುವುದಕ್ಕಾಗಿ ನಾವು ವಿದೇಶಗಳಿಂದ ಅದನ್ನು ಆಮದು ಮಾಡಿಕೊಳ್ಳಬೇಕಾಗಿದೆ.

ಈಗಂತೂ ಮಧ್ಯಪ್ರಾಚ್ಯ ದೇಶದಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿಯಿಂದಾಗಿ ಹಣ ನೀಡುತ್ತೇವೆ ಎಂದರೂ ಇಂಧನ ತರಿಸಲು ಕಷ್ಟವಾಗುತ್ತಿದೆ. ಎಲ್ಲೆಡೆಯ ವ್ಯಾಪಾರಿ ಮನೋಭಾವದಂತೆ ಇಂಧನಕ್ಕೆ ಅದನ್ನು ಪೂರೈಸುವ ದೇಶಗಳು ಹೆಚ್ಚು ಹಣ ವಿಧಿಸುತ್ತಿವೆ. ಇಂಧನ ಬೇಕು ಎಂದಾದರೆ ಹೆಚ್ಚು ಹಣ ನೀಡಿ ಖರೀದಿಸಲಿ ಎಂಬುದು ಅವುಗಳ ಧೋರಣೆ. ನಮಗೆ ಇಂಧನ ಬೇಕೇಬೇಕು, ಅದು ಅಗತ್ಯತೆಗಳಲ್ಲಿ ಒಂದಾಗಿದೆ. ಹಾಗಾಗಿ ದುಬಾರಿ ಬೆಲೆ ನೀಡಿಯಾದರೂ ಇಂಧನ ಖರೀದಿಸಬೇಕು. ಅದು ಅನಿವಾರ್ಯ.

ಕೆಲವು ದಿನಗಳು ದೇಶದಲ್ಲಿ ಇಂಧನ ಸಿಗುವುದಿಲ್ಲ ಎಂದು ಭಾವಿಸಿದರೆ ದೇಶದ ಸ್ಥಿತಿ ಹೇಗಿರುತ್ತದೆ ಎಂದು ಕಲ್ಪಿಸುವುದೂ ಕಷ್ಟವಾಗುತ್ತದೆ. ಹಾಗಾಗಿ ದುಬಾರಿ ಬೆಲೆ ನೀಡಿಯಾದರೂ ಹೊರ ದೇಶಗಳಿಂದ ಇಂಧನ ಖರೀದಿಸಬೇಕಾಗಿದೆ. ಇದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿ ಬಿಗಡಾಯಿಸುತ್ತಿದೆ. ಹಾಗೆ ನೋಡಿದರೆ ನಮ್ಮ ದೇಶ ಯುದ್ಧದಲ್ಲಿ ನೇರವಾಗಿ ಭಾಗಿಯಾಗಿಲ್ಲ. ಅದರಂತೆ ದೇಶದ ಜನರೂ ಯುದ್ಧದಲ್ಲಿ ಭಾಗಿಯಾಗಿಲ್ಲ. ಆದರೂ ಯುದ್ಧದ ಪರಿಣಾಮ ಎಲ್ಲರನ್ನೂ ಕಾಡುತ್ತಿದೆ. ಈ ಕಾರಣದಿಂದಾಗಿ ಇಂಧನವನ್ನು ಅಗತ್ಯದಷ್ಟು ಮಾತ್ರ ಉಪಯೋಗಿಸಿ ಎಂದು ನಮ್ಮ ದೇಶದ ಪ್ರಧಾನಮಂತ್ರಿ ದೇಶದ ಜನರನ್ನು ಕೈಮುಗಿದು ಬೇಡಿಕೊಂಡಿದ್ದಾರೆ. ಇದರ ಭಾಗವಾಗಿ ಇಂಧನ ದರ ಹೆಚ್ಚಿಸಿದ್ದಾರೆ.

ಇದು ಹಣ ಮಾಡುವ ದಂಧೆಯಾಗಿ ಕಂಡುಬರುವುದಿಲ್ಲ. ಆದರೆ ದರ ಹೆಚ್ಚಾದಾಗ ಜನರು ಅನಗತ್ಯವಾಗಿ ಖರೀದಿಸುವುದನ್ನು ಕಡಿಮೆ ಮಾಡಬಹುದು. ಇಂಧನ ಖರೀದಿ ದೇಶದಲ್ಲಿ ಕಡಿಮೆಯಾದರೆ, ಹೊರಗಿನಿಂದ ಖರೀದಿಸುವುದನ್ನು ಕಡಿಮೆ ಮಾಡಬಹುದು. ಆಗ ದೇಶದ ಹಣ ದೇಶದಲ್ಲೇ ಉಳಿಯುತ್ತದೆ ಎಂಬುದು ಇದರ ಆಶಯ. ಆದರೆ ಕೆಲವರು ಇದರಲ್ಲೂ ರಾಜಕೀಯ ಮಾಡಿ ಜನರ ದಾರಿ ತಪ್ಪಿಸುತ್ತಿದ್ದಾರೆ. ದೇಶದ ಸಂಕಟದ ಸ್ಥಿತಿಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳು ಒಂದಾಗಿ ನಿಲ್ಲಬೇಕಾಗುತ್ತದೆ. ಹಾಗೆಯೇ ಜನರೂ ಸಹಕರಿಸಬೇಕಾಗುತ್ತದೆ. ದೇಶ ಉಳಿದರೆ ಮಾತ್ರ ನಾವೆಲ್ಲಾ ಕ್ಷೇಮವಾಗಿ ಉಳಿಯಬಹುದು. ಇಂತಹ ಸಮಯದಲ್ಲಿ ನಾವು ನಮ್ಮ

> ಈಗ ಇಡೀ ವಿಶ್ವದಲ್ಲಿ ಆರ್ಥಿಕ ಸಂಕಟ ಒದಗಿದೆ. ಈ ಸಮಯದಲ್ಲಿ ನಡೆಯುತ್ತಿರುವ ಅನಾವಶ್ಯಕವಾದ ಯುದ್ಧಗಳು ಮತ್ತೆ ಪ್ರಪಂಚದ ಆರ್ಥಿಕ ಸ್ಥಿತಿಯನ್ನು ಅಲ್ಲೋಲ–ಕಲ್ಲೋಲ ಮಾಡುತ್ತಿದೆ. ಕೆಲವು ದೇಶಗಳು ನೇರವಾಗಿ ಯುದ್ಧದಲ್ಲಿ ಭಾಗಿಯಾದರೆ, ಕೆಲವು ದೇಶಗಳು ಪರೋಕ್ಷವಾಗಿ ಯುದ್ಧ ಮಾಡುವ ದೇಶಗಳಿಗೆ ಬೆಂಬಲ ನೀಡುತ್ತಿವೆ. ನಮ್ಮ ದೇಶ ಯುದ್ಧದಲ್ಲಿ ನೇರವಾಗಿ ಭಾಗಿಯಾಗದಿದ್ದರೂ ಸಹ, ದೇಶದ ಆರ್ಥಿಕ ಸ್ಥಿತಿಯ ಮೇಲೆ ಹೊಡೆತ ಕಂಡುಬರುತ್ತಿದೆ. ಹೀಗಾಗಿ ದೇಶದ ಪ್ರಧಾನಿ ಮೋದಿ ದೇಶದ ಆರ್ಥಿಕ ಸ್ಥಿತಿಯ ಸುಧಾರಿಸುವ ತನಕ ಕೆಲವು ಕ್ರಮಗಳನ್ನು ಕೈಗೊಳ್ಳುವಂತೆ ದೇಶದ ಜನರಿಗೆ ಕರೆ ನೀಡಿದ್ದಾರೆ.



ವಿವೇಚನೆ ಉಪಯೋಗಿಸಬೇಕಾಗುತ್ತದೆ.



ದೇಶದ ಪ್ರಧಾನಿಯವರು ಕೋರಿರುವ ಮತ್ತೊಂದು ಕೋರಿಕೆ ಎಂದರೆ ಚಿನ್ನವನ್ನು ಅನಗತ್ಯವಾಗಿ ಖರೀದಿಸಬೇಡಿ ಎಂದು. ನಮಗೆ ತಿಳಿದಿರುವಂತೆ ಎಲ್ಲಾ ದೇಶಗಳ ಆರ್ಥಿಕ ಸ್ಥಿತಿಗತಿ ಆ ದೇಶದಲ್ಲಿರುವ ಚಿನ್ನದ ಸಂಗ್ರಹದ ಮೇಲೆಯೇ ಅವಲಂಬಿತವಾಗಿರುತ್ತದೆ. ಯಾವ ದೇಶದಲ್ಲಿ ಚಿನ್ನದ ಸಂಗ್ರಹ ಹೆಚ್ಚಾಗಿರುವುದೋ ಅಂತಹ ದೇಶ ಆರ್ಥಿಕವಾಗಿ ಸದೃಢ ಎಂಬುದು ಕಂಡುಬರುತ್ತದೆ. ನಮ್ಮ ದೇಶದಲ್ಲೂ ಚಿನ್ನದ ಉತ್ಪಾದನೆಯಾಗುತ್ತದೆ. ಆದರೆ ಅದು ನಮಗೆ ಸಾಲದಾಗಿದೆ. ಇದರಿಂದಾಗಿ ವಿದೇಶದಿಂದ ಚಿನ್ನವನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಚಿನ್ನದ ಬೆಲೆ ನಾಗಾಲೋಟದಿಂದ ಹೆಚ್ಚಾಗುತ್ತಿದೆ. ನಮ್ಮಲ್ಲಿ ಮೊದಲಿನಿಂದಲೂ ಚಿನ್ನದ ವ್ಯಾಮೋಹ ಜಾಸ್ತಿ.

ಮೊದಲೆಲ್ಲಾ ಚಿನ್ನದ ಆಭರಣ ಧರಿಸುವುದು ಘನತೆಯ ವಿಷಯವಾಗಿತ್ತು. ಮದುವೆ, ಮುಂಜಿ, ಗೃಹಪ್ರವೇಶದಂತಹ ಸಂದರ್ಭದಲ್ಲಿ ಮಹಿಳೆಯರು ಹೆಚ್ಚು ಚಿನ್ನದ ಆಭರಣ ಧರಿಸಿ, ತಮ್ಮ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಿದ್ದರು. (ಆದರೆ ಇದು ಇತ್ತೀಚೆಗೆ ಸ್ವಲ್ಪ ಕಡಿಮೆಯಾಗಿರುವಂತೆ ಕಂಡುಬರುತ್ತದೆ) ಈಗ ಆಭರಣಕ್ಕೆ ಎಂದು ಅಲ್ಲದಿದ್ದರೂ, ದೇಶದಲ್ಲಿ ಚಿನ್ನದ ಖರೀದಿ ಮುಂದುವರೆದಿದೆ. ಈಗ ಚಿನ್ನದ ಖರೀದಿ ಉಳಿತಾಯದ ಮಾರ್ಗವಾಗಿ ಬದಲಾಗಿದೆ. ಇಂದು ಲಕ್ಷ ಕೊಟ್ಟು ಚಿನ್ನ ಖರೀದಿಸಿದರೆ, ಅದು ಕೆಲವೇ ದಿನಗಳು/ವರ್ಷಗಳಲ್ಲಿ ಎರಡು ಪಟ್ಟು ಆಗಬಹುದು ಎಂದು ಜನರು ಚಿನ್ನ ಖರೀದಿಸುತ್ತಾರೆ. ಈಗಿನ ಪರಿಸ್ಥಿತಿಯಲ್ಲಿ ಚಿನ್ನವನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಕ್ಷೇಮವಲ್ಲ ಎಂದು ಅದನ್ನು ಬ್ಯಾಂಕಿನ ಲಾಕರ್‌ಗಳಲ್ಲಿ ಇಡುತ್ತಾರೆ. ಅಂದರೆ ಅದಕ್ಕೆ ಹೂಡಿಕೆ ಮಾಡಿರುವ ಹಣ ಮತ್ತೆ ಚಲಾವಣೆಗೇ ಬರುವುದಿಲ್ಲ.

ಇದೂ ದೇಶದ ಆರ್ಥಿಕ ಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅದರ ಬದಲು ಕಡಿಮೆಯಾದರೂ ಸರಿ, ಸ್ವಲ್ಪ ಬಡ್ಡಿ ಬರುವಂತೆ ಬ್ಯಾಂಕುಗಳಲ್ಲಿ ಠೇವಣಿ ಇರಿಸಿದರೆ, ಆ ಠೇವಣಿ ಹಣವನ್ನು ಬ್ಯಾಂಕಿನ ಮೂಲಕ ದೇಶ ಉಪಯೋಗಿಸಬಹುದು. ಆ ಹಣವನ್ನು ಅಗತ್ಯವಿದ್ದವರಿಗೆ ಸಾಲವಾಗಿ ನೀಡಬಹುದು. ಹೀಗೆ ಸಾಲ ಪಡೆದವರು ಹೊಸ ಉದ್ಯಮ ಸ್ಥಾಪಿಸಬಹುದು. ಇದರಿಂದ ಒಂದಷ್ಟು ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದಲ್ಲದೆ, ದೇಶದ ಅಗತ್ಯವನ್ನೂ ಪೂರೈಸಿಕೊಳ್ಳಬಹುದು. ನಮ್ಮ ಅಗತ್ಯ ನಮ್ಮಲ್ಲೇ ಈಡೇರಿದಾಗ ವಿದೇಶದಿಂದ ಅಂತಹುದನ್ನು ಆಮದು ಮಾಡಿಕೊಳ್ಳುವ ಸ್ಥಿತಿ ಕಡಿಮೆಯಾಗಬಹುದು. ಈ ಕಾರಣದಿಂದಲೂ ಅಗತ್ಯಕ್ಕಿಂತ ಹೆಚ್ಚು ಚಿನ್ನ ಖರೀದಿ ಮಾಡಬೇಡಿ ಎಂದು ಪ್ರಧಾನಿ ಕರೆ ನೀಡಿದ್ದಾರೆ.

ಇದನ್ನೂ ಕೆಲವರು ಆಕ್ಷೇಪಿಸುತ್ತಿದ್ದಾರೆ. ಹಾಗಿದ್ದರೆ ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ಅಗತ್ಯವಾದ ಚಿನ್ನವನ್ನೇ ಖರೀದಿಸಬಾರದೇ? ಎಂಬ ಪ್ರಶ್ನೆ ಎತ್ತುತ್ತಿದ್ದಾರೆ. ಪ್ರಧಾನಮಂತ್ರಿ ಹಾಗೆ ಹೇಳಿಲ್ಲ. ಅಗತ್ಯವಿರುವಷ್ಟು ಮಾತ್ರ ಚಿನ್ನ ಖರೀದಿಸಿ. ಉಳಿತಾಯದ ನೆಲೆಯಲ್ಲಿ ಹೆಚ್ಚು ಖರೀದಿಸಬೇಡಿ ಎಂದಿದ್ದಾರೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಈವರೆವಿಗೆ ಇಂತಹ ಕರೆ ನೀಡದೆ, ಈಗ ಏಕೆ ಹೀಗೆ ಹೇಳುತ್ತಿದ್ದಾರೆ? ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಪರಿಸ್ಥಿತಿ ಹೀಗೇ ಇರುವುದಿಲ್ಲ. ಪ್ರಧಾನಿಯವರ ಕರೆ ಒಂದು ವರ್ಷಕ್ಕೆ ಮಾತ್ರ ಎಂದು ಹೇಳಿರುವುದನ್ನು ಗಮನಿಸಬೇಕು. ದೇಶದ ಆರ್ಥಿಕ ಸ್ಥಿತಿ ನಿಯಂತ್ರಣಕ್ಕೆ ಬಂದ ನಂತರ, ಹೀಗೆ ಯಾರೂ ಕರೆ ನೀಡುವುದಿಲ್ಲ. ಇದನ್ನೂ ಸಹಾ ಗಮನಿಸಬೇಕು.

ಇನ್ನು ಮನೆಯ ಹೆಂಗಸರಂತೂ ಮನೆ ಖರ್ಚಿಗಾಗಿ ಪತಿ (ಈಗ ಪತ್ನಿಯೂ ಆಗಬಹುದು) ನೀಡುವ ಹಣದಲ್ಲಿ ಒಂದಷ್ಟು ಉಳಿತಾಯ ಮಾಡುತ್ತಾರೆ. ಇದಕ್ಕೆ ಮೊದಲಿನಿಂದಲೂ ಕ್ಷೇಮವಾದ ಜಾಗ ಸಾಸುವೆ ಡಬ್ಬಿ ಎಂದೇ ಹೇಳಲಾಗುತ್ತದೆ. ಏಕೆಂದರೆ ಸಾಸುವೆ ಸುಲಭವಾಗಿ ಕೆಡುವುದಿಲ್ಲ, ಅದಕ್ಕೆ ಇರುವೆಯಂತಹ ಕ್ರಿಮಿಗಳು ಅದರ ಮೇಲೆ ದಾಳಿ ಮಾಡುವುದಿಲ್ಲ ಇತ್ಯಾದಿ ಕಾರಣಗಳಿವೆ. ನಮ್ಮ ಅನೇಕ ಹಿಂದಿನ ಕಥೆಗಳಲ್ಲಿ ತಾನು ಕಷ್ಟುಪಟ್ಟು ಉಳಿಸಿದ್ದ ಹಣವನ್ನು ಸಾಸುವೆ ಡಬ್ಬಿಯಿಂದ ತೆಗೆದು ಕೊಟ್ಟಳು ಎಂಬ ಮಾತನ್ನು ಕೇಳುತ್ತೇವೆ. ಇದು ಸಂಸಾರದ ಯಶಸ್ಸಿನ ಗುಟ್ಟೂ ಹೌದು. ಈ ರೀತಿ ಸಂಗ್ರಹಿಸಿದ ಹಣ ನಮ್ಮ ಉಪಯೋಗಕ್ಕೆ, ತನ್ಮೂಲಕ ದೇಶದ ಉಪಯೋಗಕ್ಕೆ ಬರಬೇಕು. ಅದನ್ನು ಮಾರುಕಟ್ಟೆಯಲ್ಲಿ ಮತ್ತೆ ಚಲಾವಣೆಗೆ ತರಬೇಕು. ಆಗ ಅದು ಸಮರ್ಪಕವಾದ ನಿರ್ಧಾರ ಎನಿಸುತ್ತದೆ.

ಇದು ಕೇವಲ ಚಿನ್ನಕ್ಕೆ ಸಂಬಂಧಿಸಿದ್ದು ಎಂದೇನಲ್ಲ. ಅನೇಕರು ಮುಂದೆ ಕೆಲವು ವಸ್ತುಗಳ ಬೆಲೆ ಏರಿಕೆಯಾಗಬಹುದು. ಹಾಗಾಗಿ ಬೆಲೆ ಕಡಿಮೆ ಇರುವಾಗಲೇ ಹೆಚ್ಚಾಗಿ ಖರೀದಿಸಿ ಇಟ್ಟುಕೊಂಡರೆ ಮುಂದೆ ಅದನ್ನು ಮಾರಿ ಹಣ ಮಾಡಿಕೊಳ್ಳಬಹುದು ಎಂದು ಲಾಭದ ದೃಷ್ಟಿಯಲ್ಲಿ ಆಲೋಚಿಸಿ ಹೆಚ್ಚಾಗಿ ಸಂಗ್ರಹಿಸಿ ಇಡುತ್ತಾರೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಅಂತಹ ವಸ್ತುಗಳು ಸುಲಭವಾಗಿ ಸಿಗುವುದಿಲ್ಲ. ಅದು ನಮಗೆ ಅಗತ್ಯ ಎಂದಾದಾಗ ಬೆಲೆ ಏರಿಕೆಯಾಗುತ್ತದೆ. ಇದು ಸ್ವಾಭಾವಿಕ. ಅಗತ್ಯ ಎನಿಸಿದಾಗ ಹಣ ಹೆಚ್ಚಾದರೂ ಕೊಳ್ಳಬೇಕಾಗುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡು ಕೆಲವರು ಹೆಚ್ಚು ಸಂಗ್ರಹದೆಡೆಗೆ ಮನಸ್ಸು ಮಾಡುತ್ತಾರೆ. ಇದೂ ಸಹ ಸಮರ್ಥನೀಯವಲ್ಲ. ನಾನು ಹೆಚ್ಚು ಹಣ ಮಾಡಬೇಕು ಎಂಬ ಧಾವಂತ ದೇಶದ ನೆಮ್ಮದಿಗೆ ಮಾರಕವಾಗಬಾರದು. ಮತ್ತದೇ ಮಾತುಗಳನ್ನು ಹೇಳಬೇಕಾಗುತ್ತದೆ. ದೇಶ ಚೆನ್ನಾಗಿ, ಸುಭದ್ರವಾಗಿದ್ದರೆ ಮಾತ್ರ ನಾವು ಕ್ಷೇಮವಾಗಿರಬಹುದು.

ನಮಗೆ ಬೇಸಿಗೆಯಲ್ಲಿ ನಮ್ಮ ಜಲಾಶಯಗಳಲ್ಲಿನ ನೀರಿನ ಪ್ರಮಾಣ ಕಡಿಮೆಯಾದಾಗ ಆತಂಕವಾಗುತ್ತದೆ. ಮಳೆಗಾಲ ಬಂದು ನೀರು ಹರಿದು ಬಂದಾಗ ಅವೆಲ್ಲವನ್ನೂ ಹಿಡಿದಿಟ್ಟುಕೊಳ್ಳಲಾಗುವುದಿಲ್ಲ. ನಮಗೆ ನೀರಿನ ಮಹತ್ವ ಗೊತ್ತಿದೆ, ಆದ್ದರಿಂದ ನೀರನ್ನು ಜಲಾಶಯದಿಂದ ಹೊರಗೆ ಹರಿಸುವುದಿಲ್ಲ ಎಂದು ಹೇಳಲಾಗುವುದಿಲ್ಲ. ಹಾಗೆ ಮಾಡಿದರೆ ಜಲಾಶಯಕ್ಕೆ ಒತ್ತಡವಾಗಿ ತೊಂದರೆಯಾಗುತ್ತದೆ. ಹಿಂದೆ ಕೆರೆಗಳಲ್ಲಿ ಕೋಡಿ ವ್ಯವಸ್ಥೆ ಇತ್ತು.

ಮಳೆಯ ಪ್ರಮಾಣ ಅನುಸರಿಸಿ ಊರಿನ ಹಿರಿಯರು ಕೆರೆಗೆ ಎಷ್ಟು ನೀರು ಬರಬಹುದು ಎಂದು ಊಹಿಸಿ ಹೆಚ್ಚುವರಿ ನೀರನ್ನು ಹೊರಗೆ ಹರಿಸುವಂತೆ ತಿಳಿಸುತ್ತಿದ್ದರು. ಇದರ ಅರ್ಥ ಬಂದಿದ್ದೆಲ್ಲಾ ನಮಗೇ ಇರಲಿ ಎಂದು ಭಾವಿಸಲಾಗುವುದಿಲ್ಲ. ಇದು ನಮ್ಮ ಆರ್ಥಿಕ ಸ್ಥಿತಿಗೂ ಅನ್ವಯವಾಗುತ್ತದೆ. ಎಲ್ಲವನ್ನೂ ಕೂಡಿಟ್ಟು ಅನುಭವಿಸಲಾಗುವುದಿಲ್ಲ. ಕೆಲವಷ್ಟು ಹೊರಗೂ ಬಿಡ ಬೇಕಾಗುತ್ತದೆ. ಮಳೆಗಾಲದಲ್ಲಿ ಬಂದ ನೀರೆಲ್ಲವನ್ನೂ ಕೂಡಿಟ್ಟರೆ ಅಣೆಕಟ್ಟೆಗೆ ತೊಂದರೆಯಾಗುತ್ತದೆ. ಹೆಚ್ಚುವರಿ ನೀರು ಹರಿಯಲೇಬೇಕು. ಅದೇ ಜೀವನ ಪದ್ಧತಿ. ಈಗ ಸಂಕಷ್ಟ ಬಂದಿದೆ. ಅದರಿಂದ ಹೊರಬರಲು ಎಲ್ಲರೂ ಸಹಕರಿಸುವುದು ಜವಾಬ್ದಾರಿ ಎನಿಸಿಕೊಳ್ಳುತ್ತದೆ. ಹಿಂದಿನವರು ಹೇಳುತ್ತಿದ್ದ ಒಂದು ಮಾತು ಎಂದರೆ 'ಹಣ (ಲಕ್ಷ್ಮಿ) ಇರುವುದು ಉಪಯೋಗಕ್ಕೇ ಹೊರತು ಉಪಭೋಗಕ್ಕಲ್ಲ' ಎಂದು. ಹಣ ಬಳಸಬೇಕು, ಆದರೆ ಅದರಲ್ಲಿ ವಿವೇಚನೆ ಇರಬೇಕು, ದೇಶದ ಹಿತವೂ ಇರಬೇಕು.

ಕುವೆಂಪು ಕವಿತೆಗಳಿಗೆ ಆರ್.ಕೆ.ಲಕ್ಷ್ಮಣ್ ರೇಖಾಚಿತ್ರ 'ಲಕ್ಷ್ಮಣ ರೇಖೆ' ಕೃತಿ ಬಿಡುಗಡೆ

ಲಕ್ಷ್ಮಣ ರೇಖಾಚಿತ್ರಗಳು ಕುವೆಂಪುರವರ ಪದ್ಯಗಳಿಗೆ ಹೊಸತನ ತಂದುಕೊಟ್ಟಿವೆ: ಕುವೆಂಪುರವರ ಪುತ್ರಿ ತಾರಿಣಿ ಚಿದಾನಂದ ಅಭಿಮತ



ರಾಷ್ಟ್ರಕವಿ ಕುವೆಂಪು ಅವರ ಕವಿತೆಗಳಿಗೆ ಆರ್.ಕೆ.ಲಕ್ಷ್ಮಣ್ ಅವರು ಬರೆದಿರುವ ರೇಖಾಚಿತ್ರಗಳ 'ಲಕ್ಷ್ಮಣ ರೇಖೆ' ಪುಸ್ತಕವನ್ನು ಆರ್.ಕೆ. ಐಪಿಆರ್ ಮ್ಯಾನೇಜ್ಮೆಂಟ್ ಪ್ರೈವೇಟ್ ಲಿ. ವ್ಯವಸ್ಥಾಪಕ ನಿರ್ದೇಶಕಿ ಉಷಾ ಲಕ್ಷ್ಮಣ್ ಬಿಡುಗಡೆ ಮಾಡಿದರು.

ಮೈಸೂರು, ಮೇ 22(ಎಂಕೆ)– ರಾಷ್ಟ್ರಕವಿ ಕುವೆಂಪು ಅವರ ಕವಿತೆಗಳಿಗೆ ಆರ್.ಕೆ.ಲಕ್ಷ್ಮಣ್ ಅವರು ಬರೆದಿರುವ ರೇಖಾಚಿತ್ರಗಳ 'ಲಕ್ಷ್ಮಣ ರೇಖೆ' ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪೂರ್ಣಚಂದ್ರ ಕನ್ನಡ ಅಧ್ಯಯನ ಕೇಂದ್ರ, ಕುವೆಂಪು ಕಾವ್ಯಾಧ್ಯಯನ ಪೀಠ ಹಾಗೂ ಮಹಾರಾಜ ಕಾಲೇಜಿನ ಕನ್ನಡ ಸಂಘದ ವತಿಯಿಂದ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಹಾಗೂ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಆರ್.ಕೆ. ಐಪಿಆರ್ ಮ್ಯಾನೇಜ್ಮೆಂಟ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಉಷಾ ಲಕ್ಷ್ಮಣ್ ಪುಸ್ತಕವನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಕುವೆಂಪು ಅವರ ಪುತ್ರಿ ಹಾಗೂ ಹಿರಿಯ ಲೇಖಕಿ ತಾರಿಣಿ ಚಿದಾನಂದಗೌಡ ಮಾತನಾಡಿ, ಕುವೆಂಪು ಅವರ 'ಕಿಂದರಿ ಜೋಗಿ' ಪದ್ಯ ಬರೆಯಲ್ಪಟ್ಟು ಶತಮಾನ ಕಳೆದಿರಬಹುದು. ಆದರೆ ಇಂದಿಗೂ ಅದಕ್ಕೆ ಲಕ್ಷ್ಮಣ್ ಬರೆದ ರೇಖಾಚಿತ್ರಗಳು ಹೊಸತನ ತಂದು ಕೊಟ್ಟಿವೆ. ಮಕ್ಕಳಿಗೆ ಅವು ಹೆಚ್ಚು ಹತ್ತಿರವಾಗುತ್ತವೆ ಲಕ್ಷ್ಮಣ್ ಅವರ ರೇಖಾಚಿತ್ರಗಳನ್ನು ಕಂಡು ಕುವೆಂಪು ಅವರು ಖುಷಿ ಪಡುತ್ತಿದ್ದರು. ತೇಜಸ್ವಿ ಕೂಡ ಸೂಕ್ಷ್ಮವಾಗಿ ಗಮನಿಸುತ್ತಿದ್ದನು. ತೇಜಸ್ವಿ ಚಿಕ್ಕ ವಯಸ್ಸಿನಲ್ಲಿ ರೇಖಾ ಚಿತ್ರಗಳನ್ನು ಬಿಡಿಸುತ್ತಿದ್ದ. ಎಲ್ಲರೂ ಸಾಹಿತಿ... ಸಾಹಿತಿ...ಎಂದ ಕಾರಣ ಸಾಹಿತ್ಯದ ಕಡೆಗೆ ಹೋದೆ, ನಾನು ಮೂಲತಃ ರೇಖಾಚಿತ್ರಗಾರ ಎಂದು ಒಂದು ಕಡೆ ನನಗೆ ತಿಳಿಸಿದ್ದನು ಎಂದು ಸ್ಮರಿಸಿದರು.

ಬಳಿಕ ಪುಸ್ತಕ ಕುರಿತು ಮಾತನಾಡಿದ ಅಂತರರಾಷ್ಟ್ರೀಯ ಕಲಾವಿದ ಡಾ.ಎಂ.ಎಸ್. ಮೂರ್ತಿ, ಆರ್.ಕೆ.ಲಕ್ಷ್ಮಣ್ ಅವರ ರೇಖಾಚಿತ್ರಗಳು ಸಾಮಾನ್ಯ ವ್ಯಕ್ತಿ ಪ್ರಜ್ಞೆ ಮತ್ತು ಸಂವೇದನೆಯ ಪ್ರತೀಕವಾಗಿದ್ದು, ಕಲೆಯ ಅಪೂರ್ವ ಸಂಪತ್ತಾಗಿದೆ. ಕುವೆಂಪು ಅವರ ಕವಿತೆಗಳಿಗೆ ಲಕ್ಷ್ಮಣ್ ಅವರು ರೇಖಾಚಿತ್ರಗಳನ್ನು ಬಿಡಿಸಿರುವುದು ಕೇವಲ ಚಿತ್ರಣವಲ್ಲ. ಅದು ಚಾರಿತ್ರಿಕ ದಾಖಲೆ. ಸುಮಾರು ಐವತ್ತು ವರ್ಷಗಳ ಹಿಂದೆ ಕಾವ್ಯ ಮತ್ತು ದೃಶ್ಯಕಲೆಯ ನಡುವೆ ನಿರ್ಮಾಣವಾದ ಅನುಸಂಧಾನ ಇಂದಿನ ತಲೆಮಾರಿಗೆ ದಾಟಿಸಬೇಕಾದ ಅಮೂಲ್ಯ ಸಂಪತ್ತಾಗಿ ಪುಸ್ತಕವನ್ನು ಹೊರ ತರಲಾಗಿದೆ. ಕಿಂದರಿ ಜೋಗಿ ಕೃತಿಯನ್ನು ಓದುತ್ತ ಲಕ್ಷ್ಮಣ್ ಅವರ ರೇಖಾಚಿತ್ರಗಳನ್ನು ಗಮನಿಸಿದಾಗ ಕುವೆಂಪು ಅವರೇ ಲಕ್ಷ್ಮಣ್ ಅವರ ರೇಖೆಗಳಿಗೆ ಪದ್ಯ ಬರೆದಿದ್ದರೇನೋ ಎಂದೆನಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರೇಖೆ ಎನ್ನುವುದು ದೃಶ್ಯಕಲೆಯ ವ್ಯಾಕರಣವಾಗಿದ್ದು, ಅದನ್ನು ಲಕ್ಷ್ಮಣ್ ಅವರು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡು ದೇಶದ ಜನ ಸಾಮಾನ್ಯರ ಆಲೋಚನಾ ಕ್ರಮ, ನಾಡಿ ಮಿಡಿತ, ಸಂವೇದನೆ, ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಹಾಗೂ ಪ್ರತಿಕ್ರಿಯೆಗಳನ್ನು ಮಾರ್ಮಿಕವಾಗಿ ಅಭಿವ್ಯಕ್ತಿಸಿದ್ದಾರೆ. ಕನ್ನಡದ ಮಟ್ಟಿಗೆ ಆರ್.ಕೆ.ಲಕ್ಷ್ಮಣ್ ಅವರು ತಲುಪಿಲ್ಲ ಎನ್ನುವ ಅಭಿಪ್ರಾಯವಿದೆ. ಹೀಗಾಗಿ ಸಾಹಿತ್ಯ ಮತ್ತು ಕಲೆಯ ನಡುವೆ ಇನ್ನಷ್ಟು ಸಂವಾದ ಮತ್ತು ಅನುಸಂಧಾನ ಅಗತ್ಯ ಎಂದರು.

ಖ್ಯಾತ ವ್ಯಂಗ್ಯಚಿತ್ರಕಾರ ಎಂ.ವಿ. ನಾಗೇಂದ್ರ ಬಾಬು ಮಾತನಾಡಿ, 'ಲಕ್ಷ್ಮಣ ರೇಖೆ' ಪುಸ್ತಕದಲ್ಲಿ ಸಾಹಿತ್ಯದ ಜೊತೆಗೆ ಕಲೆಯ ಸಮಾಗಮವಾಗಿದೆ. ಸಾಹಿತ್ಯವೆಂಬ ಮಹಿಳೆಯ ಹಣೆಗೆ ಕುಂಕುಮ ಇಟ್ಟಂತೆ ಕುವೆಂಪು ಅವರ ಕವಿತೆಗಳ ಆರ್.ಕೆ.ಲಕ್ಷ್ಮಣ್ ಅವರ ರೇಖಾಚಿತ್ರಗಳು ಹೊಸ ಸ್ವರೂಪ ನೀಡಿದೆ. ಹಾಗೆಯೇ ರೇಖಾಚಿತ್ರಗಳು ಓದುಗರ ಗಮನ ಸೆಳೆಯಲಿದೆ. ಈ ನಿಟ್ಟಿನಲ್ಲಿ ಸಾಹಿತ್ಯ ಅಧ್ಯಯನ ವಿದ್ಯಾರ್ಥಿಗಳು ರೇಖಾಚಿತ್ರಗಳನ್ನು ಬಿಡಿಸುವ ಅಭ್ಯಾಸ ಮಾಡಿದರೆ, ಅನುಕೂಲವಾಗಲಿದೆ ಎಂದು ಸಲಹೆ ನೀಡಿದರು.

ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ಪುಸ್ತಕ ಪ್ರಕಾಶನದ ಪ್ರೊ.ಬಿ.ಎನ್.ಶ್ರೀರಾಮ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಪ್ರಾಧ್ಯಾಪಕಿ ಪ್ರೊ.ಶಶಿಕಲಾ, ಪ್ರಸಾರಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ವಿ. ಷಣ್ಮುಗಂ, ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಡಾ.ಕೆ.ಸಿ. ಶಿವಾರೆಡ್ಡಿ, ಗಾಯಕಿ ಡಾ.ಶ್ವೇತಾ ಮಡಪ್ಪಾಡಿ, ಸಹ ಪ್ರಾಧ್ಯಾಪಕಿ ಎಸ್.ಎಲ್.ಶೈಲಾ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಅಪರಾಧ ತಡೆ, ಕಾನೂನು ಸುವ್ಯವಸ್ಥೆಗೆ ನಿವೃತ್ತ ಪೊಲೀಸ್ ಅಧಿಕಾರಿ–ಸಿಬ್ಬಂದಿ ನೆರವಿಗೆ ನಿರ್ಧಾರ

ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರ ನ್ಯೂ ಐಡಿಯಾ; ಸುತ್ತೋಲೆ ಮೂಲಕ ನಿರ್ದೇಶನ

ಮೈಸೂರು, ಮೇ 22(ಬಿಸಿಟಿ, ಎಜಿ)– ಸಮುದಾಯ ಪೊಲೀಸ್ ವ್ಯವಸ್ಥೆ ಮತ್ತು ಅಪರಾಧ ತಡೆಗಟ್ಟುವಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕರ್ನಾಟಕ ಪೊಲೀಸ್ ಇಲಾಖೆಯು ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಹಕಾರಕ್ಕೆ ಮುಂದಾಗಿದೆ.


ಡಾ. ಸಲೀಂ

ನಿವೃತ್ತ ಪೊಲೀಸ್ ಸಿಬ್ಬಂದಿಯೊಂದಿಗೆ ಸಂಪರ್ಕವನ್ನು ಕಾಯ್ದುಕೊಳ್ಳುವುದರ ಜೊತೆಗೆ ನೆರೆಹೊರೆಯವರ ರಕ್ಷಣೆ ಮತ್ತು ಸಾರ್ವಜನಿಕ ಸುರಕ್ಷಾ ಉಪಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ನಿವೃತ್ತರ ದಶಕಗಳ ಸೇವಾ ಅನುಭವವನ್ನು ಅಮೂಲ್ಯವಾದ ಸಂಪನ್ಮೂಲವಾಗಿ ಬಳಸಿಕೊಳ್ಳಲು ನಿರ್ಧರಿಸಲಾಗಿದೆ.

ಈ ಸಂಬಂಧ ರಾಜ್ಯ ಪೊಲೀಸ್ ಮಹಾನಿರ್ದೇಶಕ(ಡಿಜಿ ಮತ್ತು ಐಜಿಪಿ) ಡಾ.ಎಂ.ಎ.ಸಲೀಂ ಅವರು ಮೇ 18 ರಂದು ಸುತ್ತೋಲೆ ಹೊರಡಿಸಿ, ರಾಜ್ಯಾದ್ಯಂತ ಎಲ್ಲಾ ಪೊಲೀಸ್ ಠಾಣೆಗಳು ಮತ್ತು ಘಟಕಗಳ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದ್ದಾರೆ.

ನಿವೃತ್ತ ಸಿಬ್ಬಂದಿ ತನಿಖೆ, ಅಪರಾಧ ತಡೆಗಟ್ಟುವಿಕೆ, ಜನಸಂದಣಿ ನಿರ್ವಹಣೆ, ಗುಪ್ತಚರ ಸಂಗ್ರಹಣೆ, ಸಂಚಾರ ನಿಯಂತ್ರಣ ಮತ್ತು ವಿಪತ್ತು ಪ್ರತಿಕ್ರಿಯೆಯಲ್ಲಿ ಪರಿಣತಿ ಹೊಂದಿರುತ್ತಾರೆ. ಅವರ ಜಾಗರೂಕತೆ ಮತ್ತು ಸ್ಥಳೀಯ ಮಾಹಿತಿ ಜಾಲಗಳು ಅಪರಾಧ ಚಟುವಟಿಕೆಗಳನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಸಿಬ್ಬಂದಿಯನ್ನು ಇಲಾಖೆಯ ಸೇವೆಯಲ್ಲಿ ಒಳಗೊಳ್ಳುವಂತೆ ಮಾಡುವುದು ಕೇವಲ ಅನುಕೂಲತೆಯ ವಿಷಯವಲ್ಲ. ಇದು ಪೊಲೀಸರು ಮತ್ತು ಸಾರ್ವಜನಿಕರ ನಡುವಿನ ಅಂತರವನ್ನು ಕಡಿಮೆ ಮಾಡುವುದರ ಜೊತೆಗೆ ಸಾಂಸ್ಥಿಕ ಜ್ಞಾನ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಕಾರ್ಯತಂತ್ರದ ಹೆಜ್ಜೆಯಾಗಿದೆ ಎಂದು ಅಭಿಪ್ರಾಯಿಸಿದ್ದಾರೆ.

ನಿವೃತ್ತರ ನೋಂದಣಿಗೆ ಸೂಚನೆ: ಎಲ್ಲಾ ಪೊಲೀಸ್ ಠಾಣೆಗಳಿಗೆ ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನೋಂದಣಿಯನ್ನು ನಿರ್ವಹಿಸಬೇಕು. ಇದರಲ್ಲಿ ಅವರ ಶ್ರೇಣಿ, ಸೇವಾ ವರ್ಷಗಳು, ಪರಿಣತಿಯ ಕ್ಷೇತ್ರ, ಸಂಪರ್ಕ ಸಂಖ್ಯೆ, ವಿಳಾಸ ಇನ್ನಿತರ ಮಾಹಿತಿ ದಾಖಲಿಸಬೇಕು. ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ನಿವೃತ್ತ ಸಿಬ್ಬಂದಿಯನ್ನು ನಿಯಮಿತವಾಗಿ ಭೇಟಿ ಮಾಡಿ, ದಾಖಲೆಗಳನ್ನು ನವೀಕರಿಸಬೇಕು.

> “ನಿವೃತ್ತ ಅಧಿಕಾರಿಗಳು ಇಲಾಖೆಗೆ ಅಮೂಲ್ಯ ಆಸ್ತಿ ಇದ್ದಂತೆ. ನಿವೃತ್ತರಲ್ಲಿ ಅನೇಕರು ಪೊಲೀಸ್ ಮತ್ತು ಅಪರಾಧ ತಡೆಗಟ್ಟುವ ಚಟುವಟಿಕೆಗಳ ಸಂಬಂಧ ಸಂಪರ್ಕದಲ್ಲಿದ್ದಾರೆ. ಅವರು ನಿಯಮಿತವಾಗಿ ಸಭೆಗಳು ಮತ್ತು ಇಲಾಖಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಡಿಜಿ ಮತ್ತು ಐಜಿಪಿ ನಿರ್ದೇಶನಗಳಿಗೆ ಅನುಗುಣವಾಗಿ ದಿನನಿತ್ಯದ ಪೊಲೀಸ್ ಚಟುವಟಿಕೆಗಳಲ್ಲಿ ಅವರನ್ನು ಹೆಚ್ಚು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ನಾವು ಪ್ರಾಯೋಗಿಕ ಕಾರ್ಯವಿಧಾನವನ್ನು ರೂಪಿಸುತ್ತೇವೆ.
> –ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತರು

ನಿವೃತ್ತ ಸಿಬ್ಬಂದಿಯೊಂದಿಗೆ ಸೌಹಾರ್ದಯುತ ಸಂಬಂಧವನ್ನು ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ 'ಆರೋಗ್ಯ ಭಾಗ್ಯ' ಯೋಜನೆಯಡಿಯಲ್ಲಿ ದಾಖಲಾಗಲು ಅವರನ್ನು ಪ್ರೋತ್ಸಾಹಿಸುವುದರ ಜೊತೆಗೆ ಅಗತ್ಯವಿದ್ದಾಗ ಅವರ ವೈಯಕ್ತಿಕ ವಿಚಾರಗಳಲ್ಲೂ ಸಹಾಯ ಮಾಡಬೇಕು. ಪೊಲೀಸ್ ಧ್ವಜ ದಿನಾಚರಣೆ, ವಾರ್ಷಿಕ ಕ್ರೀಡಾಕೂಟಗಳು ಮತ್ತು ಇತರ ಪ್ರಮುಖ ಇಲಾಖಾ ಕಾರ್ಯಗಳಿಗೆ ಆಹ್ವಾನಿಸಬೇಕು. ವಿವಿಧ ಘಟಕಗಳಿಗೆ ಭೇಟಿ ನೀಡುವ ಹಿರಿಯ ಅಧಿಕಾರಿಗಳೂ ನಿವೃತ್ತ ಸಿಬ್ಬಂದಿಯೊಂದಿಗೆ ಸಂವಹನ ನಡೆಸಬೇಕು. ಮರಣಿಸಿದ ನಿವೃತ್ತ ಪೊಲೀಸ್ ಸಿಬ್ಬಂದಿ ಸೇವೆ ಮತ್ತು ತ್ಯಾಗವನ್ನು ಸ್ಮರಿಸಬೇಕು ಎಂದು ತಿಳಿಸಿದ್ದಾರೆ.

ಈ ಉಪಕ್ರಮವು ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು, ಅಪರಾಧ ತಡೆಗಟ್ಟುವಿಕೆಯಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯನ್ನು ಸುಧಾರಿಸಲು ಮತ್ತು ಸಾರ್ವಜನಿಕ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ನಿವೃತ್ತ ಸಿಬ್ಬಂದಿಯ ಗೌರವವನ್ನು ಹೆಚ್ಚಿಸಲು ನೆರವಾಗುತ್ತದೆ ಎಂದು ಡಾ.ಎಂ.ಎ.ಸಲೀಂ ಅಭಿಪ್ರಾಯಿಸಿದ್ದಾರೆ.

ಡಿಜಿ ಮತ್ತು ಐಜಿಪಿ ನಿರ್ದೇಶನದ ಮೇರೆಗೆ ಮೈಸೂರು ಜಿಲ್ಲಾ ಪೊಲೀಸರು ಈ ಉಪಕ್ರಮವನ್ನು ಜಾರಿಗೆ ತರಲು ಆರಂಭಿಕ ಕ್ರಮ ವಹಿಸಿದ್ದು, ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ಪ್ರತ್ಯೇಕವಾಗಿ ಸಂಪರ್ಕಿಸಿ ಅವರ ವಿವರಗಳನ್ನು ದಾಖಲಿಸಲಾಗುತ್ತಿದೆ.

> “ಮೈಸೂರು ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಿಗೆ ಪೊಲೀಸ್ ಮಹಾ ನಿರ್ದೇಶಕರ ಆದೇಶವನ್ನು ರವಾನಿಸಲಾಗಿದೆ. ಮೊದಲ ಹಂತವಾಗಿ ನಾವು ನಿವೃತ್ತ ಪೊಲೀಸ್ ಸಿಬ್ಬಂದಿಯ ಡೇಟಾಬೇಸ್ ಅನ್ನು ರಚಿಸುತ್ತಿದ್ದೇವೆ. ಪ್ರತಿಯೊಂದು ಪೊಲೀಸ್ ಠಾಣೆಯ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ವಾಸಿಸುವ ನಿವೃತ್ತ ಸಿಬ್ಬಂದಿಯನ್ನು ಸಂಪರ್ಕಿಸಿ ವಿವರ ಸಂಗ್ರಹಿಸುತ್ತಿದ್ದಾರೆ. ಈ ಪ್ರಕ್ರಿಯೆಯನ್ನು ಹಂತ ಹಂತವಾಗಿ ನಡೆಸಲಾಗುತ್ತಿದೆ. ಡೇಟಾಬೇಸ್ ಸಿದ್ಧವಾದ ನಂತರ, ಮುಂದಿನ ಕ್ರಮವನ್ನು ನಿರ್ಧರಿಸಲು ಸಭೆ ಕರೆಯಲಾಗುವುದು.
> –ಸಿ.ಮಲ್ಲಿಕ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ಮೈಸೂರು ಜಿಲ್ಲೆ

> “ನಿವೃತ್ತ ಪೊಲೀಸ್ ಸಿಬ್ಬಂದಿಯನ್ನು ಇಲಾಖೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಕುರಿತು ಡಿಜಿ ಮತ್ತು ಐಜಿಪಿ ಡಾ.ಎಂ.ಎ.ಸಲೀಂ ಅವರು ಹೊರಡಿಸಿರುವ ಸುತ್ತೋಲೆ ಸ್ವಾಗತಾರ್ಹ. ಇದರ ಅನುಷ್ಠಾನವನ್ನು ಬೆಂಬಲಿಸುವ ನಿಟ್ಟಿನಲ್ಲಿ ನಾವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ನಮ್ಮ ಸಂಘವು ಶನಿವಾರ ಸಭೆ ಸೇರಲಿದೆ.
> –ಬಸಪ್ಪ ಸಾಲುಂಡಿ, ಕಾರ್ಯದರ್ಶಿ, ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘ, ಮೈಸೂರು

ಭಾರತಕ್ಕೆ ಎಷ್ಟು ಬೇಕೋ ಅಷ್ಟು ತೈಲ ಮಾರಾಟಕ್ಕೆ ನಾವು ಸಿದ್ಧ

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಮಾಹಿತಿ

ವಾಷಿಂಗ್ಟನ್: ಭಾರತಕ್ಕೆ ಎಷ್ಟು ಪ್ರಮಾಣದ ಇಂಧನ ಬೇಕಿದ್ದರೂ ಅಷ್ಟನ್ನೂ ಮಾರಾಟ ಮಾಡಲು ಅಮೆರಿಕಾ ಸಿದ್ಧವಿದೆ ಎಂದು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ತಿಳಿಸಿದ್ದಾರೆ.



ನಾಳೆಯಿಂದ (ಮೇ 23) ಆರಂಭವಾಗಲಿರುವ ತಮ್ಮ ಚೊಚ್ಚಲ ನಾಲ್ಕು ದಿನಗಳ ಭಾರತ ಪ್ರವಾಸಕ್ಕೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಭಾರತ ಎಷ್ಟು ಇಂಧನ ಖರೀದಿಸಲು ಸಿದ್ಧವಿದೆಯೋ, ಅಷ್ಟನ್ನೂ ಮಾರಾಟ ಮಾಡಲು ನಾವು ಬಯಸುತ್ತೇವೆ. ಭಾರತದ ಇಂಧನ ಅಗತ್ಯತೆಯಲ್ಲಿ ಅಮೆರಿಕಾ ದೊಡ್ಡ ಪಾಲನ್ನು ಹೊಂದಬೇಕೆಂಬುದು ನಮ್ಮ ಆಶಯ ಎಂದು ತಿಳಿಸಿದ್ದಾರೆ.

ಇದೇ ವೇಳೆ ಭಾರತವನ್ನು ಅತ್ಯಂತ ಮಹತ್ವದ ಮಿತ್ರ ಮತ್ತು ಬಲಿಷ್ಠ ಪಾಲುದಾರ ಎಂದು ಬಣ್ಣಿಸಿರುವ ರೂಬಿಯೋ, ಅಮೆರಿಕಾ ಮತ್ತು ಭಾರತ ಈಗಾಗಲೇ ಇಂಧನ ಸಹಕಾರವನ್ನು ವಿಸ್ತರಿಸುವ ಕುರಿತು ಉನ್ನತ ಮಟ್ಟದ ಮಾತುಕತೆಗಳಲ್ಲಿ ತೊಡಗಿವೆ ಎಂದಿದ್ದಾರೆ.

ಭಾರತವು ಅಗಾಧವಾದ ಆರ್ಥಿಕ ಸಾಮರ್ಥ್ಯವನ್ನು ಹೊಂದಿದ್ದು, ಮುಂಬರುವ ದಿನಗಳಲ್ಲಿ ಕೋಟ್ಯಂತರ ಜನರನ್ನು ಬಡತನದಿಂದ ಮುಕ್ತಗೊಳಿಸಿ ಬೃಹತ್ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲು ಸಜ್ಜಾಗಿದೆ. ಈ ಬೆಳವಣಿಗೆಯಲ್ಲಿ ಅಮೆರಿಕಾ ಭಾಗಿಯಾಗಲು ಹೆಚ್ಚು ಆಸಕ್ತಿ ಹೊಂದಿದೆ ಎಂದು ಹೇಳಿದ್ದಾರೆ.

ಮೇ 26 ರಂದು ನವದೆಹಲಿಯಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯು ಅತ್ಯಂತ ಮಹತ್ವದ್ದಾಗಿದೆ. ತಾವು ವಿದೇಶಾಂಗ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ನಡೆಸಿದ ಮೊದಲ ಸಭೆಯೇ ಕ್ವಾಡ್ ದೇಶಗಳೊಂದಿಗಾಗಿತ್ತು ಎಂದು ಸ್ಮರಿಸಿದ ಅವರು, ಈ ಪ್ರವಾಸದಲ್ಲಿ ಕ್ವಾಡ್ ಮೈತ್ರಿಕೂಟವನ್ನು ಮತ್ತಷ್ಟು ಬಲಪಡಿಸಲು ಚರ್ಚಿಸಲಾಗುವುದು ಎಂದಿದ್ದಾರೆ.

ಕರಾಮುವಿ ಪಿಹೆಚ್.ಡಿ ಸಂಶೋಧನೆಗೆ ಅರ್ಜಿ ಸಲ್ಲಿಕೆಗೆ ಮೇ 28 ಕಡೇ ದಿನ

ಮೈಸೂರು, ಮೇ 22– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕರಾಮುವಿ)ವು 2025–26ನೇ ಸಾಲಿಗೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಸಂಶೋಧನಾ ಮಾರ್ಗದರ್ಶಕರ ಬಳಿ ಖಾಲಿ ಇರುವ ಪಿಹೆಚ್.ಡಿ ಸೀಟುಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಮೇ 28ರವರೆಗೆ ವಿಸ್ತರಿಸಿದೆ. ಏ.27ರ ಅಧಿಸೂಚನೆಯಲ್ಲಿ ಮೇ 21ರವರೆಗೆ ನೀಡಲಾಗಿದ್ದ ಗಡುವನ್ನು ವಿಸ್ತರಿಸುವುದರ ಜೊತೆಗೆ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಖಾಲಿ ಇರುವ ಪಿಹೆಚ್.ಡಿ ಸೀಟುಗಳನ್ನು ಪರಿಷ್ಕರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಕರಾಮುವಿಯ ವೆಬ್‌ಸೈಟ್ www.ksoumysuru.ac.in ನಲ್ಲಿ ಪ್ರಕಟಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ವಿವಿಯ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತರಬೇತಿ ಶಿಬಿರ ಆರಂಭ

ಮೈಸೂರು, ಮೇ 22–ಮೈಸೂರಿನ ಕೃಷ್ಣವಿಲಾಸ ರಸ್ತೆಯಲ್ಲಿರುವ ನೇತಾಜಿ ಕರಿಯರ್ ಅಕಾಡೆಮಿ ವತಿಯಿಂದ ಮೂರು ತಿಂಗಳ ಶಿಕ್ಷಕರ ನೇಮಕಾತಿ ಪರೀಕ್ಷಾ ತರಬೇತಿ ಶಿಬಿರವನ್ನು ಮೇ 23 ರಿಂದ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ: 0821 –3553964, 6364116745, 9480709611 ಸಂಪರ್ಕಿಸಿ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭಾರಿ ಅಕ್ರಮ

- ಮಹಾರಾಜ ಕಾಲೇಜಿನ 17 ಖಾತೆಗಳಿಂದ 2.45 ಕೋಟಿ ವರ್ಗಾಯಿಸಿಕೊಂಡು ಅವ್ಯವಹಾರ ಆರೋಪ
- ಆರ್ಥಿಕ ಸಂಕಷ್ಟದಲ್ಲಿದ್ದರು 4.96 ಕೋಟಿ ಟೆಂಡರ್ ಕರೆದು ಹಣ ಲೂಟಿ ಯತ್ನ
- ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಕ್ರಾಫರ್ಡ್ ಹಾಲ್ ಮುಂದೆ ಪ್ರತಿಭಟನೆ



ಕರ್ನಾಟಕ ರಕ್ಷಣಾ ವೇದಿಕೆ ಮೈಸೂರು ಜಿಲ್ಲಾ ಘಟಕದ ವತಿಯಿಂದ ಮೈಸೂರು ವಿವಿ ಕ್ರಾಫರ್ಡ್ ಹಾಲ್ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮೇ 22(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಹಲವು ಅಕ್ರಮಗಳು ನಡೆದಿದ್ದು, ಇಂದಿಗೂ ನಡೆಯುತ್ತಿವೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಮೈಸೂರು ಜಿಲ್ಲಾ ಘಟಕದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ವಿವಿ ಕ್ರಾಫರ್ಡ್ ಹಾಲ್ ಎದುರು ಜಮಾವಣೆಗೊಂಡ ಕರವೇ ಕಾರ್ಯಕರ್ತರು, 'ನೂರಾರು ವರ್ಷಗಳ ಇತಿಹಾಸವುಳ್ಳ ಮೈಸೂರು ವಿಶ್ವವಿದ್ಯಾನಿಲಯವನ್ನು ವ್ಯವಸ್ಥಿತವಾಗಿ ಮುಗಿಸುತ್ತಿರುವ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್' ಎಂಬಿತ್ಯಾದಿ ಕರ ಪತ್ರಗಳನ್ನು ಹಿಡಿದು ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಜ ಕಾಲೇಜಿನ 17 ಖಾತೆಗಳಿಂದ 2.45 ಕೋಟಿ ರೂ. ಹಣವನ್ನು ನಿಯಮ ಬಾಹಿರವಾಗಿ ಕಾಲೇಜಿನ ಕೌನ್ಸಿಲ್ ಮಂಡಳಿಯ ಅನುಮತಿಯಿಲ್ಲದೆ ಕುಲಪತಿಗಳು ಮತ್ತು ಕುಲಸಚಿವರು ವರ್ಗಾವಣೆ ಮಾಡಿಕೊಂಡು ಖರ್ಚು ಮಾಡಿದ್ದಾರೆ. ಆಡಳಿತ ವಿಭಾಗದ ಕುಲಸಚಿವರ ಗಮನಕ್ಕೆ ತರದೇ ಕುಲಪತಿ ಹಾಗೂ ಪರೀಕ್ಷಾಂಗ ವಿಭಾಗದ ಕುಲಸಚಿವರು 4.96 ಕೋಟಿ ರೂ.ಟೆಂಡರ್ ಕರೆದು ಹಗಲು ದರೋಡೆ ನಡೆಸಿದ್ದಾರೆ ಎಂದು ದೂರಿದರು.

ಅಲ್ಲದೆ ಆನ್‌ಲೈನ್ ಕೋರ್ಸ್ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ವಂಚಿಸಿದ್ದಾರೆ. ಮೂಲಸೌಕರ್ಯ ಇಲ್ಲದಿದ್ದರೂ 1.99 ಕೋಟಿ ರೂ.ವೆಚ್ಚದಲ್ಲಿ ಶಾಪಿಂಗ್ ಮಾಲ್ ಕಟ್ಟಲು ಮುಂದಾಗಿದ್ದಾರೆ. ಖಾಸಗಿ ಫೋಟೋಗ್ರಾಫರ್‌ಗೆ ಪ್ರತಿ ತಿಂಗಳು ಗೌರವಧನ ನೀಡುತ್ತಿದ್ದಾರೆ. ಕ್ರಿಮಿನಲ್ ಪ್ರಕರಣ ಹಿನ್ನಲೆಯುಳ್ಳ ಪ್ರಾಧ್ಯಾಪಕರೊಬ್ಬರಿಗೆ ನಾಲ್ಕು ಹುದ್ದೆಗಳ ಜವಾಬ್ದಾರಿ ನೀಡಿದ್ದಾರೆ. ಆಹಾರ ಸಾಮಗ್ರಿ ಮತ್ತು ಭದ್ರತಾ ಸಿಬ್ಬಂದಿ ನಿಯೋಜನೆಯಲ್ಲಿಯೂ ಲೂಟಿ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರವೇ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್ ಮಾತನಾಡಿ, ಶತಮಾನದ ಇತಿಹಾಸವುಳ್ಳ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರೊ.ಎನ್.ಕೆ.ಲೋಕನಾಥ್ ಅವರು ಕುಲಪತಿ ಆದಾಗಿನಿಂದ ಒಂದಲ್ಲಾ ಒಂದು ಅಕ್ರಮಗಳು ನಡೆಯುತ್ತಲೇ ಇವೆ. ಯುಜಿಸಿ ನಿಯಮಾವಳಿಗಳನ್ನು ಗಾಳಿಗೆ ತೂರಿ ಆಡಳಿತ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳಿಂದ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದಾರೆ. ಆದ್ದರಿಂದ ಕೂಡಲೇ ಅವರನ್ನು ಕುಲಪತಿ ಸ್ಥಾನದಿಂದ ಕೆಳಗಿಸಿ, ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ಮೈಸೂರು ಜಿಲ್ಲಾ ಘಟಕದ ಗಾಯತ್ರಿ ವಿಜೇಂದ್ರ, ಜಿ.ಲೋಕೇಶ್ ಕುಮಾರ್, ಸುಜಾತ ಷಣ್ಮುಗಂ, ಹೇಮಂತ್ ಗೌಡ, ಶಿವರಾಜ್, ಬೋಗಾದಿ ವಿನಯ್, ದೇಬೂರು ವಿಜಯ್, ಪುಷ್ಪಲತಾ, ಮಹೇಶ್, ಸ್ವಾಮಿ, ಅಸ್ಲಾಂ, ವಾಸಿಂ, ಲೋಕೇಶ್, ಮಂಜು, ಮದ್ವೇಶ್, ರವಿ, ಚಂದ್ರು, ಶೇಖರ್, ಜೀವನ್, ರಾಜೇಶ್ವರಿ ಮತ್ತಿತರರಿದ್ದರು.

ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಹಿಂಡಲಗಾ ಜೈಲಿಂದ ಬಿಡುಗಡೆ!

ಬೆಳಗಾವಿ, ಮೇ 22: ನಟ ದರ್ಶನ್ ಜೊತೆ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಚಹಾ ಕುಡಿಯುತ್ತ ಕುಳಿತಿದ್ದ ಫೋಟೋ ವೈರಲ್ ಆದ ಬಳಿಕ ಸುದ್ದಿಯಾಗಿದ್ದ ಬೆಂಗಳೂರಿನ ರೌಡಿ ಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜ ಈಗ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ. ಗುರುವಾರ ಬೆಳಗಾವಿಯ ಹಿಂಡಲಗಾ ಕಾರಾಗೃಹದಿಂದ ಆತನನ್ನು ಬಿಡುಗಡೆ ಮಾಡಲಾಗಿದೆ.



ಸಿಗದನಪಾಳ್ಯ ಮಹೇಶ್ ಕೊಲೆ ಪ್ರಕರಣದ ಆರೋಪಿ: ಸಿಗದನಪಾಳ್ಯ ಮಹೇಶ್ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಾಗರಾಜ, ಹಿಂದೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್ ಜೊತೆ ಕಂಡುಬಂದ ಫೋಟೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿತ್ತು. ಈ ಘಟನೆ ನಂತರ ಜೈಲು ಭದ್ರತೆ ಹಾಗೂ ಕೈದಿಗಳ ನಿಯಮ ಉಲ್ಲಂಘನೆ ಬಗ್ಗೆ ದೊಡ್ಡ ಮಟ್ಟದ ಚರ್ಚೆ ಉಂಟಾಗಿತ್ತು. ವಿವಾದದ ಹಿನ್ನೆಲೆಯಲ್ಲಿ ಅಧಿಕಾರಿಗಳು ಆತನನ್ನು ಪರಪ್ಪನ ಅಗ್ರಹಾರದಿಂದ ಬೆಳಗಾವಿಯ ಹಿಂಡಲಗಾ ಕಾರಾಗೃಹಕ್ಕೆ ಸ್ಥಳಾಂತರಿಸಿದ್ದರು.

ನಂತರ ಈ ಪ್ರಕರಣ ನ್ಯಾಯಾಲಯದ ಗಮನಕ್ಕೆ ಬಂದಿದ್ದು, ಬುಧವಾರ ನ್ಯಾಯಾಲಯವು ನಾಗರಾಜನಿಗೆ ಜಾಮೀನು ಮಂಜೂರು ಮಾಡಿದೆ. ಆದರೆ, ಬಿಡುಗಡೆ ಪ್ರಕ್ರಿಯೆಯ ಮುನ್ನವೇ ಆತನ ಆರೋಗ್ಯದಲ್ಲಿ ತೊಂದರೆ ಉಂಟಾದ ಕಾರಣ ಕಳೆದ ವಾರ ಆತನನ್ನು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದ ಅವಧಿಯಲ್ಲೇ ಜಾಮೀನು ಆದೇಶ ಜಾರಿಯಾಗಿದ್ದು, ಆಸ್ಪತ್ರೆಯಿಂದಲೇ ಆತನನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಗಿದೆ ಎಂದು ಜೈಲು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾ ವಿಕಾಸ್ ಕಾನೂನು ಅಧ್ಯಯನ ಸಂಸ್ಥೆಯಲ್ಲಿ

ಕಾನೂನು ಪಂಡಿತ ಪ್ರೊ.ಸಿಕೆಎನ್ ರಾಜಾ ಸ್ಮರಣಾರ್ಥ ತೃತೀಯ ಉಪನ್ಯಾಸ

ಪರಿಸರ ಕಾನೂನು ಕುರಿತು ಅರಿವು ಮೂಡಿಸಿದ ಗಣ್ಯರು

ಮೈಸೂರು, ಮೇ 22– ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ವಿದ್ಯಾ ವಿಕಾಸ್ ಕಾನೂನು ಅಧ್ಯಯನ ಸಂಸ್ಥೆ ವತಿಯಿಂದ ಶುಕ್ರವಾರ ಕಾನೂನು ಪಂಡಿತ ಡಾ.ಸಿಕೆಎನ್ ರಾಜಾ ಅವರ ಸ್ಮರಣಾರ್ಥ ತೃತೀಯ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.


ಪ್ರೊ.ಸಿಕೆಎನ್

ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆ ಆವರಣದ ಲಲಿತಾ ಸ್ಮಾರಕ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಮರಳಿ ದ್ವಿಪಕ್ಷೀಯತೆಯತ್ತವೆ?' ಕುರಿತು ಬೆಂಗಳೂರಿನ ಭಾರತೀಯ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಡಾ.ಎ.ಜಯಗೋವಿಂದ ಅವರು ಮಾತನಾಡಿ, ಜಾಗತಿಕ ರಾಜತಾಂತ್ರಿಕತೆ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಬದಲಾಗುತ್ತಿರುವ ಸ್ವರೂಪವನ್ನು ವಿವರಿಸಿದರು.

ಈ ವೇಳೆ 'ಪರಿಸರ ಕಾನೂನು' ಕೃತಿಯನ್ನು ಬಿಡುಗಡೆ ಮಾಡಿದ ಬೆಂಗಳೂರಿನ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಂ ಭಟ್ ಮಾತನಾಡಿ, ಈ ಕೃತಿಯನ್ನು ಅಪಾರ ಹೆಮ್ಮೆಯಿಂದ ಬಿಡುಗಡೆ ಮಾಡಿದ್ದೇನೆ. ಮಾನವ ಹಕ್ಕುಗಳು ಹಾಗೂ ಪರಿಸರ ಹಕ್ಕುಗಳು ಭಾರತೀಯ ಸಂವಿಧಾನದ 21ನೇ ವಿಧಿಯಡಿ ರಕ್ಷಿಸಲ್ಪಟ್ಟಿವೆ. ಎಂ.ಸಿ.ಮೇಹತಾ v/s ಭಾರತ ಒಕ್ಕೂಟ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸ್ಪಷ್ಟಪಡಿಸಿದೆ ಎಂದು ತಿಳಿಸಿದರು.

ವಿದ್ಯಾ ವಿಕಾಸ್ ಸಂಸ್ಥೆಯ ಕಾನೂನು ಶಿಕ್ಷಣ ಸಲಹೆಗಾರರಾದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮತ್ತು ಪಶ್ಚಿಮ ಬಂಗಾಳ ರಾಷ್ಟ್ರೀಯ ನ್ಯಾಯ ವಿಜ್ಞಾನ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ಈಶ್ವರ ಭಟ್ ಅವರು ಪರಿಸರ ಕಾನೂನು ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳ ಕೊರತೆ ಬಗ್ಗೆ ಕಾನೂನು ವಿದ್ಯಾರ್ಥಿಗಳಲ್ಲಿ ದೀರ್ಘಕಾಲದಿಂದ ಇರುವ ಅಸಮಾಧಾನವನ್ನು ನಿವಾರಿಸುವ ಉದ್ದೇಶದಿಂದ ಈ ಕೃತಿಯನ್ನು ಪ್ರಕಟಿಸಲಾಗಿದೆ ಎಂದು ಹೇಳಿದರು.

ಕಾನೂನು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಎಂ.ಕೆ.ರಮೇಶ್ ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ನಿರಂಜನ್ ವಾನಳ್ಳಿ ಕೃತಿಯ ವೈಶಿಷ್ಟ್ಯತೆ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿ.ಕವೀಶ್ ಗೌಡ, ಪರಿಸರ ಸಂರಕ್ಷಣೆ ಮಾಡುವಲ್ಲಿ ನಾಗರಿಕರ ಜವಬ್ದಾರಿ ಬಗ್ಗೆ ಅರಿವು ಮೂಡಿಸಿದರು.

ಕಾನೂನು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಖ್ಯಾತ ಶಿಕ್ಷಣ ತಜ್ಞರು ಹಾಗೂ ಕಾನೂನು ಪಂಡಿತರಾದ ಪ್ರೊ.ಸಿಕೆಎನ್ ರಾಜಾ ಅವರ ಸ್ಮರಣಾರ್ಥವಾಗಿ ಆಯೋಜಿಸಿದ್ದು, ಕಾನೂನು ಶಿಕ್ಷಣದ ಅಭಿವೃದ್ಧಿಗೆ ಅವರು ನೀಡಿದ ಅಮೂಲ್ಯ ಸೇವೆಗಳು ಇಂದಿಗೂ ಪ್ರೇರಣೆಯಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಪರಿಸರ ಕಾನೂನು ಕೃತಿ ಪ್ರಕಾಶಕರು, ಮೈಸೂರು ವಿಶ್ವವಿದ್ಯಾನಿಲಯದ ಕಾನೂನು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಟಿ.ಆರ್‌ಮಾರುತಿ, ಸಂಸ್ಥೆಯ ಪ್ರಾಂಶುಪಾಲರು, ಉಪನ್ಯಾಸಕರು, ಅಧ್ಯಾಪಕೇತರ ವರ್ಗ, ದಿವಂಗತ ಪ್ರೊ.ಸಿಕೆಎನ್ ರಾಜ ಅವರ ಕುಟುಂಬಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹೈದರಾಬಾದ್ ವಿರುದ್ಧ ಸೋತರೂ ಆರ್‌ಸಿಬಿ ಟಾಪೇ...!

ಹೈದರಾಬಾದ್, ಮೇ 22(ವಿವಿಹೆಚ್)– ತ್ರಿಮೂರ್ತಿಗಳ ಅರ್ಧ ಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 55 ರನ್‌ಗಳಿಂದ ಮಣಿಸುವಲ್ಲಿ ಯಶಸ್ವಿಯಾಯಿತು.

ಇತ್ತ ಎಸ್‌ಆರ್‌ಹೆಚ್ ವಿರುದ್ಧ ಸೋತರೂ ಅಗ್ರಸ್ಥಾನದಲ್ಲಿಯೇ ಉಳಿದ ಆರ್‌ಸಿಬಿ, ಮಂಗಳವಾರ (ಮೇ.26) ಮೊದಲ ಕ್ವಾಲಿಫೈಯರ್‌ನಲ್ಲಿ ಗುಜರಾತ್ ಟೈಟನ್ಸ್ ಜೊತೆ ಫೈನಲ್ಸ್‌ಗಾಗಿ ಹೋರಾಟ ಮಾಡಲಿದೆ. ಇತ್ತಂಡಗಳು ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿದ್ದು, ಸೋತ ತಂಡಕ್ಕೆ ಕ್ವಾಲಿಫೈಯರ್–2ರಲ್ಲಿ ಮತ್ತೊಂದು ಅವಕಾಶ ಸಿಗಲಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್–2026ರ 67ನೇ ಲೀಗ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಹೆಚ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 255 ರನ್ ಗಳಿಸಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಆರ್‌ಸಿಬಿ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 200 ರನ್‌ಗಳಿಸಿ ಸೋಲೊಪ್ಪಿಕೊಂಡಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಎಸ್‌ಆರ್‌ಹೆಚ್‌ಗೆ ಅಭಿಷೇಕ್ ಶರ್ಮಾ 56(22), ಟ್ರಾವಿಸ್ ಹೆಡ್ 26(16) ಉತ್ತಮ ಆರಂಭ ಒದಗಿಸಿಕೊಟ್ಟರು. ಇವರ ಬಳಿಕ ಬಂದ ಇಶಾನ್ ಕಿಶನ್ 46 ಎಸೆತಗಳಲ್ಲಿ 8 ಬೌಂಡರಿ, 3 ಸಿಕ್ಸರ್ ಸಹಿತ 79 ರನ್ ಚಚ್ಚಿದರೆ, ಹೆನ್ರಿಚ್ ಕ್ಲಾಸೆನ್ 24 ಎಸೆತಗಳಲ್ಲಿ 51 ರನ್ ಸಿಡಿಸಿದರು. ಕೊನೆಯಲ್ಲಿ ಅತ್ಯದ್ಭುತವಾಗಿ ಬ್ಯಾಟ್ ಬೀಸಿದ ನಿತೀಶ್ ಕುಮಾರ್ ರೆಡ್ಡಿ 12 ಎಸೆತಗಳಲ್ಲಿ ಅಜೇಯ 29 ರನ್ ಗಳಿಸಿದರು.



ಆರ್‌ಸಿಬಿ ಪರ ರಸಿಕ್ ಸಲಾಂ ದರ್ 2, ಸುಯೇಶ್ ಶರ್ಮಾ ಹಾಗೂ ಕೃನಾಲ್ ಪಾಂಡ್ಯ ತಲಾ ಒಂದೊಂದು ವಿಕೆಟ್ ಪಡೆದರು.

ಎಸ್‌ಆರ್‌ಹೆಚ್ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ಆರ್‌ಸಿಬಿಗೆ ವೆಂಕಟೇಶ್ ಅಯ್ಯರ್ 44(19), ವಿರಾಟ್ ಕೊಹ್ಲಿ 15(11) ನೆರವಿನಿಂದ ಉತ್ತಮ ಆರಂಭ ದೊರೆಯಿತು. ದೇವ್‌ದತ್ ಪಡಿಕ್ಕಲ್ 21(14) ಬಂದಷ್ಟೆ ವೇಗವಾಗಿ ಪೆವಿಲಿಯನ್ ಸೇರಿದರು. ಈ ವೇಳೆ ನಾಯಕ ರಜತ್ ಪಾಟೀದರ್ ಹಾಗೂ ಕೃನಾಲ್ ಪಾಂಡ್ಯ ಜೊತೆಯಾಗಿ ತಂಡಕ್ಕೆ ಚೇತರಿಕೆ ನೀಡಿದರು. ಹೀಗಿದ್ದರೂ ತಂಡವನ್ನು ಗೆಲ್ಲಿಸಿಕೊಡಲು ಸಾಧ್ಯವಾಗಲಿಲ್ಲ.

ಪಾಟೀದರ್ 39 ಎಸೆತಗಳಲ್ಲಿ 56 ರನ್ ಬಾರಿಸಿದರೆ, ಕೃನಾಲ್ ಪಾಂಡ್ಯ ಅಜೇಯ 41(31) ರನ್ ಬಾರಿಸಿದರು. ಟಿಮ್ ಡೇವಿಡ್ ಅಜೇಯ 15(7) ರನ್ ಬಾರಿಸುವ ಮೂಲಕ ಆರ್‌ಸಿಬಿ 55 ರನ್‌ಗಳಿಂದ ಪರಾಭವಗೊಂಡಿತು.


ಮೈಸೂರು ಮಿತ್ರ

ಶನಿವಾರ 23 ಮೇ 2026

ಬಲಮುರಿಯಲ್ಲಿ ಯುವಕರ ಸಾವಿನ ಪ್ರಕರಣ

ಮತ್ತೋರ್ವ ಯುವಕನ ಶವ ಪತ್ತೆ

ಬಲಮುರಿ, ಎಡಮುರಿ ಪ್ರವೇಶ ಸಂಪೂರ್ಣ ನಿಷಿದ್ಧ; ಅಂಗಡಿ-ಮುಂಗಟ್ಟುಗಳು ಸಹ ಬಂದ್



ರವಿಚಂದ್ರ

ಶ್ರೀರಂಗಪಟ್ಟಣ: ಪೊಲೀಸರು, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ನಿಷೇಧವಿದ್ದ ಬಲಮುರಿಯಲ್ಲಿ ಈಜಲು ನೀರಿಗಿಳಿದು ಸಾವನ್ನಪ್ಪಿದ ಯುವಕರಲ್ಲಿ ಮತ್ತೊಬ್ಬನ ಶವ ಶುಕ್ರವಾರ ಪತ್ತೆಯಾಗಿದೆ.

ಮೈಸೂರು ತಾಲೂಕು ಜಯಪುರ ಹೋಬಳಿಯ ಕೆಲ್ಲಹಳ್ಳಿಯ ನಿವಾಸಿ ರವಿಚಂದ್ರ(21) ಶವ ಬಲಮುರಿ ಬಳಿಯ ದೇವಾಲಯದ ಸಮೀಪ ನದಿಯಲ್ಲಿ ಪತ್ತೆಯಾಗಿದೆ.


ಕೇನ್ಸ್ ಟೆಕ್ನಾಲಜಿಯಲ್ಲಿ ಕೆಲಸ ಮಾಡುತ್ತಿದ್ದ ಮೋಹನ್‌ಕುಮಾರ್, ರವಿಚಂದ್ರ ಮತ್ತು ವಿಕಾಸ್ ಗುರುವಾರ ಸಂಜೆ ಕೆಲಸ ಮುಗಿಸಿ ಬಲಮುರಿ ಪ್ರವಾಸಿ ತಾಣಕ್ಕೆ ಬಂದಿದ್ದಾರೆ. ಇಲ್ಲಿ ನಿಷೇಧ ಇದ್ದ ಕಾರಣ ಬಲಮುರಿಯಿಂದ ಸುಮಾರು 2 ಕಿ.ಮೀ ದೂರದಲ್ಲಿರುವ ಶಂಭುಕಟ್ಟೆ ಮೊಳೆ ಬಳಿ ಕಾವೇರಿ ನದಿಯಲ್ಲಿ ಮೋಹನ್ ಮತ್ತು ರವಿಚಂದ್ರ ಈಜಲು ಇಳಿದಿದ್ದರು. ಇನ್ನೋರ್ವ ವಿಕಾಸ್ ಈಜು ಬಾರದ ಕಾರಣ ನದಿಯಲ್ಲಿ ಕಲ್ಲಿನ ಮೇಲೆ ಕುಳಿತಿದ್ದ.

ನದಿಯಲ್ಲಿ ಈಜುತ್ತಿದ್ದ ಮೋಹನ್ ಮತ್ತು ರವಿಚಂದ್ರ ಆಳದಲ್ಲಿ ಮುಳುಗಿದ್ದು, ಮೋಹನ್ ಮೃತ ದೇಹವನ್ನು ನುರಿತ ಈಜುಗಾರರು ಮತ್ತು ಅಗ್ನಿಶಾಮ ಕದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಗುರುವಾರ ಸಂಜೆಯೇ ಹೊರತೆಗೆದಿದ್ದರು. ಕತ್ತಲಾದ ಕಾರಣ ಶುಕ್ರವಾರ ಬೆಳಗ್ಗೆ ಕಾರ್ಯಾಚರಣೆ ನಡೆಸುತ್ತಿದ್ದಾಗ ಸುಮಾರು 1 ಕಿ.ಮೀ ನಷ್ಟು ದೂರ ನದಿಯಲ್ಲಿ ಬಲ ಮುರಿ ದೇವಾಲಯದ ಬಳಿ ರವಿಚಂದ್ರ ಶವ ಪತ್ತೆಯಾಗಿದೆ.

ಶುಕ್ರವಾರ ಬೆಳಗ್ಗೆಯಿಂದಲೇ ಶ್ರೀರಂಗಪಟ್ಟಣ ಅಗ್ನಿಶಾಮಕ ದಳ ಮತ್ತು ನುರಿತ ಸ್ಥಳೀಯ ಈಜುಗಾರರು ಶವಕ್ಕಾಗಿ ಶೋಧ ಕಾರ್ಯಾಚರಣೆ ನಡೆಸಿದರು.

ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದ್ದು, ಮೈಸೂರು ಕೆ.ಆರ್.ಆಸ್ಪತ್ರೆಯ ಶವಗಾರದಲ್ಲಿ ಇಬ್ಬರ ಶವಪರೀಕ್ಷೆ ನಡೆಸಿ ಮೃತರ ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು.

ಎಡಮುರಿ, ಬಲಮುರಿ ಬಂದ್: ಯುವಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಶುಕ್ರವಾರ ಬಲಮುರಿ ಹಾಗೂ ಎಡಮುರಿ ಪ್ರವಾಸಿ ತಾಣವನ್ನು ಸಂಪೂರ್ಣ ಬಂದ್ ಮಾಡಲಾಗಿದ್ದು, ಸುತ್ತ-ಮುತ್ತಲಿನ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿತ್ತು. ಪೊಲೀಸರು ಯಾರನ್ನು ನೀರಿನಲ್ಲಿ ಇಳಿಯಲು ಬಿಟ್ಟಿರಲಿಲ್ಲ. ಇದರೊಂದಿಗೆ ಬಲಮುರಿ ಹಾಗೂ ಎಡಮುರಿ ಪ್ರವಾಸಿ ತಾಣಗಳಲ್ಲಿ ಇರುವ ಅಂಗಡಿಗಳು ಸಂಪೂರ್ಣ ಮುಚ್ಚಿಸಿದ್ದರು.



ಗುರುವಾರ ಜಲಸಮಾಧಿಯಾಗಿದ್ದ ರವಿಚಂದ್ರನ ಶವ ಸಿಕ್ಕ ಬಲಮುರಿಯ ಸ್ಥಳ.

> ಬಲಮುರಿ ಮತ್ತು ಎಡಮುರಿ ಪ್ರವಾಸಿ ತಾಣವನ್ನು ಎಂದಿನಂತೆ ಪ್ರವಾಸಿಗರಿಗೆ ನಿಷೇಧವಿರುವ ಕಾರಣ ಬಂದ್ ಮಾಡಲಾಗಿತ್ತು. ಪ್ರವಾಸಿಗರಿಗೆ ಅವಕಾಶ ನೀಡಿರಲಿಲ್ಲ. ಪೊಲೀಸರ ಬಂದೋಬಸ್ತ್ ಕೂಡ ಮಾಡಲಾಗಿತ್ತು. ಯುವಕರು ಬಲಮುರಿಯಿಂದ ಸುಮಾರು ಎರಡು ಕಿ.ಮೀ ದೂರದ ಹಿಂದೆಯೇ ನೀರಿಗೆ ಇಳಿದಿದ್ದಾರೆ. ಇದರಲ್ಲಿ ನಮ್ಮ ಪೊಲೀಸರ ನಿರ್ಲಕ್ಷ್ಯ ಮತ್ತು ವೈಫಲ್ಯವಾಗಿಲ್ಲ.
> – ಡಾ.ಶೋಭಾರಾಣಿ, ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಲೋಕಾಯುಕ್ತ ಬಲಹೀನಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ: ನ್ಯಾ.ವೀರಪ್ಪ

ಅಧಿಕಾರಿಗಳು ಕಾನೂನು ಬದ್ಧವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು

ಮಂಡ್ಯ, ಮೇ 22– ಅಧಿಕಾರಿಗಳು ಸಮಾಜದ ಒಳಿತಿಗಾಗಿ ನ್ಯಾಯದ ಪರವಾಗಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ ಹಾಗೂ ಅಕ್ರಮ ವಿರುದ್ಧ ಕ್ರಮ ವಹಿಸಬೇಕು ಮತ್ತು ಜನಸಾಮಾನ್ಯರಿಗೆ ತೊಂದರೆಯಾಗುವ ನೀತಿಗಳ ವಿರುದ್ಧ ಕ್ರಮ ಜರುಗಿಸಬೇಕು. ಅಧಿಕಾರಿಗಳು ಕಾನೂನು ಬದ್ಧವಾಗಿ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಡ್ಯ ತಾಲೂಕಿನ ಬಾಕಿ ಇರುವ ಪ್ರಕರಣಗಳ ವಿಚಾರಣೆ ಮತ್ತು ವಿಲೇವಾರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಲೋಕಾಯುಕ್ತ ಸಂಸ್ಥೆಯನ್ನು ಬಲಹೀನ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಸಮಾಜವನ್ನು ಒಳ್ಳೆಯ ದಾರಿಯಲ್ಲಿ ನಡೆಸುವುದು ನಮ್ಮ ಸಂಸ್ಥೆಯ ಉದ್ದೇಶ ಮತ್ತು ಸಾರ್ವಜನಿಕರಿಗೆ ಅನ್ಯಾಯ ಆಗದಂತೆ ಕಾರ್ಯನಿರ್ವಹಿಸುತ್ತೇವೆ ಎಂದರು. ಅಧಿಕಾರಿಗಳು ಕೆಲಸ ಕಾರ್ಯಗಳಲ್ಲಿ ಶಿಸ್ತುಪಾಲನೆಯನ್ನು ಪಾಲಿಸಿ ತೆಗಳುವ ಕೆಲಸ ಮಾಡ ಬೇಡಿ ಎಂದರು. ಕಾನೂನು ಎಲ್ಲರಿಗೂ ಒಂದೇ ಮಾಧ್ಯಮದವರು ಸರ್ಕಾರದ ಕಚೇರಿಗಳಲ್ಲಿ ಆಗುತ್ತಿರುವ ಅಕ್ರಮ ಹಾಗೂ ಸರಿ ತಪ್ಪುಗಳನ್ನು ಎತ್ತಿ ಹಿಡಿಯಬೇಕು. ಮಾಧ್ಯಮದವರಿಂದ ಸಮಾಜವನ್ನು ದಿಟ್ಟ ಹಾದಿಯಲ್ಲಿ ನಡೆಸಲು ಸಾಧ್ಯ ಎಂದು ಹೇಳಿದರು.

ಇಂದು ಬೆಳಿಗ್ಗೆ ಜಿಲ್ಲೆಯ ಬಂದಿಗೌಡ ಬಡಾವಣೆ 2ನೇ ಕ್ರಾಸ್‌ನಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿನಿಯರ ವಸತಿನಿಲಯ ಹಾಗೂ ವಾಲ್ಮೀಕಿ ವಸತಿ ನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗಳ ಅಹವಾಲು ಸ್ವೀಕರಿಸಿರುತ್ತೇವೆ.

ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಹಾಗೂ ಶೌಚಾಲಯ ನಿರ್ವಹಣೆ ಇಲ್ಲದೆ ಇರುವ ಬಗ್ಗೆ ವಿದ್ಯಾರ್ಥಿನಿಯರು ಸಮಸ್ಯೆಗಳನ್ನು ಹೇಳಿದರು. ವಿದ್ಯಾರ್ಥಿನಿಲಯದ ಅಧಿಕಾರಿಗಳಿಗೆ 15 ದಿನಗಳಲ್ಲಿ ವಿದ್ಯಾರ್ಥಿನಿಲಯವನ್ನು ವರ್ಗಾವಣೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿರುತ್ತೇವೆ. ವಸತಿ ನಿಲಯದ ಅಡುಗೆ ಸಿಬ್ಬಂದಿಗಳು ಹಾಗೂ ವಾರ್ಡನ್ ರವರನ್ನು ಶೀಘ್ರವೇ ಬದಲಾಯಿಸುವಂತೆ ತಿಳಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ನ್ಯಾಯಮೂರ್ತಿ ಸುಬ್ರಮಣ್ಯ, ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು, ಉಪ ಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಅರವಿಂದ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಆನಂದ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ.ಶೋಭಾರಾಣಿ, ಜಿಲ್ಲಾ ವಕೀಲ ಸಂಘದ ಅಧ್ಯಕ್ಷ ಸತ್ಯಾನಂದ ರವರು ಉಪಸ್ಥಿತರಿದ್ದರು.



ಜನರಿಂದ ಅಹವಾಲು ಸ್ವೀಕರಿಸುತ್ತಿರುವ ನ್ಯಾಯಮೂರ್ತಿ ಬಿ.ವೀರಪ್ಪ.

ತಾನು ಬರೆದ ಕವಿತೆ ಸೋತರೂ ಕವಿಯ ಬರವಣಿಗೆ ಮಾತ್ರ ನಿಲ್ಲುವುದಿಲ್ಲ



ವಿಶ್ರಾಂತ ಪ್ರಾಂಶುಪಾಲೆ ಲೀಲಾ ಅಪ್ಪಾಜಿ ಮಾತನಾಡುತ್ತಿರುವುದು.

ಮಂಡ್ಯ,ಮೇ 22– ಎಚ್ಚರಿಸಿ ತಿದ್ದಿ ದಾರಿ ತೋರಿಸುವ ಕವಿಯ ಆಲೋಚನೆಯಲ್ಲಿ ಕವಿತೆ ಸೋಲಬಹುದು ಅಥವಾ ಜನರನ್ನು ಮುಟ್ಟದೆ ಇರಬಹುದು ನಿಜ, ಆದರೆ ಕವಿತೆ ಬರೆಯುವುದನ್ನು ನಿಲ್ಲಿಸುವುದಿಲ್ಲ ಮತ್ತೆ ಮತ್ತೆ ಬರೆಯುತ್ತಲೇ ಇರುತ್ತೇನೆ ಎನ್ನುವ ಕವಿ ಆಶಯ ಮೆಚ್ಚಲೇಬೇಕಿದೆ ಎಂದು ವಿಶ್ರಾಂತ ಪ್ರಾಂಶುಪಾಲೆ ಲೀಲಾ ಅಪ್ಪಾಜಿ ಅಭಿಪ್ರಾಯಿಸಿದರು.

ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಕರ್ನಾಟಕ ಸಂಘ, ಪ್ರಸಾರ ಭಾರತಿ ಭಾರತೀಯ ಸಾರ್ವಜನಿಕ ಪ್ರಸಾರ ಸೇವೆ, ಆಕಾಶವಾಣಿ ಮೈಸೂರು ವಿಭಾಗದ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಮುಂಗಾರು ಮಳೆ–ಇಳೆ ಕಾವ್ಯಧಾರೆ ಮತ್ತು ಬಾನುಲಿ ಬರವಣಿಗೆ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಬಿ.ಜಯಪ್ರಕಾಶಗೌಡ ಮಾತನಾಡಿದರು. ಮೈಸೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ಸಹಾಯಕ ನಿರ್ದೇಶಕ ಮಂಜುನಾಥ್ ಎನ್.ಬೇದ್ರೆ ಮಾತನಾಡಿದರು.

ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಯಲ್ಲಿ ಆಗಮಿಸಿದ್ದ ಕವಿಗಳು ಕವಿತೆ ವಾಚಿಸಿದರು, ನಂತರ ಜಿ.ಶಾಂತಕುಮಾರ್ (ಬಾನುಲಿ ನಾಟಕಗಳು), ಬಿ.ದಿಗ್ವಿ ಜಯ್ (ವಿಶೇಷ ರೂಪಕ ಮತ್ತು ಸಾಕ್ಷ್ಯಚಿತ್ರ) ಮತ್ತು ಮೈಸೂರು ಉಮೇಶ್ ಅವರು ಚಿಂತನ ಮತ್ತು ಭಾಷಣಗಳು ಎಂಬ ವಿಷಯ ಕುರಿತು ಬಾನುಲಿ ಬರವಣಿಗೆ ಕಾರ್ಯಾಗಾರ ನಡೆಸಿಕೊಟ್ಟರು. ಲೇಖಕಿ ಭವಾನಿ ಲೋಕೇಶ್ ಇದ್ದರು.

ಅರ್ಜಿ ಆಹ್ವಾನ

ಮಂಡ್ಯ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಂಡ್ಯ, ತಾಲೂಕಿನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅದರಂತೆ ಅರ್ಹ ವಿದ್ಯಾರ್ಥಿಗಳಿಂದ ಮೇ 25 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ಜೂನ್ 15 ಆಗಿರುತ್ತದೆ.

ಅರ್ಜಿ ಸಲ್ಲಿಸಲು http://shp.karnataka.gov.in/bcwd ಆಗಿರುತ್ತದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ನಾಗಮಂಗಲ ಶಾಲಾ ಶಿಕ್ಷಕರ ಸಂಘಕ್ಕೆ ಅವಿರೋಧ ಆಯ್ಕೆ

ನಾಗಮಂಗಲ: ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಜಿ.ಕೆ.ರುದ್ರೇಶ್, ಉಪಾಧ್ಯಕ್ಷರಾಗಿ ಎಲ್. ಸುಧೀರ್ ಹಾಗೂ ಕೆ.ಆರ್.ಸುನೀತಾ ಪ್ರಧಾನ ಕಾರ್ಯದರ್ಶಿಯಾಗಿ ಮಂಜೇಗೌಡ ಬಿ.ಕೆ, ಖಜಾಂಚಿ –ಚಂದ್ರಮೌಳಿ, ಸಹ ಕಾರ್ಯದರ್ಶಿ–ಸುರೇಶ್ ಎಸ್. ಹೆಚ್ ಹಾಗೂ ಫಾತಿಮಾ ಜಹರಾ, ಸಂಘಟನಾ ಕಾರ್ಯದರ್ಶಿ ದಿವ್ಯ ಪ್ರಕಾಶ್ ಎಂ ಎಸ್ ಹಾಗೂ ಗೀತಾಂಜಲಿ ಎಂ.ಎಲ್ 2026 ಹಾಗೂ 2031ರ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ

ಚುನಾವಣಾಧಿಕಾರಿ ಘೋಷಣೆ ಮಾಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಇವರುಗಳು ಹೊರತು ಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆ ಘೋಷಿಸಲಾಗಿದೆ.

ಜೆ ವೈ ಮಂಜುನಾಥ್ ಮಂಡ್ಯ ಜಿಲ್ಲಾಧ್ಯಕ್ಷರಾಗಿ ಹಾಗೂ ಇಂದು ಪುನರ್ ಆಯ್ಕೆ ಆಗಿರುವುದರಿಂದ ಎಲ್ಲಾ ಶಿಕ್ಷಕರ ಪರವಾಗಿ ತಾಲೂಕು ಮಟ್ಟದ ಪದಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಪದಾಧಿಕಾರಿಗಳಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದು ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಬಿಇಓ ಲೋಕೇಶ್ ಹಾಗೂ ನೂರಾರು ಶಿಕ್ಷಕ, ಶಿಕ್ಷಕಿಯರು ಉಪಸ್ಥಿತರಿದ್ದರು.



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅಭಿನಂದಿಸಿದರು.

ಒಂದನೇ ಪುಟದಿಂದ

ಸರ್ಕಾರದ ವಶಕ್ಕೆ

ಹೀಗೆ ವಾರಸುದಾರರಿಲ್ಲದ ಜಮೀನುಗಳ ಪ್ರಕರಣಗಳನ್ನು ಕಂದಾಯ ನ್ಯಾಯಾಲಯ ಪ್ರಕರಣ ನಿರ್ವಹಣಾ ವ್ಯವಸ್ಥೆಯ ಮೂಲಕ ನೇರವಾಗಿ ತಹಶೀಲ್ದಾರ್ ಗ್ರೇಡ್–1 ನ್ಯಾಯಾಲಯಗಳಿಗೆ ವರ್ಗಾಯಿಸಿ, ಅವುಗಳನ್ನು ವಿವಾದಿತ ಪ್ರಕರಣಗಳೆಂದು ಪರಿಗಣಿಸಲಾಗುತ್ತದೆ. ತಹಶೀಲ್ದಾರರು ಇಂತಹ ಭೂಮಿಯ ಬಗ್ಗೆ ಸಾರ್ವಜನಿಕ ಪ್ರಕಟಣೆ ಅಥವಾ ನೋಟಿಸ್ ಹೊರಡಿಸಿ, ಸಮಗ್ರ ತನಿಖೆ ನಡೆಸಲಿದ್ದಾರೆ. ತನಿಖೆಯ ನಂತರವೂ ಯಾವುದೇ ನೈಜ ವಾರಸುದಾರರು ಪತ್ತೆಯಾಗದಿದ್ದಲ್ಲಿ, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಅಡಿಯಲ್ಲಿ ಆ ಜಮೀನನ್ನು ಸಂಪೂರ್ಣವಾಗಿ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಲಿದೆ. ಒಂದು ವೇಳೆ ಜಮೀನಿನ ಅಸಲಿ ವಾರಸುದಾರರು ತಡವಾಗಿ ಕಂದಾಯ ಅಧಿಕಾರಿಗಳ ಮುಂದೆ ಹಾಜರಾದರೆ, ಅವರು ಸೂಕ್ತ ದಾಖಲೆಗಳನ್ನು ಒದಗಿಸಿ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳ ಮೂಲಕ "ಸರ್ಕಾರಿ ಮೀಸಲು" ಸ್ಥಾನಮಾನವನ್ನು ರದ್ದುಪಡಿಸಿಕೊಂಡು ಜಮೀನನ್ನು ಮರಳಿ ಪಡೆಯಲು ಕಂದಾಯ ಇಲಾಖೆ ಅವಕಾಶ ಕಲ್ಪಿಸಿದೆ. ಸರ್ಕಾರದ ಈ ಹೊಸ ಡಿಜಿಟಲ್ ವ್ಯವಸ್ಥೆ ಮತ್ತು ಕಟ್ಟುನಿಟ್ಟಿನ ನಿಯಮದಿಂದಾಗಿ ಇಂತಹ ಭೂ ಕಬಳಿಕೆ ದಂಧೆಗೆ ಸಂಪೂರ್ಣವಾಗಿ ಬ್ರೇಕ್ ಬೀಳಲಿದೆ ಎಂದು ಹಿರಿಯ ಕಂದಾಯ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜ್ಯಸಭೆ ನಾಲ್ಕು ಸ್ಥಾನಕ್ಕೆ ಚುನಾವಣೆ

ಕರ್ನಾಟಕದಿಂದ ರಾಜ್ಯಸಭೆಗೆ ಕಳುಹಿಸಲು ಪಕ್ಷದ ವರಿಷ್ಠರು ಚಿಂತನೆ ನಡೆಸಿದ್ದಾರೆ.

ಬಿ.ಜೆ.ವಿಜಯಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪುತ್ರ ಯತೀಂದ್ರ ಬೆಂಬಲವಿದೆ. ಆದರೆ, ಒಕ್ಕಲಿಗ ಕೋಟಾದಲ್ಲಿ ತಾವು ನಿರ್ಧಾರ ಕೈಗೊಂಡು ವರಿಷ್ಠರಿಗೆ ಶಿಫಾರಸು ಮಾಡುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಂತಿದೆ. ಇವರಲ್ಲದೆ, ಇನ್ನೂ ಕೆಲವು ಮುಖಂಡರು ತೆರೆಮರೆಯಲ್ಲಿ ರಾಜ್ಯಸಭಾ ಟಿಕೆಟ್‌ಗಾಗಿ ಕಸರತ್ತು ನಡೆಸಿದ್ದಾರೆ. ಬಿಜೆಪಿಗೆ ಸುಲಭವಾಗಿ ಒಂದು ಸ್ಥಾನ ಗೆಲ್ಲುವ ಅವಕಾಶ ಇದೆಯಾದರೂ ಅದಕ್ಕಾಗಿ ಪೈಪೋಟಿ ಕಂಡುಬರುತ್ತಿಲ್ಲ. ಆದರೆ, ಪಕ್ಷದ ರಾಜ್ಯ ಘಟಕ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೆಸರನ್ನು ವರಿಷ್ಠರಿಗೆ ಶಿಫಾರಸು ಮಾಡಿದೆ. ಬಿಜೆಪಿಯ ಒಂದು ಸ್ಥಾನ ಜೆಡಿಎಸ್‌ನ ದೇವೇಗೌಡರಿಗೆ ಬಿಟ್ಟುಕೊಡಬಹುದೆಂಬ ಮಾತುಗಳು ಕೇಳಿಬರುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಕೈಗೊಳ್ಳುವ ನಿರ್ಧಾರದ ಮೇಲೆ ಬಿಜೆಪಿ ಅಭ್ಯರ್ಥಿ ಆಯ್ಕೆ ನಡೆಯಲಿದೆ.

ಸಂಪುಟ ಪುನರ್ರಚಿಸಿ

ಎಂದು ಹೇಳಿದ ಗೋಪಾಲಕೃಷ್ಣ, ನಾವು ನಮ್ಮ ಹಕ್ಕುಗಳನ್ನು ಕೇಳುತ್ತಿದ್ದೇವೆ. ಮುಖ್ಯಮಂತ್ರಿ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ, ನೀವು ನಾಯಕತ್ವವನ್ನು ಕೇಳಬೇಕು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ನಮಗೆ ಸಂಪುಟ ಪುನರ್ ರಚನೆ ಮಾಡುವ ಮೂಲಕ ಸಚಿವ ಸ್ಥಾನ ನೀಡಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ನಾವು ಬಲವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಹೀಗೆಯೇ ಮುಂದುವರಿಯಲು ನಾವು ಬಿಡುವುದಿಲ್ಲ. 15 ದಿನಗಳಲ್ಲಿ ನಮಗೆ ಅವಕಾಶ ನೀಡಬೇಕು. ಇಲ್ಲದಿದ್ದರೆ, ನಮ್ಮ ಮುಂದೆ ಬೇರೆ ಯೋಜನೆಗಳಿವೆ. ನಾವು ಅವುಗಳ ಬಗ್ಗೆ ನಿರ್ಧರಿಸುತ್ತೇವೆ ಎಂದರು. ವರದಿಗಳ ಪ್ರಕಾರ, ಸಚಿವ ಸ್ಥಾನದ ಆಕಾಂಕ್ಷಿಗಳಾದ ಕೆಲವು ಕಾಂಗ್ರೆಸ್ ಶಾಸಕರು ಈಗಾಗಲೇ ದೆಹಲಿಯಲ್ಲಿದ್ದು, ಪಕ್ಷದ ನಾಯಕತ್ವವನ್ನು ಭೇಟಿ ಮಾಡಲು ಹೋಗಿದ್ದಾರೆ ಎನ್ನಲಾಗಿದೆ. ಕಳೆದ ತಿಂಗಳು, ಹಿರಿಯ ಶಾಸಕರ ತಂಡವು ದೆಹಲಿಯಲ್ಲಿ ಪಕ್ಷದ ನಾಯಕತ್ವವನ್ನು ಭೇಟಿ ಮಾಡಿ ಸಚಿವ ಸಂಪುಟ ಪುನರ್ ರಚನೆಗೆ ಒತ್ತಾಯಿಸಿತು. ಮೊದಲು ಮತ್ತು ಎರಡನೇ ಬಾರಿ ಶಾಸಕರಾಗಿರುವ ಕೆಲವರು ಸಚಿವ ಸ್ಥಾನದ ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ.

ನಾಯಕತ್ವದ ಜಗ್ಗಾಟ: ಪಕ್ಷದ ಮೂಲಗಳ ಪ್ರಕಾರ, ಸಿದ್ದರಾಮಯ್ಯ ಸಂಪುಟ ಪುನರ್ ರಚನೆಗೆ ಒಲವು ತೋರಿದರೆ, ಶಿವಕುಮಾರ್ ನಾಯಕತ್ವ ಬದಲಾವಣೆಯ ಬಗ್ಗೆ ಪಕ್ಷ ಮೊದಲು ನಿರ್ಧರಿಸಬೇಕೆಂದು ಬಯಸುತ್ತಾರೆ.

ಪಕ್ಷದ ಹಲವಾರು ಒಳಗಿನವರ ಪ್ರಕಾರ, ಕಾಂಗ್ರೆಸ್ ಹೈಕಮಾಂಡ್ ಸಂಪುಟ ಪುನರ್ ರಚನೆಯನ್ನು ಅನುಮೋದಿಸಿದರೆ, ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ವರ್ಷಗಳ ಪೂರ್ಣ ಅವಧಿಯನ್ನು ಪೂರ್ಣಗೊಳಿಸುತ್ತಾರೆ. ಇದು ಶಿವಕುಮಾರ್ ಅವರು ಸಿಎಂ ಹುದ್ದೆಯನ್ನು ಅಲಂಕರಿಸುವ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಸೇರಿದಂತೆ 34 ಸಚಿವರು ಇದ್ದಾರೆ. ಸದ್ಯ ಮೂರು ಸಚಿವ ಸ್ಥಾನಗಳು ಖಾಲಿ ಇವೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಟಿ ಅಭಿವೃದ್ಧಿ ನಿಗಮದಲ್ಲಿ ದುರುಪಯೋಗದ ಆರೋಪದ ಮೇಲೆ ಬಿ ನಾಗೇಂದ್ರ ರಾಜೀನಾಮೆ ನೀಡಿದರು ಮತ್ತು ಪಕ್ಷದ ಹೈಕಮಾಂಡ್ ಸೂಚನೆಯ ಮೇರೆಗೆ ಕೆಎನ್ ರಾಜಣ್ಣ ಅವರನ್ನು ವಜಾಗೊಳಿಸಲಾಯಿತು. ಸಚಿವ ಡಿ ಸುಧಾಕರ್ ಅವರ ಇತ್ತೀಚಿನ ನಿಧನದಿಂದ ಮೂರನೇ ಹುದ್ದೆ ಖಾಲಿಯಾಗಿದೆ.

ಯಜಮಾನರು ಮತ್ತು ನಮ್ಮ ಕುಟುಂಬದ ಮುಖ್ಯಸ್ಥರು

ಅವರು ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದರು. ಒಂದು ವೇಳೆ ಮುಖ್ಯಮಂತ್ರಿಗಳಿಗೆ ಕಸದ ರಾಶಿ ಕಂಡರೆ, ತಮ್ಮ ಕೆಲಸಕ್ಕೆ ಎಲ್ಲಿ ಕುತ್ತು ಬರುತ್ತದೆಯೊ ಎಂಬ ಆತಂಕ ಅಧಿಕಾರಿಗಳಲ್ಲಿತ್ತು. ಇದರಿಂದ ಈ ರಸ್ತೆಯ ಕಸದ ಸಮಸ್ಯೆ ನಗರ ಪಾಲಿಕೆ ಅಧಿಕಾರಿಗಳಿಗೆ ದೊಡ್ಡ ತಲೆ ನೋವಾಗಿದೆ. ಈ ಹಿನ್ನೆಲೆಯಲ್ಲಿ ಈ ರಸ್ತೆಯಲ್ಲಿ ಕಸ ಸುರಿಯುವುದನ್ನು ತಪ್ಪಿಸಲು ವಿನೂತನ ಜಾಗೃತಿ ಮೂಡಿಸುವುದರೊಂದಿಗೆ, ದಂಡಾಸ್ತ್ರದ ಎಚ್ಚರಿಕೆ ನೀಡಲಾಗಿದೆ. ರಸ್ತೆಗೆ ಹೊಂದಿಕೊಂಡಂತೆ ಹಸಿರು ಪರದೆಯನ್ನು ಹಾಕಲಾಗಿದೆ. ಈ ಮೂಲಕ ರಸ್ತೆ ದಾಟಿ ಯಾರೂ ಖಾಲಿ ಜಾಗದತ್ತ ಸುಳಿಯದಂತೆ ಎಚ್ಚರ ವಹಿಸಲಾಗಿದೆ.

ಅಲ್ಲದೆ ಇಲ್ಲಿ ಕಸ ಸುರಿಯುವವರನ್ನು ನಾಚಿಸುವ ಫಲಕಗಳನ್ನು ಕೂಡ ಹಾಕಲಾಗಿದೆ. ಅತ್ಯಂತ ಅಚ್ಚರಿ ಹಾಗೂ ನಗೆ ಸಂಗತಿ ಎಂದರೆ, ನಾಯಿಯೊಂದರ ಭಾವಚಿತ್ರ ಹಾಕಿ ಅಲ್ಲಿ **'ಇಲ್ಲಿ ಕಸ ಎಸೆಯುವವರು ನನ್ನ ಜನುಮದಾತರು ಹಾಗೂ ನಮ್ಮ ಕುಟುಂಬದ ಸದಸ್ಯರು'** ಎಂದು ಫಲಕದಲ್ಲಿ ಬರೆದಿರುವುದು ಈ ರಸ್ತೆಯಲ್ಲಿ ಸಾಗುವವರಿಗೆ ಮಸ್ತ್ ಮಜಾ ನೀಡುತ್ತಿದೆ. ಇದಿಷ್ಟೇ ಅಲ್ಲದೆ ಇಲ್ಲಿ ಕಸ ಹಾಕುವವರಿಗೆ 500ರಿಂದ 50 ಸಾವಿರ ರೂಪಾಯಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆಯ ಫಲಕ ಕೂಡ ಅಳವಡಿಸಲಾಗಿದೆ. ಅಲ್ಲದೆ ಹಸಿ ಕಸ, ಒಣ ಕಸ ಬೇರ್ಪಡಿಸಿ ಅದನ್ನು ಮನೆ ಬಾಗಿಲಿಗೆ ಬರುವ ಪೌರ ಕಾರ್ಮಿಕರಿಗೆ ಕೊಡಿ. ನಮ್ಮ ಸ್ವಚ್ಛತೆ, ನಮ್ಮ ಹಕ್ಕು ಫಲಕಗಳನ್ನು ಕೂಡ ಅಳವಡಿಸಲಾಗಿದೆ.

ಜಾನುವಾರುಗಳಿಗೂ 'ಆಧಾರ್' ಭಾಗ್ಯ!

ಗುರುತಿನ ಚೀಟಿ ಸೃಷ್ಟಿಸಲಾಗುತ್ತದೆ. ಭಾರತದಲ್ಲೇ ಮೊದಲ ಬಾರಿಗೆ ಜಾರಿಗೆ ಬರುತ್ತಿರುವ ಈ ಯೋಜನೆ, ಸಾಂಪ್ರದಾಯಿಕ ಕಿವಿ ಚುಚ್ಚುವ ಟ್ಯಾಗ್ ವ್ಯವಸ್ಥೆಗೆ ಪರ್ಯಾಯವಾಗಲಿದೆ. ಜಾನುವಾರುಗಳ ಮೂಗಿನ ಮೇಲಿನ ರೇಖೆಗಳು, ಮಡಚುಗಳು ಮತ್ತು ಗುರುತುಗಳು ಮಾನವರ ಬೆರಳಚ್ಚಿನಂತೆಯೇ ವಿಶಿಷ್ಟವಾಗಿರುವುದರಿಂದ, ಅದನ್ನು ಡಿಜಿಟಲ್ ಗುರುತಾಗಿ ಬಳಸಲಾಗುತ್ತಿದೆ.

ರಾಜ್ಯದ ಇ–ಆಡಳಿತ ಕೇಂದ್ರ ಮತ್ತು ಕೃತಕ ಬುದ್ಧಿಮತ್ತೆ ವಿಭಾಗದ ಸಹಯೋಗದಲ್ಲಿ ಈ ಯೋಜನೆ ರೂಪುಗೊಂಡಿದ್ದು, ಪ್ರಾಯೋಗಿಕವಾಗಿ ಜಾರಿಗೆ ತರಲು ಸಿದ್ಧತೆಗಳು ನಡೆಯುತ್ತಿವೆ. ಈ ಡಿಜಿಟಲ್ ವ್ಯವಸ್ಥೆಯ ಮೂಲಕ ಜಾನುವಾರುಗಳ ಲಸಿಕೆ ವಿವರ, ಆರೋಗ್ಯ ಸ್ಥಿತಿ, ವಿಮೆ ಮಾಹಿತಿ ಹಾಗೂ ಸಾವಿನ ಪರಿಹಾರ ಅರ್ಜಿಗಳನ್ನು ಸುಲಭವಾಗಿ ಟ್ರ್ಯಾಕ್ ಮಾಡಬಹುದಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ) ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಅವರು ಮಾತನಾಡಿ, ಈ ಯೋಜನೆ ಜಾನುವಾರುಗಳ ನಿಖರ ಗುರುತನ್ನು ಖಚಿತಪಡಿಸುವುದರ ಜೊತೆಗೆ ಪಶುಸಂಗೋಪನಾ ಯೋಜನೆಗಳಲ್ಲಿ ನಡೆಯುವ ವಂಚನೆ ತಡೆಯಲು ಸಹಾಯಕವಾಗಲಿದೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಪ್ರಸ್ತುತ ಒಂದು ಕೋಟಿಗೂ ಹೆಚ್ಚು ಜಾನುವಾರುಗಳಿದ್ದು, ಪ್ರತಿವರ್ಷ ಸುಮಾರು 10 ಲಕ್ಷದಷ್ಟು ಜಾನುವಾರುಗಳ ಸಂಖ್ಯೆ ಹೆಚ್ಚಳ ವಾಗುತ್ತಿದೆ. ಇಷ್ಟು ದೊಡ್ಡ ಸಂಖ್ಯೆಯ ಜಾನುವಾರುಗಳನ್ನು ನಿರ್ವಹಿಸಲು ಎಐ ಆಧಾರಿತ ಡಿಜಿಟಲ್ ವ್ಯವಸ್ಥೆ ಪರಿಣಾಮಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕೃತಕ ಬುದ್ಧಿ ಮತ್ತೆ ವಿಭಾಗದ ಯೋಜನಾ ನಿರ್ದೇಶಕ ಶ್ರೀವ್ಯಾಸ್ ಎಚ್‌ಎಂ ಮಾತನಾಡಿ, ಪ್ರಸ್ತುತ ಜಾನುವಾರುಗಳ ಗುರುತಿಗಾಗಿ ಕಿವಿ ಚುಚ್ಚುವ ವಿಧಾನ ಬಳಸಲಾಗುತ್ತಿದೆ. ಆದರೆ, ಎಐ ಆಧಾರಿತ ಮೂಗು ಗುರುತು ವ್ಯವಸ್ಥೆಯಿಂದ ಸುಲಭ ಹಾಗೂ ವೇಗವಾದ ಗುರುತು ಸಾಧ್ಯವಾಗಲಿದೆ ಎಂದು ಹೇಳಿದ್ದಾರೆ.

ಈ ಯೋಜನೆಯ ಮತ್ತೊಂದು ವಿಶೇಷವೆಂದರೆ, ರೈತರಿಗೆ ಲಸಿಕೆ ದಿನಾಂಕಗಳ ಬಗ್ಗೆ SMS ಮೂಲಕ ಮುಂಚಿತ ಮಾಹಿತಿ ನೀಡಲಾಗುತ್ತದೆ. ಹೊಸದಾಗಿ ಹುಟ್ಟುವ ಕರುಗಳಿಗೂ ಡಿಜಿಟಲ್ ದಾಖಲೆ ಸೃಷ್ಟಿಸಬಹುದು. ಮುಂದಿನ ದಿನಗಳಲ್ಲಿ ಜಾನುವಾರುಗಳ ಮೂಗಿನ ಫೋಟೋ ಸ್ಕ್ಯಾನ್ ಮೂಲಕ ಆರೋಗ್ಯ ಮೌಲ್ಯ ಮಾಪನ ಮಾಡಬಹುದು ಎಂದು ತಿಳಿಸಿದ್ದಾರೆ.

ಈ ಎಐ ಆಧಾರಿತ ವ್ಯವಸ್ಥೆ ಪಶು ಸಂಗೋಪನಾ ಇಲಾಖೆಯಲ್ಲಿ ಡಿಜಿಟಲ್ ಆಡಳಿತ ಬಲಪಡಿಸುವುದರ ಜೊತೆಗೆ ಜಾನುವಾರುಗಳ ಗುರುತು ಮತ್ತು ದಾಖಲೆ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ಪರಿಣಾಮಕಾರಿತ್ವ ತರುವ ನಿರೀಕ್ಷೆಯಿದೆ.

ಯಾವ ಲೋಪವಿಲ್ಲದೆ ಮರು ನೀಟ್–ಯುಜಿ

ಅರ್ಹ ವಿದ್ಯಾರ್ಥಿಯೂ ಸೀಟು ಕಳೆದುಕೊಳ್ಳಬಾರದು ಎಂದು ಅವರು ಹೇಳಿದ್ದಾರೆ.


ಜೂನ್ 21ರಂದು ನಡೆಯಲಿರುವ ಮರು ಪರೀಕ್ಷೆಯು ಶೇ.100ರಷ್ಟು ದೋಷ ಮುಕ್ತವಾಗಿರಲಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಜಾಗರಣ್ ಭಾರತ್ ಶಿಕ್ಷಣ ಸಮಾವೇಶ 2026 ಉದ್ಘಾಟಿಸಿ ಮಾತನಾಡಿದ ಅವರು, ಸುಮಾರು 22 ಲಕ್ಷ ವಿದ್ಯಾರ್ಥಿಗಳು ನಿರಾಸೆಗೊಂಡಿದ್ದಾರೆ. ಸರ್ಕಾರವು ವ್ಯವಸ್ಥೆಯನ್ನು ಸರಿಪಡಿಸಲು ಬದ್ಧವಾಗಿದೆ. ಮಕ್ಕಳ ಯಾತನೆಯನ್ನು ಮನಗಂಡು ಹೊಣೆ ಹೊತ್ತುಕೊಂಡು ಹೇಳುತ್ತಿದ್ದೇನೆ. ನಾವು ಕೆಲವು ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಯಿತು ಎಂದು ಹೇಳಿದ್ದಾರೆ.

ಈ ಬಗ್ಗೆ ಎದ್ದಿರುವ ಟೀಕೆ ಹಾಗೂ ಸವಾಲುಗಳನ್ನು ಎದುರಿಸಲು ಸರ್ಕಾರವು ಸಿದ್ಧವಾಗಿದೆ. ವ್ಯವಸ್ಥೆಯನ್ನು ಸರಿಪಡಿಸುವುದು ನನ್ನ ಜವಾಬ್ದಾರಿ. ಕಣ್ಣು ಮುಚ್ಚಿಕೊಂಡು ದೂರು ಸರಿಯುವುದು ನನ್ನ ಕರ್ತವ್ಯವಲ್ಲ ಎಂದು ಹೇಳಿದ್ದಾರೆ.

ಉಪಲೋಕಾಯುಕ್ತ ಕೇಸ್

ಮಾಧ್ಯಮ ವರದಿಗಳನ್ನು ಆಧಾರವನ್ನಾಗಿ ಪಡೆದು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿರುವ ಉಪಲೋಕಾಯುಕ್ತ, ಈ ಘಟನೆ ಜೀವಿಸುವ ಹಕ್ಕಿಗೆ ಸಂಬಂಧಿಸಿದ ಸಂವಿಧಾನದ 21ನೇ ವಿಧಿಯ ಉಲ್ಲಂಘನೆ ಎಂದು ಉಲ್ಲೇಖಿಸಿದ್ದಾರೆ. ಜನರ ಸುರಕ್ಷತೆ ಕಾಪಾಡುವುದು ಅಧಿಕಾರಿಗಳ ಜವಾಬ್ದಾರಿ ಎಂದು ಸುಪ್ರೀಂಕೋರ್ಟ್ ನೀಡಿದ ತೀರ್ಪನ್ನೂ ಪ್ರಸ್ತಾಪಿಸಿದ್ದಾರೆ. ಜೂ.24ರೊಳಗೆ ಸಂಬಂಧಿತ ಅರಣ್ಯ ಅಧಿಕಾರಿಗಳು ವೈಯಕ್ತಿಕವಾಗಿ ತಮ್ಮ ವಿವರಣೆ ಸಲ್ಲಿಸುವಂತೆ ಉಪ ಲೋಕಾಯುಕ್ತ ಆದೇಶ ನೀಡಿದ್ದಾರೆ.

ಅಮಾನತುಗೊಂಡ ಖಾಸಗಿ ಸಂಸ್ಥೆಯೊಂದರ ಏಳು ಕಾರ್ಮಿಕರಿಗೆ ಬಾಕಿ ಭತ್ಯೆ ವಿತರಣೆ



ಮೈಸೂರಿನ ಸಹಾಯಕ ಕಾರ್ಮಿಕ ಆಯುಕ್ತರಾದ ಲಲಿತಾಂಬಾ ಅವರು ಕಾರ್ಮಿಕರಿಗೆ ಬಾಕಿ ಭತ್ಯೆ ಚೆಕ್ ಹಸ್ತಾಂತರಿಸಿದರು.

ಮೈಸೂರು, ಮೇ 22– ನಗರದ ಕೆಆರ್‌ಎಸ್ ರಸ್ತೆ, ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎಲ್‌ಜಿಬಿ ಫೋರ್ಜ್ ಲಿಮಿಟೆಡ್ ಸಂಸ್ಥೆಯ ಏಳು ಜನ ಕಾರ್ಮಿಕರಿಗೆ ಒಟ್ಟು 11,47,000 ಬಾಕಿ ಅಮಾನತು ಭತ್ಯೆಯ ಚೆಕ್‌ಗಳನ್ನು ಮೈಸೂರಿನ ಸಹಾಯಕ ಕಾರ್ಮಿಕ ಆಯುಕ್ತರಾದ ಲಲಿತಾಂಬಾ ಅವರು ಇಂದು ವಿತರಿಸಿದರು.

ಕಾರ್ಮಿಕರು ಸಿಐಟಿಯು ನೇತೃತ್ವದ ಮೈಸೂರು ಜಿಲ್ಲಾ ಕಾರ್ಮಿಕರ ಸಂಘದ ಸದಸ್ಯರಾಗಿದ್ದ ಕಾರಣಕ್ಕೆ ಕುಪಿತಗೊಂಡ ಎಲ್‌ಜಿಬಿ ಆಡಳಿತ ಮಂಡಳಿಯು, ಅವರ ಮೇಲೆ ಆಪಾದನೆ ಹೊರಿಸಿ, ವಿನಾ ಕಾರಣ ಕೆಲಸದಿಂದ ಅಮಾನತುಗೊಳಿಸಿತ್ತು. ಅಷ್ಟೇ ಅಲ್ಲದೆ, ಕಾನೂನುಬದ್ಧವಾಗಿ ನೀಡಬೇಕಾಗಿದ್ದ ಅಮಾನತು ಭತ್ಯೆಯನ್ನು ನೀಡದೆ ವಂಚಿಸಿತ್ತು ಇದರ ವಿರುದ್ಧ ಕಾರ್ಮಿಕ ಸಂಘಟನೆಯು ಕರ್ನಾಟಕ ಸಸ್ಪೆನ್ಷನ್ ಅಲೋವೆನ್ಸ್ ಕಾಯ್ದೆಯಡಿ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಪ್ರಕರಣ ದಾಖಲಿಸಿತ್ತು ಕಾರ್ಮಿಕರ ಪರವಾಗಿ ಸಿಐಟಿಯು ಜಿಲ್ಲಾ ಕಾರ್ಯಾಧ್ಯಕ್ಷ ಹೆಚ್.ಎಸ್.ಜಗದೀಶ್ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು. ವಾದ–ಪ್ರತಿವಾದ ಆಲಿಸಿದ ಪ್ರಾಧಿಕಾರವು, ನೊಂದ ಏಳು ಜನ ಕಾರ್ಮಿಕರಿಗೆ ಒಟ್ಟು 11,47,000 ಬಾಕಿ ವೇತನ ಪಾವತಿಸುವಂತೆ ಆಡಳಿತ ಮಂಡಳಿಗೆ ಆದೇಶಿಸಿತ್ತು.

ಪ್ರಾಧಿಕಾರದ ಕಟ್ಟುನಿಟ್ಟಿನ ಆದೇಶಕ್ಕೆ ಮಣಿದ ಎಲ್‌ಜಿಬಿ ಆಡಳಿತ ವರ್ಗವು ಪ್ರಾಧಿಕಾರಕ್ಕೆ ಪಾವತಿಸಿದ ಸದರಿ ಮೊತ್ತದ ಚೆಕ್‌ಗಳನ್ನು ಸಹಾಯಕ ಕಾರ್ಮಿಕ ಆಯುಕ್ತರಾದ ಲಲಿತಾಂಬಾ ಅವರು ಕಾರ್ಮಿಕರಿಗೆ ಹಸ್ತಾಂತರಿಸಿದರು. ಈ ಮೂಲಕ ಹಲವಾರು ವರ್ಷಗಳಿಂದ ಅನ್ಯಾಯಕ್ಕೊಳಗಾಗಿದ್ದ ಕಾರ್ಮಿಕರಿಗೆ ನ್ಯಾಯ ಸಿಕ್ಕಂತಾಗಿದೆ ಎಂದು ಎಲ್‌ಜಿಬಿ ಸ್ಟಾಫ್ ಎಂಪ್ಲಾಯಿಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಎಸ್.ರಂಗನಾಥ ಹರ್ಷ ವ್ಯಕ್ತಪಡಿಸಿದ್ದಾರೆ.

ಪಿ.ಚಂದ್ರಶೇಖರ್‌ಗೆ ಪಿಎಚ್.ಡಿ



ಮೈಸೂರು: ಡಾ.ಕೆ.ಎನ್.ಸುರೇಶ್ ಬಾಬು ಅವರ ಮಾರ್ಗದರ್ಶನದಲ್ಲಿ ಪಿ. ಚಂದ್ರಶೇಖರ್ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಖಿಲ್ ಕುಮಾರಸ್ವಾಮಿ ರಾಜಕೀಯ ಚಕ್ರವ್ಯೂಹ ಭೇದಿಸುವ ಆಧುನಿಕ ಅಭಿಮನ್ಯು

ಹಗುರವಾಗಿ ಮಾತನಾಡಬೇಡಿ: ಚಿನ್ನಿ ರವಿ

ಮೈಸೂರು, ಮೇ 22– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಾಕತ್ತು, ಸ್ಟೇಟಸ್ ಹೇಗಿದೆ ಎಂಬುದನ್ನು ಮುಖ್ಯಮಂತ್ರಿಗಳು ಹಾಗೂ ಹೈಕಮಾಂಡ್ ಎದುರು ತೋರಿಸಲಿ ಎಂದು ಮಾಜಿ ಮೇಯರ್ ಎಂ.ಜೆ.ರವಿಕುಮಾರ್(ಚಿನ್ನಿ ರವಿ)ವಾಗ್ದಾಳಿ ನಡೆಸಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ಸ್ಟೇಟಸ್ ಬಗ್ಗೆ ಮಾತನಾಡಿದ್ದಾರೆ. ಅವರ ತಾಕತ್ತು, ಸ್ಟೇಟಸ್ ಅನ್ನು ಅವರ ಹೈಕಮಾಂಡ್ ಹಾಗೂ ಸಿಎಂ ಮುಂದೆ ತೋರಿಸಲಿ. ಇದಕ್ಕೆಲ್ಲಾ 2028ರ ಚುನಾವಣೆಯಲ್ಲಿ ನಮ್ಮ ನಾಯಕರಾದ ಕುಮಾರಸ್ವಾಮಿ ಅವರು ಉತ್ತರ ಕೊಡುತ್ತಾರೆ ಎಂದು ಕಿಡಿಕಾರಿದ್ದಾರೆ.





ನಿಖಿಲ್ ಕುಮಾರಸ್ವಾಮಿ ಚಿನ್ನಿ ರವಿ

ನಿಖಿಲ್ ಕುಮಾರಸ್ವಾಮಿ ಅವರ ಬಗ್ಗೆ ಲಘುವಾಗಿ ಮಾತನಾಡಬೇಡಿ. ಜನರೊಂದಿಗೆ ಜನತಾದಳ ಪ್ರವಾಸ ನಿಖಿಲ್ ಅವರ ಸ್ಟೇಟಸ್ ಏನೆಂಬುದನ್ನು ಸಾಬೀತುಪಡಿಸಿದೆ. 75 ಕ್ಷೇತ್ರಗಳಲ್ಲಿ ತಳಮಟ್ಟದಿಂದ ಪಕ್ಷ ಸಂಘಟನೆಗೆ ಶ್ರಮಿಸಿದ್ದಾರೆ. ಚನ್ನಪಟ್ಟಣದಲ್ಲಿ ನಿಖಿಲ್ ಅವರನ್ನು ಸೋಲಿಸಲು, ನಿಮ್ಮ ವಿರೋಧಿಯೊಂದಿಗೆ ಕೈ ಜೋಡಿಸಿ, ಇಡೀ ಸರ್ಕಾರವನ್ನೇ ಪ್ರಚಾರಕ್ಕೆ ಬಳಸಿಕೊಂಡಿದ್ದು ಜನರಿಗೆ ತಿಳಿದಿದೆ.

ನಿಖಿಲ್ ಕುಮಾರಸ್ವಾಮಿ ತಾಯಿಯ ಗರ್ಭದಲ್ಲೇ ರಾಜಕಾರಣ ಕಲಿತು, ಚಕ್ರವ್ಯೂಹ ಭೇದಿಸಬಲ್ಲ ಆಧುನಿಕ ಅಭಿಮನ್ಯು. ನಿಮ್ಮ ಸ್ಟೇಟಸ್ ಶಾಶ್ವತವಲ್ಲ. ನೀವು ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸಿ, ಗೆದ್ದು ತೋರಿಸಿ. ಕೇವಲ ಎಂಎಲ್ಎ ಆಗಿ ಚುನಾವಣೆ ನಡೆಸಿ ಕೇವಲ 50 ಸ್ಥಾನಗಳನ್ನು ಗೆದ್ದು ನಿಮ್ಮ ತಾಕತ್ತು ತೋರಿಸಿ ಎಂದು ಸವಾಲು ಹಾಕಿದ್ದಾರೆ.

ಕೃತಕ ಬುದ್ಧಿಮತ್ತೆಗೆ ಗುಲಾಮರಾಗದೆ ಸ್ವಯಂ ಚಿಂತನೆ ರೂಢಿಸಿಕೊಳ್ಳಿ...

● ವಿದ್ಯಾರ್ಥಿಗಳಿಗೆ ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್ ಸಲಹೆ ● ಮೈಸೂರಿನ ಶಾರದಾ ವಿಲಾಸ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿಗೆ ಸನ್ಮಾನ

ಮೈಸೂರು, ಮೇ22(ಬಿಎಲ್‌ಯು)– ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನಕ್ಕೆ ಗುಲಾಮರಾಗದೆ ಸ್ವಯಂ ಚಿಂತನೆ ರೂಢಿಸಿಕೊಳ್ಳಿ ಎಂದು ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್ ಸಲಹೆ ನೀಡಿದರು.

ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಇಂದು ಶಾರದಾ ವಿಲಾಸ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ತಾವೂ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಗೂಗಲ್ ಸೇರಿದಂತೆ ಯಾವುದೇ ರೀತಿಯ ಅತ್ಯಾಧುನಿಕ ತಂತ್ರಜ್ಞಾನವಿದ್ದರೂ ಅದರ ಮೇಲೆ ಅವಲಂಬಿಸದೆ ಸ್ವಯಂ ಚಿಂತನೆ ಅಳವಡಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ವಕೀಲರು ವೃತ್ತಿ ಧರ್ಮ ಪರಿಪಾಲನೆ ಮಾಡಬೇಕು. ವೃತ್ತಿಗೆ ನಾವು ಬೆಲೆ ನೀಡಬೇಕು. ಧರ್ಮೋ ರಕ್ಷತಿ ರಕ್ಷಿತಃ ಎಂಬಂತೆ ನಾವು ವೃತ್ತಿ ಧರ್ಮವನ್ನು ಅನುಸರಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂದು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟರು.

ನ್ಯಾಯಾಧೀಶರು ಬಹಳ ಜವಾಬ್ದಾರಿ ಹಾಗೂ ಎಚ್ಚರಿಕೆಯಿಂದ ನ್ಯಾಯಬದ್ಧ, ಸಂವಿಧಾನ ಬದ್ಧವಾಗಿ ತೀರ್ಪು ನೀಡಬೇಕು. ತೀರ್ಪಿನಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಒಂದು ಕುಟುಂಬವೇ ಬೀದಿಗೆ ಬರುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯಾಧೀಶರ ತೀರ್ಪು ಬಹಳ ಮಹತ್ವ ಪಡೆದಿರುತ್ತದೆ ಎಂದು ಹೇಳಿದರು.

1950ರಿಂದ 1960ರವರೆಗೆ ಇದ್ದ ನ್ಯಾಯಾಧೀಶರನ್ನು ಸಪ್ತ ಋಷಿಗಳೆಂದು ಭಾವಿಸಬಹುದು. ಅವರ ತೀರ್ಪು ಅಕ್ಷರ ಮಟ್ಟಿಗೆ ಸಂವಿಧಾನ ಬದ್ಧವಾಗಿರುತ್ತಿತ್ತು. ಅಂದು ಅವರು ನೀಡಿರುವ ತೀರ್ಪುಗಳನ್ನು ಓದಿದರೆ ನಮ್ಮ ಚಿಂತೆಯ ಪರಿಯೆ ಬದಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂದು ನೀಡಿರುವಂತಹ ತೀರ್ಪುಗಳನ್ನು ಇಂದಿನ ವಕೀಲರು ಓದಬೇಕು ಎಂದು ಸಲಹೆಯಿತ್ತರು.

ನಮ್ಮ ದೇಶ, ನಮ್ಮ ತಂದೆ–ತಾಯಿ, ನಾನು ಕಲಿತ ವಿದ್ಯಾ ಸಂಸ್ಥೆ ಬಗ್ಗೆ ಗೌರವ ಹಾಗೂ ಪ್ರೀತಿ ವಿಶ್ವಾಸ ಹೊಂದಿರಬೇಕು. ಪ್ರಮುಖವಾಗಿ ನಾನು ನನ್ನ ದೇಶವನ್ನು ಪ್ರೀತಿಸುವಂತಿರಬೇಕು. ದೇಶ ಇದ್ದರೆ ನಾವು, ನೀವು ಎಂಬ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ನಾನು ಓದಿದ ಶಾರದಾ ವಿಲಾಸ ಕಾನೂನು ಕಾಲೇಜಿನ ಬಗ್ಗೆ ನನಗೆ ಅತೀವವಾದ ಗೌರವ ಭಾವನೆ ಇದೆ. ಮೈಸೂರಿಗೆ ಬಂದ ವೇಳೆ ಇಲ್ಲಿಗೆ ಬಂದು ಹೋಗುತ್ತೇನೆ. ಕರ್ನಾಟಕ ಮಾತ್ರವಲ್ಲದೆ ಭಾರತದಲ್ಲೆ ಪ್ರತಿಷ್ಠಿತ ಕಾನೂನು ಕಾಲೇಜು ಇದಾಗಿದ್ದು, ನಮಗೆ ಶಿಕ್ಷಣ ಮಾತ್ರವಲ್ಲದೆ ಯಾವ ರೀತಿ ಉತ್ತಮವಾಗಿ ಬದುಕಬೇಕು ಎಂಬ ಪಾಠವನ್ನು ಕೂಡ ಹೇಳಿಕೊಟ್ಟಿದೆ ಎಂದರು.



ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಶುಕ್ರವಾರ ಶಾರದಾ ವಿಲಾಸ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಹಾಗೂ ಲಾ ಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು.

- ಗೂಗಲ್ ಮೇಲೆ ಪೂರ್ಣ ಅವಲಂಬಿತರಾಗಬೇಡಿ
- ಜಡ್ಜ್ ತೀರ್ಪು ಸ್ವಲ್ಪ ತಪ್ಪಾದರೆ ಭಾರೀ ಪ್ರಮಾದ
- ವಕೀಲರು ತಮ್ಮ ವೃತ್ತಿ ಧರ್ಮ ಪಾಲಿಸಬೇಕು
- ದೇಶವಿದ್ದರೆ ನಾನು, ನೀವು ಎಂಬ ಭಾವನೆ ಇರಬೇಕು

ಅಮ್ಮ ಮಾಡುವ ಉಪ್ಸಾರು, ಮುದ್ದೆ ರುಚಿಗೆ ಸರಿಸಾಟಿ ಇಲ್ಲ!

ನಾವು ತಾಜ್ ಸೇರಿದಂತೆ ಐಷರಾಮಿ ಹೋಟೆಲ್‌ಗಳಲ್ಲಿ ಊಟ–ತಿಂಡಿ ಮಾಡಬಹುದು. ಆದರೆ ಮನೆಯಲ್ಲಿ ಅಮ್ಮ ಮಾಡಿದ ಉಪ್ಸಾರು, ಮುದ್ದೆ ರುಚಿಗೆ ಆ ಯಾವುದೇ ಲಕ್ಸುರಿ ಹೋಟೆಲ್‌ಗಳ ಊಟೋಪಚಾರ ಸರಿ ಸಾಟಿ ಆಗುವುದಿಲ್ಲ ಎಂದು ನ್ಯಾಯಮೂರ್ತಿ ಇಂದ್ರೇಶ್ ಅಭಿಪ್ರಾಯಪಟ್ಟರು.

ಮಗ ಎಷ್ಟೇ ತಪ್ಪು ಮಾಡಿದರೂ ತಾಯಿ ಕ್ಷಮಿಸುತ್ತಾಳೆ. ಮಗ ಎಷ್ಟೇ ಹಠ ಮಾಡಿದರೂ ಸಂಯಮ ಹಾಗೂ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಮನೆಯೊಳಗೆ ತಾಯಿ ತಾಳ್ಮೆ ಹಾಗೂ ಬದುಕಿನ ಪಾಠ ಹೇಳಿಕೊಟ್ಟರೆ, ತಂದೆ ಹೊರಗಿನ ಪ್ರಪಂಚದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುತ್ತಾನೆ. ಇಷ್ಟೊಂದು ಪ್ರೀತಿ, ವಿಶ್ವಾಸ ತೋರುವ ತಂದೆ–ತಾಯಿಯನ್ನು ಮಕ್ಕಳು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಪಂಚದಲ್ಲಿ ಒಳ್ಳೆಯವರೂ, ಕೆಟ್ಟವರೂ ಇರುತ್ತಾರೆ. ಆದರೆ ನಾವು ಒಳ್ಳೆತನ ರೂಢಿಸಿಕೊಳ್ಳಬೇಕು. ಹಿರಿಯರ ಮುಗ್ದತೆ, ಸರಳತೆ, ಪ್ರೀತಿ ವಿಶ್ವಾಸವನ್ನು ನಾವು ಅನುಸರಿಸಬೇಕು. ಮಾನವೀಯ ಗುಣವನ್ನು ಅಳವಡಿಸಿಕೊಳ್ಳಬೇಕು. ನಾವು ಪಡೆದಂತಹ ಜ್ಞಾನವನ್ನು ಪ್ರಪಂಚಕ್ಕೆ ಧಾರೆ ಎರೆಯಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಇಂದ್ರೇಶ್ ಕಿವಿಮಾತು ಹೇಳಿದರು.

ಇವರೊಂದಿಗೆ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಹಾಗೂ ಲಾ ಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಲೋಕೇಶ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಹಿರಿಯ ಆಡಳಿತ ಮಂಡಳಿ ಸದಸ್ಯ ಎಸ್.ಎಲ್. ರಾಮಚಂದ್ರ, ಗೌರವ ಕಾರ್ಯದರ್ಶಿ ಆರ್.ದಿನೇಶ್, ಪ್ರಿನ್ಸಿಪಾಲ್ ಮಹೇಶ್, ಡಾ.ದೇವಿಕಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

'ಲಾ ಗೈಡ್' ವೆಂಕಟೇಶ್‌ರಿಂದ ದತ್ತಿ ಬಹುಮಾನ ಘೋಷಣೆ

'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರು ತಾವು ವ್ಯಾಸಂಗ ಮಾಡಿದ ಶಾರದಾ ವಿಲಾಸ ಕಾನೂನು ಕಾಲೇಜಿಗೆ 1 ಲಕ್ಷ ರೂ.ಗಳ ದತ್ತಿ ಬಹುಮಾನ ಘೋಷಿಸಿದರು.

ಸಂವಿಧಾನ ತಜ್ಞ ಪ್ರೊಸಿಕ್ಯೂನ್ ರಾಜಾ ಹಾಗೂ ಹಿರಿಯ ವಕೀಲ ಕೆ.ಆರ್. ಸುಬ್ಬಕೃಷ್ಣ ಅವರ ಸ್ಮರಣಾರ್ಥ ಭಾರತ ಸಂವಿಧಾನ ವಿಷಯದಲ್ಲಿ ಹೆಚ್ಚು ಅಂಕ ಪಡೆದ ಕಾನೂನು ವಿದ್ಯಾರ್ಥಿಗೆ ಪ್ರತಿ ವರ್ಷ ನಗದು ಬಹುಮಾನ ಘೋಷಿಸಿದರು. ಇದಕ್ಕಾಗಿ ಒಂದು ಲಕ್ಷ ರೂ.ಗಳ ಚೆಕ್ ಅನ್ನು ಅಲ್ಲೇ ಆಡಳಿತ ಮಂಡಳಿಗೆ ನೀಡಿದರು.

ತರುವಾಯ ಮಾತನಾಡಿದ ವೆಂಕಟೇಶ್, ಇಲ್ಲಿ ಕಾನೂನು ಅಧ್ಯಯನ ಮಾಡಿದವರು ದೇಶದ ವಿವಿಧೆಡೆ ಉನ್ನತ ಸಾಂವಿಧಾನಿಕ ಹುದ್ದೆ ಅಲಂಕರಿಸಿ, ಸೇವೆ ಸಲ್ಲಿಸುತ್ತಿದ್ದಾರೆ. ಈ ಮೂಲಕ ದೇಶವನ್ನು ಮುನ್ನಡೆಸುತ್ತಿದ್ದು, ಕಾಲೇಜಿನ ಪರಂಪರೆ ಹೀಗೆ ಮುಂದುವರೆಯಲಿ ಎಂದು ಹಾರೈಸಿದರು.

ಶ್ರೀ ವಿದ್ಯಾರಣ್ಯ ಜಯಂತಿ...



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ವಿದ್ಯಾರಣ್ಯ ಕೋಚಿಂಗ್ ಸೆಂಟರ್‌ನಲ್ಲಿ ಶ್ರೀ ವಿದ್ಯಾರಣ್ಯ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುಗಪುರುಷ ಶ್ರೀ ವಿದ್ಯಾರಣ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವ ಸಮರ್ಪಿಸಲಾಯಿತು. ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ವಿಕ್ರಂ ಅಯ್ಯಂಗಾರ್, ವಿದ್ಯಾರಣ್ಯ ಟ್ರಸ್ಟ್ ಅಧ್ಯಕ್ಷ ಡಾ.ಜಿ ವಿ ರವಿಶಂಕರ್, ಶಿಕ್ಷಕರಾದ ಧನುಷ್, ಶ್ರೀವಿದ್ಯಾ, ಪುಷ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾವು ಎಲ್ಲಾ ಕ್ರಮ ಕೈಗೊಂಡಿದ್ದೇವೆ... ನೀವೂ ಎಚ್ಚರಿಕೆಯಿಂದ ಇರಿ...

ಮಳೆ–ಗಾಳಿ, ಸಿಡಿಲು–ಗುಡುಗು ವೇಳೆ ಎಚ್ಚರಿಕೆ ವಹಿಸಲು ಸಾರ್ವಜನಿಕರು, ರೈತರಿಗೆ ಸೆಸ್ಕ್ ಮುನ್ಸೂಚನೆ

ಮೈಸೂರು, ಮೇ 22(ಎಂಟಿವೈ)– ಮಳೆಗಾಲ ಸಮೀಪಿಸುತ್ತಿರುವುದರಿಂದ ವಿದ್ಯುತ್ ಅವಘಡ, ವಿದ್ಯುತ್ ಸರಬರಾಜಲ್ಲಿ ವ್ಯತ್ಯಯ ತಪ್ಪಿಸುವ ನಿಟ್ಟಿನಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಅಗತ್ಯ ಕ್ರಮ ಕೈಗೊಂಡಿದ್ದು, ಗ್ರಾಹಕರು ಮತ್ತು ಸಾರ್ವಜನಿಕರು ಸಹ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದೆ.

ಮಳೆಗಾಲದಲ್ಲಿ ವಿದ್ಯುತ್ ತಂತಿ ತುಂಡಾಗುವ ಹಾಗೂ ಗ್ರೌಂಡ್ ಆಗುವ ಸಾಧ್ಯತೆಗಳು ಇದೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ, ಅಪಾಯದ ಸಾಧ್ಯತೆ ಇದ್ದು, ಅವುಗಳನ್ನು ಸಮರ್ಪಕವಾಗಿ, ತುರ್ತಾಗಿ ನಿವಾರಿಸುವ ನಿಟ್ಟಿನಲ್ಲಿ ಸಿಬ್ಬಂದಿ ಸಜ್ಜಾಗಿದ್ದು, ಏನಾದರೂ ಅವಘಡಗಳು ಸಂಭವಿಸಿದರೆ ಕೂಡಲೇ ಸೆಸ್ಕ್ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

ಪೂರ್ವ ಮುಂಗಾರು ಮತ್ತು ಮುಂಗಾರು ಮಳೆಯಾಗಲಿ. ಗಾಳಿ ಮತ್ತು ಮಳೆಯಿಂದ ವಿದ್ಯುತ್ ಅವಘಡಗಳು ಸಂಭವಿಸುವ ಸಾಧ್ಯತೆ ಇದೆ. ಮಳೆ ಸಂಭವಿಸಬಹುದಾದ ಇಂತಹ ವಿದ್ಯುತ್ ವಿಪತ್ತುಗಳು, ಅಡಚಣೆಗಳು ಹಾಗೂ ಇತರೆ ತೊಂದರೆಗಳ ಬಗ್ಗೆ ಗ್ರಾಹಕರಲ್ಲಿ ಜಾಗೃತಿ ಮೂಡಿಸಬೇಕು. ಅಲ್ಲದೆ, ಸಾರ್ವಜನಿಕರ ಸುರಕ್ಷತೆ ಬಗ್ಗೆ ಹೆಚ್ಚಿನ ನಿಗಾ ವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಆದರೂ ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಸೆಸ್ಕ್ ಮನವಿ ಮಾಡಿದೆ.

ಕರೆ ಮಾಡಿ, ಮಾಹಿತಿ ನೀಡಿ: ವಿದ್ಯುತ್ ತಂತಿಗಳು ತುಂಡಾಗಿದ್ದರೆ, ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದರೆ, ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಸಮಸ್ಯೆಗಳು ಕಂಡು ಬಂದರೆ ಸಾರ್ವಜನಿಕರು ತುರ್ತಾಗಿ 24x7 ಸಹಾಯವಾಣಿ 1912 ಅಥವಾ ನಿಗಮದ ವಾಟ್ಸಾಪ್ ಸಂಖ್ಯೆ 9448991912 ಫೋಟೋ ಸಹಿತವಾಗಿ ಮಾಹಿತಿ ನೀಡುವುದು ಅಥವಾ ಸ್ಥಳೀಯ ಸೆಸ್ಕ್ ಅಧಿಕಾರಿಗಳು, ಸಿಬ್ಬಂದಿಗೆ ಮಾಹಿತಿ ನೀಡುವಂತೆ ಸೆಸ್ಕ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಎಚ್ಚರಿಕೆ ವಹಿಸಬೇಕಾದ ಸಂಗತಿ

- ರಸ್ತೆ ಬದಿಯಲ್ಲಿ ಅಥವಾ ಇತರೆಡೆ ತುಂಡಾಗಿ ಬಿದ್ದ ತಂತಿ ಮುಟ್ಟಬಾರದು.
- ಬಟ್ಟೆ ಒಣಗಿಸಲು ವಿದ್ಯುತ್ ಕಂಬಗಳು, ವೈಯರ್‌ಗಳನ್ನು ಬಳಸಬಾರದು.
- ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್‌ಗಳ ಸಮೀಪ ಜಾನುವಾರು ಕಟ್ಟಬಾರದು.
- ಮಳೆ, ಗಾಳಿ ಸಂದರ್ಭ ಟ್ರಾನ್ಸ್‌ಫಾರ್ಮರ್ ಸಮೀಪ ಹೋಗಿ ನಿಲ್ಲಬಾರದು.

ರೈತರಿಗೆ ಕೆಲವರು ಸುರಕ್ಷತಾ ಸಲಹೆಗಳಿವು...

- ಒದ್ದೆ ಕೈಗಳಿಂದ ಪಂಪ್‌ಸೆಟ್ ಆನ್ ಮಾಡಬಾರದು
- ಮಳೆ ಸಂದರ್ಭಗಳಲ್ಲಿ ವಿದ್ಯುತ್ ಉಪಕರಣಗಳನ್ನು ಆಫ್ ಮಾಡಬೇಕು.
- ಜಾನುವಾರುಗಳನ್ನು ವಿದ್ಯುತ್ ಕಂಬ ಇಲ್ಲವೆ ವೈರ್‌ಗಳಿಗೆ ಕಟ್ಟಬಾರದು.
- ಜಲಾವೃತ ಪ್ರದೇಶಗಳಲ್ಲಿ ವಿದ್ಯುತ್ ಉಪಕರಣಗಳೊಂದಿಗೆ ಕೆಲಸ ಮಾಡಬೇಡಿ.
- ಮಳೆ ಬರುತ್ತಿದ್ದಾಗ ಜಮೀನಿನಲ್ಲಿರುವ ವಿದ್ಯುತ್ ಕಂಬ ಅಥವಾ ಟ್ರಾನ್ಸ್‌ಫಾರ್ಮರ್‌ಗಳಿಂದ ದೂರವಿರಬೇಕು

ಜಿಲ್ಲಾವಾರು ಸಹಾಯವಾಣಿ ಸಂಖ್ಯೆ
ಮೈಸೂರು– 18005990062
ಚಾಮರಾಜನಗರ–18005990063
ಮಂಡ್ಯ– 18005990066
ಕೊಡಗು– 18005990061
ಹಾಸನ– 18005990065

ದಲಿತ ಸಮುದಾಯದ ಬೀದಿಯಲ್ಲಿ ಉತ್ಸವ

ಮೈಸೂರು,ಮೇ 22(ಪಿಎಂ)– ಕೆ.ಆರ್. ನಗರ ತಾಲೂಕು ಮಾರ್ಚಳ್ಳಿ ಗ್ರಾಮದ ಮಹದೇಶ್ವರಸ್ವಾಮಿಯ ಉತ್ಸವ ಗ್ರಾಮದ ದಲಿತ ಸಮುದಾಯದ ಬೀದಿಯಲ್ಲೂ ಸಾಗಲು ಅವಕಾಶ ಕಲ್ಪಿಸಿರುವ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್‌ಗೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಭಿನಂದನೆ ಸಲ್ಲಿಸಿದ್ದಾರೆ.

ಉತ್ಸವ ಸಂಬಂಧ ದಲಿತ ಸಮುದಾಯ ಸೇರಿದಂತೆ ಗ್ರಾಮದ ಎಲ್ಲಾ ಸಮುದಾಯದವರು ಚಂದ ನೀಡಿದರೂ ದಲಿತ ಸಮುದಾಯದ ಬೀದಿಗೆ ಮಾತ್ರ ಉತ್ಸವಕ್ಕೆ ಅವಕಾಶ ಇರದ ಬಗ್ಗೆ ದಲಿತ ಸಮುದಾಯದವರು ಪ್ರತಿಭಟನೆ ವ್ಯಕ್ತಪಡಿಸಿದಾಗ, ಜಿಲ್ಲಾಡಳಿತ ಡಿವೈಎಸ್‌ಪಿ ರಾಜು ಅವರನ್ನು ಕಳುಹಿಸಿ ಎರಡು ಸಮುದಾಯದವರ ಜೊತೆ ಚರ್ಚಿಸಿ ಮನವೊಲಿಸಿ ದಲಿತರು ವಾಸಿಸುವ ಬೀದಿಯಲ್ಲಿ ಉತ್ಸವ ಮಾಡಿಸಿದ್ದಾರೆ. ಆದರೆ ಇದು ಮತ್ತೆ ಮರುಕಳಿಸಬಾರದು. ಎಲ್ಲಾ ಜಾತಿ ಜನಾಂಗದವರು ಸೇರಿ ಒಟ್ಟಾಗಿ ಆಚರಣೆ ಮಾಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಇಡೀ ಜಿಲ್ಲಾದ್ಯಂತ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.



ಎನ್.ಭಾಸ್ಕರ್

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 22– ಮೈಸೂರಿನ ಶ್ರೀ ಕೃಷ್ಣ ಮಿತ್ರ ಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್ ಮೈಸೂರು ನಗರದ ಪ್ರತಿಭಾವಂತ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. 2025–26ನೇ ಸಾಲಿನ ಶೈಕ್ಷಣಿಕ ವರ್ಷದ ರಾಜ್ಯ ಪಠ್ಯಕ್ರಮ ಆಧಾರಿತವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 96ಕ್ಕಿಂತ ಹೆಚ್ಚು ಅಂಕ ಹಾಗೂ ಕೇಂದ್ರ ಪಠ್ಯಕ್ರಮದಲ್ಲಿ 95ಕ್ಕಿಂತಲೂ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೇ 30ರ ಸಂಜೆ 5 ಗಂಟೆ ಒಳಗೆ ಅರ್ಜಿ ಜೊತೆಯಲ್ಲಿ ಮಾರ್ಕ್ಸ್ ಕಾರ್ಡ್ ಜೆರಾಕ್ಸ್, ಆಧಾರ್ ಕಾರ್ಡ್ ಜೆರಾಕ್ಸ್, ಒಂದು ಭಾವಚಿತ್ರ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಶ್ರೀ ಕೃಷ್ಣಧಾಮ (0821–2544004) ಸಂಪರ್ಕಿಸಬಹುದು.


ಕಂಜನ್ ದಸರಾದಿಂದ ಹೊರಗಿಡಬೇಡಿ...

ದುಬಾರೆ ಶಿಬಿರದ ಮಾವುತರು, ಕಾವಾಡಿಗಳ ವಿಷಾದದ ನುಡಿ

ಮೈಸೂರು, ಮೇ 22(ಎಂಟಿವೈ)– ದಸರಾ ಮಹೋತ್ಸವ ಮಾತ್ರವಲ್ಲದೆ ಕಾಡಾನೆ, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಅರಣ್ಯ ಇಲಾಖೆಗೆ ತನ್ನದೆ ಆದ ಕೊಡುಗೆ ನೀಡಿರುವ ಕಂಜನ್ ಆನೆಯನ್ನು ಖಳನಾಯಕನಂತೆ ಬಿಂಬಿಸದಂತೆ ಮಾವುತರು, ಕಾವಾಡಿಗಳು ಆಗ್ರಹಿಸಿದ್ದು, ಆಕಸ್ಮಿಕ ಘಟನೆಯಿಂದ ಆದ ಪ್ರವಾಸಿ ಮಹಿಳೆ ಹಾಗೂ ಮತ್ತೊಂದು ಆನೆ ಸಾವಿನಿಂದ ನಮಗೂ ನೋವಾಗಿದೆ ಎಂದು ದುಬಾರೆ ಕ್ಯಾಂಪ್ ಮಾವುತರು ವಿಷಾದಿಸಿದ್ದಾರೆ.

ದೇಶದಲ್ಲಿಯೇ ಸಾಕಾನೆಗಳನ್ನು ಅತ್ಯಂತ ಪ್ರೀತಿಯಿಂದ ಪಾಲನೆ ಮಾಡುವುದು ಕರ್ನಾಟಕದಲ್ಲಿಯೇ. ಇದುವರೆಗೂ ಬೆರಳೆಣಿಕೆಯ ಸಣ್ಣಪುಟ್ಟ ಘಟನೆಗಳು ಮಾತ್ರ ನಡೆದಿರುವುದು ಬಿಟ್ಟರೆ, ದೊಡ್ಡ ಪ್ರಮಾಣದ ದಾಳಿ, ಘರ್ಷಣೆಯಾಗಿಲ್ಲ. ಮೇ 18ರಂದು ನಡೆದ ಘಟನೆಗೆ ನಮ್ಮ ವಿಷಾದವಿದೆ. ಪ್ರವಾಸಿ ಮಹಿಳೆ ಮೃತಪಟ್ಟಿರುವುದು ನೋವುಂಟು ಮಾಡಿದೆ. ದಾಳಿಯಲ್ಲಿ ಗಾಯಗೊಂಡಿದ್ದ ಜಯಮಾರ್ತಾಂಡ ಆನೆಯನ್ನೂ ಉಳಿಸಿಕೊಳ್ಳಲಾಗಲಿಲ್ಲ ಎಂಬ ನೋವೂ ಇದೆ. ಇದೊಂದು ಆಕಸ್ಮಿಕ ಘಟನೆ. ಕ್ಯಾಂಪ್‌ನಲ್ಲಿರುವ ಎಲ್ಲಾ ಆನೆಗಳು ನಮ್ಮ ಬಳಗವಿದ್ದಂತೆ. ಕಂಜನ್ ಆನೆಗೂ ವಿಷಾಧವಿದೆ ಎಂದು ಮಾವುತರು ತಿಳಿಸಿದ್ದಾರೆ.

ದಾಳಿಯನ್ನು ಮುಂದಿಟ್ಟುಕೊಂಡು ಕಂಜನ್ ಆನೆಯನ್ನು ಖಳನಾಯಕನಂತೆ ಬಿಂಬಿಸಬಾರದು. ದಾಳಿ ಮಾಡಿದ ಮಾತ್ರಕ್ಕೆ ದಸರಾ ಮಹೋತ್ಸವದಿಂದ ಕೈಬಿಡುವಂತೆ ಕೆಲವರು ಆಗ್ರಹಿಸಿರುವುದು ಸರಿಯಲ್ಲ. ತಪ್ಪು ಮರುಕಳಿಸದಂತೆ ಎಲ್ಲಾ ಆನೆಗಳ ಮಾವುತರು, ಕಾವಾಡಿಗಳು ನೋಡಿಕೊಳ್ಳುತ್ತಾರೆ. ಕೇರಳದಲ್ಲಿ ಧಾರ್ಮಿಕ ಕಾರ್ಯದ ಮೆರವಣಿಗೆ ವೇಳೆ ಪ್ರತಿ ವರ್ಷವೂ ಆನೆ ದಾಳಿ ನಡೆಯುತ್ತವೆ. ಆದರೆ, ಅಲ್ಲಿ ಆನೆಗಳನ್ನು ಮೆರವಣಿಗೆಯಿಂದ ನಿಷೇಧಿಸಿ ಎಂದು ಯಾರೂ ಹೇಳುವುದಿಲ್ಲ. ಕಂಜನ್ ಆನೆ ಇದುವರೆಗೂ ಅರಣ್ಯ ಇಲಾಖೆಗೆ ಸಲ್ಲಿಸಿದ ಸೇವೆಯನ್ನು ಮನಗಾಣದೆ ಇದೀಗ ಒಂದು ಘಟನೆಯನ್ನು ಮುಂದಿಟ್ಟುಕೊಂಡು ಕೆಲವರು ಟೀಕೆ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಕಂಜನ್ ಆನೆ ದಸರಾ ಮಹೋತ್ಸವಕ್ಕೆ ಆಗಮಿಸಿ, ಪಟ್ಟದ ಆನೆಯಾಗಿ 3 ಬಾರಿ ಪಾಲ್ಗೊಂಡಿರುವ ಅನುಭವ ಇದೆ. ತಾಲೀಮು ವೇಳೆ ಮರದ ಅಂಬಾರಿಯನ್ನು ಹೊತ್ತು ಸಾಗಿದೆ. ಇದೀಗ ಆನೆ ಬಗ್ಗೆ ಅಪಸ್ವರ ಎತ್ತುವುದು ಸರಿಯಲ್ಲ ಎಂದು ಪ್ರತಿಪಾದಿಸಿದ್ದಾರೆ.



ನಾಳೆ ರೋಮಾಂಚಕ ಕುಸ್ತಿ ಪಂದ್ಯಾವಳಿ

ಮೈಸೂರು, ಮೇ 22(ಜಿಎ)–ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವದ ವತಿಯಿಂದ ಮೇ 24ರಂದು ಮಧ್ಯಾಹ್ನ 1ಗಂಟೆಯಿಂದ ರಾತ್ರಿ 10ರವರೆಗೆ ನಗರದ ವಸ್ತು ಪ್ರದರ್ಶನ ಬಳಿಯ ಡಿ. ದೇವ ರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ರೋಮಾಂಚಕ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಅರುಣ್‌ಕುಮಾರ್ ಈ ವಿಷಯ ತಿಳಿಸಿ, ಸುಮಾರು 35 ಜೋಡಿಗಳು ಪಾಲ್ಗೊಳ್ಳುವ ಈ ಪಂದ್ಯಾವಳಿ ಮಣ್ಣಿನ ಮಟ್ಟಿಯಲ್ಲಿ ನಡೆಯಲಿದೆ. ದೇಶದ ನಂಬರ್ ಒನ್ ಕುಸ್ತಿಪಟು ಎನಿಸಿರುವ ಮಹೇಂದ್ರ ಗಾಯಕ್ವಾಡ್, ನೇಪಾಳದ ದೇವದೂತ ಸಹ ಪಾಲ್ಗೊಳ್ಳಲಿದ್ದಾರೆ ಎಂದರು.

ಇಲ್ಲಿ ಬಹುಮಾನವಿಲ್ಲ. ಆದರೆ ಪಾಲ್ಗೊಳ್ಳುವ ಕುಸ್ತಿ ಪಟುಗಳಿಗೆ ನಿಗದಿತ ನಗದು, ಪ್ರಯಾಣ ವೆಚ್ಚ ನೀಡಲಾಗುತ್ತದೆ. ರಾಜ್ಯದ ಬೆಳಗಾವಿ, ಧಾರವಾಡ, ದಾವಣಗೆರೆ, ಬೆಂಗಳೂರು, ಮೈಸೂರುಗಳಿಂದಲೂ ಖ್ಯಾತ ಕುಸ್ತಿ ಪಟುಗಳು ಆಗಮಿಸಿ ಭಾಗ ವಹಿಸಲಿದ್ದಾರೆ. ಎರಡು ಜೊತೆ ಮಾರ್ಫಿಟ್ ಕುಸ್ತಿ ಪಂದ್ಯಗಳು ಸಹ ಇರಲಿವೆ ಎಂದರು. ಈ ವೇಳೆ ಸುದ್ದಿಗೋಷ್ಠಿಯಲ್ಲಿ ಚಾಮರಾಜು ಮಂಡಕಳ್ಳಿ, ಶ್ರೀಧರ್ ನಾಯಕ್, ಮಂಚನಾಯಕ್, ಪೈಲ್ವಾನ್ ರಾಜಣ್ಣ, ಪೈಲ್ವಾನ್ ವೆಂಕಟೇಶ್, ಪೈಲ್ವಾನ್ ಗಿರೀಶ್ ಉಪಸ್ಥಿತರಿದ್ದರು.



ಪಿಹೆಚ್‌ಡಿ ಪದವಿ

ಮೈಸೂರು: ಮೈಸೂರಿನ ವಾಣಿ ಕ್ರಿಸ್ಟೋಫರ್ ಅವರು, ಪ್ರೊ.ಸಕ್ಪಾಲ್ ಹೂವಣ್ಣ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಪ್ರಬಂಧಕ್ಕೆ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದಾರೆ.



ದೇಶ - ವಿದೇಶ

ಮೌಂಟ್ ಎವರೆಸ್ಟ್ ಇಳಿಯುವಾಗ ಇಬ್ಬರು ಭಾರತೀಯರು ಸಾವು

ಕಠ್ಮಂಡು: ವಿಶ್ವದ ಅತಿ ಎತ್ತರದ ಶಿಖರವಾದ ಮೌಂಟ್ ಎವರೆಸ್ಟ್ ಏರಿದ ಇಬ್ಬರು ಭಾರತೀಯ ಪರ್ವತಾರೋಹಿಗಳು ಇಳಿಯುವ ವೇಳೆ ಮೃತಪಟ್ಟಿದ್ದಾರೆ.



ಸಾವನ್ನಪ್ಪಿದ ಪರ್ವತಾರೋಹಿಗಳನ್ನು ಅರುಣ್‌ಕುಮಾರ್ ತಿವಾರಿ ಮತ್ತು ಸಂದೀಪ್ ಅರೆ ಎಂದು ಗುರುತಿಸಲಾಗಿದೆ. ಸಂದೀಪ್ ಅರೆ ಬುಧವಾರ ಹಾಗೂ ಅರುಣ್‌ಕುಮಾರ್ ತಿವಾರಿ ಗುರುವಾರ ಸಂಜೆ ಎವರೆಸ್ಟ್ ಶಿಖರ ತಲುಪಿದ್ದರು. ಆದರೆ ಶಿಖರದಿಂದ ಕೆಳಗಿಳಿಯುವ ವೇಳೆ ಇಬ್ಬರೂ ಸಾವನ್ನಪ್ಪಿದ್ದಾರೆ. ಅವರ ರಕ್ಷಣೆಗೆ ಮಾರ್ಗದರ್ಶಕರು ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಬ್ಬರು ಕ್ಯಾಂಪ್–2ರಲ್ಲಿ, ಮತ್ತೊಬ್ಬರು ಡೆತ್ ಜೋನ್ ಎನ್ನಲಾಗುವ ಹಿಲರಿ ಸ್ಟೆಪ್ ಬಳಿ ಸಾವನ್ನಪ್ಪಿದ್ದಾರೆ. ಎವರೆಸ್ಟ್ ಏರಿಕೆ ವೇಳೆ ಹವಾಮಾನ ವೈಪರೀತ್ಯ, ಕಡಿಮೆ ಆಮ್ಲಜನಕ ಮತ್ತು ತೀವ್ರ ಹಿಮಪಾತದಂತಹ ಅಪಾಯಗಳು ಪರ್ವತಾರೋಹಿಗಳಿಗೆ ದೊಡ್ಡ ಸವಾಲಾಗಿವೆ. ಕಳೆದ ವರ್ಷವೂ ಚೀನಾ ಭಾಗದಲ್ಲಿ ಹಿಮಪಾತದ ಕಾರಣ ಅಪಾಯದಲ್ಲಿ ಸಿಲುಕಿದ್ದ ಸುಮಾರು 900 ಮಂದಿಯನ್ನು ರಕ್ಷಿಸಲಾಗಿತ್ತು.

ನರೇಂದ್ರ ಮೋದಿಗೆ ಜಲ್ಮುರಿ ನೀಡಿದ್ದ ವ್ಯಾಪಾರಿಗೆ ನಿರಂತರ ಬೆದರಿಕೆ ಕರೆ!

ಕೋಲ್ಕತ್ತಾ: ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜನಪ್ರಿಯ ಬಂಗಾಳಿ ತಿನಿಸು ನೀಡಿ ಗಮನ ಸೆಳೆದಿದ್ದ ಪಶ್ಚಿಮ ಬಂಗಾಳದ ಜಲ್ಮುರಿ ಮಾರಾಟಗಾರನಿಗೆ ಪಾಕಿಸ್ತಾನ ಮತ್ತು ಬಾಂಗ್ಲಾದೇಶದಿಂದ ಬೆದರಿಕೆ ಕರೆಗಳು ಬರುತ್ತಿವೆ ಎನ್ನಲಾಗಿದೆ. ಜಲ್ಮುರಿ ಮಾರಾಟಗಾರ ಬಿಕ್ರಮ್ ಸೌ, ಕಳೆದ ಕೆಲವು ದಿನಗಳಿಂದ ಕೊಲೆ ಮಾಡುವುದಾಗಿ ಪದೇ ಪದೆ ಫೋನ್ ಮತ್ತು ವೀಡಿಯೊ ಕರೆಗಳ ಮೂಲಕ ಬೆದರಿಕೆ ಹಾಕಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಬೆದರಿಕೆ ಕರೆಗಳು ನನ್ನನ್ನು ಮತ್ತು ಕುಟುಂಬದವರನ್ನು ತೀವ್ರ ಚಿಂತೆಗೀಡು ಮಾಡಿದ್ದು, ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿದೆ. ಕೆಲವರು ಕರೆ ಮಾಡಿ ಬಾಂಬ್ ಇಟ್ಟು ಸ್ಫೋಟಿಸುವುದಾಗಿ, ಇನ್ನೂ ಕೆಲವರು ನಿಂದನೀಯ ಮತ್ತು ಅಸಭ್ಯ ಪದಗಳನ್ನು ಬಳಸಿ ಬೆದರಿಸುತ್ತಿದ್ದಾರೆ ಎಂದು ದೂರಿದ್ದಾರೆ.

ಏ.19ರಂದು ಪಶ್ಚಿಮ ಬಂಗಾಳ ಚುನಾವಣಾ ಪ್ರಚಾರದ ಸಮಯದಲ್ಲಿ ಮೋದಿ, ಜಾರ್ಗ್ರಾಮ್‌ನಲ್ಲಿರುವ ರಸ್ತೆ ಬದಿಯ ಜಲ್ಮುರಿ ಅಂಗಡಿಯಲ್ಲಿ ಸ್ಥಳೀಯ ತಿನಿಸನ್ನು ಸವಿದಿದ್ದರು. ಮೋದಿಗೆ ಜಲ್ಮುರಿ ನೀಡಿದ್ದ ವ್ಯಾಪಾರಿ ಸೋಷಿಯಲ್ ಮೀಡಿಯಾದಲ್ಲಿ ಜನಪ್ರಿಯರಾದರು. ಅಂಗಡಿಗೆ ಬರುವ ಗ್ರಾಹಕರ ಸಂಖ್ಯೆಯಲ್ಲಿ ಹೆಚ್ಚಾಗುತ್ತಿದೆ ಎನ್ನಲಾಗಿದೆ.



ಸಿಬಿಎಸ್‌ಇ ತ್ರಿಭಾಷಾ ನಿಯಮ ವಿರುದ್ಧದ ಅರ್ಜಿ ಆಲಿಸಲು ಸುಪ್ರೀಂ ಸಮ್ಮತಿ

ನವದೆಹಲಿ: 9ನೇ ತರಗತಿ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳ ಅಧ್ಯಯನ ಕಡ್ಡಾಯವಾಗಿದ್ದು, ಅದರಲ್ಲಿ ಎರಡು ಭಾರತೀಯ ಭಾಷೆಗಳಿರಬೇಕು ಎಂಬ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ನೀತಿ ಪ್ರಶ್ನಿಸುವ ಅರ್ಜಿಯನ್ನು ಮುಂದಿನ ವಾರ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಸಮ್ಮತಿಸಿದೆ. ಸಿಜೆಐ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಭಾಗ್ಚಿ ಹಾಗೂ ವಿಪುಲ್ ಎಂ.ಪಂಚೋಲಿ ಅವರಿದ್ದ ಪೀಠದ ಮುಂದೆ ಹಿರಿಯ ವಕೀಲ ಮುಕುಲ್ ರೋಹ್ಟಗಿ ಅವರು ಈ ವಿಚಾರ ಮಂಡಿಸಿ, ಇದು ತುರ್ತು ಪಿಐಎಲ್, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಅರ್ಜಿದಾರರಾಗಿದ್ದಾರೆ ಎಂದು ಗಮನಸೆಳೆದರು. ಸಿಬಿಎಸ್‌ಇಯ ಹೊಸ ನೀತಿಯಾಗಿರುವ 9ನೇ ತರಗತಿಗೆ ಮತ್ತೆರಡು ಭಾಷೆಗಳು ಕಡ್ಡಾಯವೆಂಬ ಹೊಸ ನೀತಿಯು ಗೊಂದಲ ಸೃಷ್ಟಿಸಿರುವುದರಿಂದ ಅರ್ಜಿಯ ತ್ವರಿತ ವಿಚಾರಣೆಗೆ ಪೀಠ ಮುಂದಾಗಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ, ಮುಂದಿನ ವಾರ ಈ ವಿಷಯವನ್ನು ಪಟ್ಟಿ ಮಾಡಲಾಗುವುದು. ಪರಿಷ್ಕೃತ ನಿಯಮದಡಿ 9ನೇ ತರಗತಿಯಿಂದ ವಿದ್ಯಾರ್ಥಿಗಳು 3 ಭಾಷೆಗಳನ್ನು ಕಡ್ಡಾಯವಾಗಿ ಕಲಿಯಬೇಕಿದ್ದು, ಅವುಗಳಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಾಗಿರಬೇಕು ಎಂಬ ಹೊಸ ವ್ಯವಸ್ಥೆ 2026ರ ಜುಲೈ 1ರಿಂದ ಜಾರಿಗೆ ಬರಲಿದೆ.



ಮಧ್ಯ ಅಮೆರಿಕದಲ್ಲಿ ಎರಡು ಪ್ರತ್ಯೇಕ ದಾಳಿ; 25ಕ್ಕೂ ಹೆಚ್ಚು ಮಂದಿ ಸಾವು

ವಾಷಿಂಗ್ಟನ್: ಅಂತಾರಾಷ್ಟ್ರೀಯ ಮಾದಕವಸ್ತು ಜಾಲ ಹಾಗೂ ಗ್ಯಾಂಗ್ ವಾರ್‌ಗಳಿಂದ ಸದಾ ಸುದ್ದಿಯಲ್ಲಿರುವ ಮಧ್ಯ ಅಮೆರಿಕಾದ ಹೊಂಡುರಾಸ್ ಕರಾವಳಿ ಪ್ರದೇಶದಲ್ಲಿ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದು, ಎರಡು ಪ್ರತ್ಯೇಕ ಘಟನೆಯಲ್ಲಿ 6 ಮಂದಿ ಪೊಲೀಸರು ಸೇರಿ 25ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಹಕ್ಕುಗಳಿಗಾಗಿ ದಶಕಗಳಿಂದ ಸಂಘರ್ಷ ನಡೆಯುತ್ತಿರುವ ಈ ಪ್ರದೇಶದಲ್ಲಿ, ಬಂದೂಕುಧಾರಿಗಳು ಏಕಾಏಕಿ ನುಗ್ಗಿ ಕನಿಷ್ಠ 19 ಕಾರ್ಮಿಕರನ್ನು ಅತ್ಯಂತ ಕ್ರೂರವಾಗಿ ಗುಂಡಿಕ್ಕಿ ಕೊಂದಿದ್ದಾರೆ. 2024ರಲ್ಲೂ ಇಲ್ಲಿ ಪ್ರಮುಖ ಪರಿಸರ ನಾಯಕ ಜುವಾನ್ ಲೋಪೆಜ್ ಎಂಬುವವರನ್ನು ಹತ್ಯೆ ಮಾಡಲಾಗಿತ್ತು. ಇದರ ಬೆನ್ನಲ್ಲೇ ಗ್ವಾಟೆಮಾಲಾ ಗಡಿಯ ಸಮೀಪವಿರುವ ಓಮೋವಾದಲ್ಲಿ ಎರಡನೇ ಭೀಕರ ದಾಳಿ ನಡೆದಿದ್ದು, ಗ್ಯಾಂಗ್ ವಿರೋಧಿ ವಿಶೇಷ ಕಾರ್ಯಾಚರಣೆಗೆ ನಿಯೋಜನೆಗೊಂಡಿದ್ದ ಪೊಲೀಸರ ವಾಹನದ ಮೇಲೆ ಗುಂಡಿನ ಮಳೆಗರೆದಿದ್ದಾರೆ. ಈ ಭೀಕರ ದಾಳಿಯಲ್ಲಿ ಒಬ್ಬ ಹಿರಿಯ ಅಧಿಕಾರಿ ಸೇರಿದಂತೆ ಆರು ಜನ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.



ಹೈವೇಗೆ ಸಿಸಿ ಕ್ಯಾಮರಾ ಅಳವಡಿಸಿ ಬೇಹುಗಾರಿಕೆ ನಡೆಸುತ್ತಿದ್ದ ವ್ಯಕ್ತಿ ಬಂಧನ

ಪಠಾಣ್‌ಕೋಟ್: ಪಂಜಾಬ್ ಹೈ ವೇಗೆ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಸೇನೆ ಮತ್ತು ಅರೆಸೇನಾ ಪಡೆಗಳ ಚಲನವಲನಗಳನ್ನು ಪಾಕಿಸ್ತಾನ ಮೂಲದ ಹ್ಯಾಂಡ್ಲರ್‌ಗಳಿಗೆ ತಲುಪಿಸುವ ಮೂಲಕ ಬೇಹುಗಾರಿಕೆ ನಡೆಸುತ್ತಿದ್ದ ವ್ಯಕ್ತಿಯನ್ನು ಪಂಜಾಬ್‌ನ ಪಠಾಣ್‌ಕೋಟ್ ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು ಪಠಾಣ್‌ಕೋಟ್ ಜಿಲ್ಲೆಯ ಚಕ್ ಧಾರಿವಾಲ್ ಗ್ರಾಮದ ನಿವಾಸಿ ಬಲ್ಜಿತ್ ಸಿಂಗ್ ಅಲಿಯಾಸ್ ಭಿಟ್ಟು ಎಂದು ಗುರುತಿಸಲಾಗಿದೆ. ಈತ ಸೇನೆ ಮತ್ತು ಅರೆಸೈನಿಕ ಪಡೆಗಳ ಚಲನವಲನಗಳ ಮೇಲೆ ಕಣ್ಣಿಡಲು ಪಂಜಾಬ್‌ನ ರಾಷ್ಟ್ರೀಯ ಹೆದ್ದಾರಿ–44ರ ಪಠಾಣ್‌ಕೋಟ್–ಜಮ್ಮು ಪ್ರದೇಶದ ಸೇತುವೆ ಬಳಿಯ ಅಂಗಡಿಯೊಂದರಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿದ್ದ. ಇಲ್ಲಿನ ಚಲನವಲನಗಳನ್ನು ಸೆರೆ ಹಿಡಿದು ಪಾಕಿಸ್ತಾನದ ಹ್ಯಾಂಡ್ಲರ್‌ಗಳಿಗೆ ಸೂಕ್ಷ್ಮ ಮಾಹಿತಿಯನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ರವಾನಿಸುತ್ತಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿ ದಲ್ಜಿಂದರ್ ಸಿಂಗ್ ತಿಳಿಸಿದ್ದಾರೆ. ದುಬೈನಲ್ಲಿರುವ ಅಪರಿಚಿತ ವ್ಯಕ್ತಿ ನಿರ್ದೇಶನಗಳಂತೆ ಹೀಗೆ ಮಾಡಿದ್ದು, 40 ಸಾವಿರ ರೂ. ಹಣ ನೀಡಿದ್ದಾಗಿ ವಿಚಾರಣೆ ವೇಳೆ ತಿಳಿಸಿದ್ದಾನೆ.



ಕೊಡಗು ಅಭಿವೃದ್ಧಿ ಸಮಿತಿ ಗ್ರೂಪ್‌ನ ಅಡ್ಮಿನ್ ವಿರುದ್ಧ ಕ್ರಮಕ್ಕೆ ನಗರಸಭಾ ಸದಸ್ಯರ ಆಗ್ರಹ

ಮಡಿಕೇರಿ, ಮೇ 22–ನಗರಸಭಾ ಸದಸ್ಯರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅವಹೇಳನಕಾರಿ ವರದಿಗಳನ್ನು ಸತ್ಯ ಎಂಬಂತೆ ಬಿಂಬಿಸಿ ಜನರಲ್ಲಿ ತಪ್ಪು ಸಂದೇಶ ಮೂಡಿಸುತ್ತಿರುವ 'ಕೊಡಗು ಅಭಿವೃದ್ಧಿ ಸಮಿತಿ' ಗ್ರೂಪ್‌ನ ಅಡ್ಮಿನ್ ಪ್ರಸನ್ನ ಭಟ್ ವಿರುದ್ಧ ಕ್ರಮ ಕೈಗೊಳ್ಳುವಂತೆ ನಗರ ಸಭಾ ಸರ್ವಪಕ್ಷಗಳ ಸದಸ್ಯರು ಎಸ್.ಪಿ ಬಿಂದುಮಣಿಗೆ ದೂರು ಸಲ್ಲಿಸಿದ್ದಾರೆ.



ಅಡ್ಮಿನ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ನಗರ ಸಭೆ ಸರ್ವ ಪಕ್ಷ ಸದಸ್ಯರು ಎಸ್.ಪಿ. ಬಿಂದುಮಣಿಗೆ ದೂರು ಸಲ್ಲಿಸಿದರು.

ನಗರಸಭಾ ಸದಸ್ಯರ ಅಧ್ಯಯನ ಪ್ರವಾಸವನ್ನು, ಮೋಜು ಮಸ್ತಿಯ ಪ್ರವಾಸ ಎಂಬಂತೆ ಸಾರ್ವಜನಿಕವಾಗಿ ಜನ ಪ್ರತಿನಿಧಿಗಳನ್ನು ನಿಂದಿಸಲಾಗುತ್ತಿದೆ. ಸ್ವಂತ ಜೀಪ್‌ಗೆ ಕೊಡಗು ಅಭಿವೃದ್ಧಿ ಸಮಿತಿ ಎಂಬ ಬೋರ್ಡ್‌ನ್ನು ಅಳವಡಿಸಿಕೊಂಡಿರುವುದಲ್ಲದೇ, ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಮಧ್ಯೆ ನಿಂತು ಸ್ವತಃ ಟ್ರಾಫಿಕ್ ಕಂಟ್ರೋಲ್ ಮಾಡುವ ಸೋಗಿನಲ್ಲಿ ಸ್ಥಳೀಯ ವಾಹನ ಸವಾರರಿಗೆ ತೊಂದರೆ ನೀಡಲಾಗುತ್ತಿದೆ.ತನ್ನ ಜೀಪ್ ಅನ್ನು ವಾಹನ ನಿಲುಗಡೆ ನಿಷೇಧವಿರುವ ಸ್ಥಳದಲ್ಲಿ ನಿಲ್ಲಿಸಿದ್ದು, ಇದನ್ನು ವಿಚಾರಿಸಿದ ಸ್ಥಳೀಯ ಯುವಕರೊಂದಿಗೆ ಅನಾವಶ್ಯಕ ಜಗಳವಾಡಿ, ಸಾರ್ವಜನಿಕವಾಗಿ ಶಾಂತಿಭಂಗ ಮಾಡಿರುವುದು ಸೇರಿದಂತೆ ಹಲವು ವಿಚಾರಗಳನ್ನು ಎಸ್.ಪಿ, ಡಿವೈಎಸ್‌ಪಿ ಬಳಿ ವಿವರಿಸಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ದೂರುದಾರರು ಒತ್ತಾಯಿಸಿದರು

ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ರಾಜೇಶ್ ಯಲ್ಲಪ್ಪ, ಎಸ್.ಸಿ. ಸತೀಶ್. ಅರುಣ್ ಶೆಟ್ಟಿ, ಅಪ್ಪಣ್ಣ, ಶಾರದಾ ನಾಗರಾಜ್, ನಗರಸಭಾ ಮಾಜಿ ಅಧ್ಯಕ್ಷ ಅನಿತಾ ಪೂವಯ್ಯ, ಜುಲೇಕಾವಿ, ಸದಸ್ಯರಾದ ಕೆ.ಎಸ್.ರಮೇಶ್, ಶ್ವೇತಾ ಪ್ರಶಾಂತ್, ಸಬಿತಾ, ಚಂದ್ರಶೇಖರ್, ಮುದ್ದುರಾಜ್, ಸದಾ ಮುದ್ದಪ್ಪ, ಜಿ.ಸಿ. ಜಗದೀಶ್ ಹಾಜರಿದ್ದರು.

ಶುಚಿತ್ವ ಕಾಪಾಡದ ಇಂದಿರಾ ಕ್ಯಾಂಟೀನ್‌ಗೆ ಬೀಗ ಹಾಕಿಸಿದ ಕರವೇ ಕಾರ್ಯಕರ್ತರು





ಕಲ್ಮಶಗೊಂಡಿರುವ ಕಾದ ಎಣ್ಣೆಯನ್ನು ಪೊಲೀಸರಿಗೆ ಕರವೇ ಕಾರ್ಯಕರ್ತರೊಬ್ಬರು ತೋರಿಸುತ್ತಿರುವುದು (ಎಡ ಚಿತ್ರ) ಆರೋಗ್ಯ ಅಧಿಕಾರಿ ಕೋಮಲ ಕ್ಯಾಂಟೀನ್‌ಗೆ ಬೀಗ ಮುದ್ರೆ ಹಾಕುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು

ವಿರಾಜಪೇಟೆ: ಕರವೇ ಕಾರ್ಯಕರ್ತರು ಪಟ್ಟಣದ ಇಂದಿರಾ ಕ್ಯಾಂಟೀನ್'ನಲ್ಲಿ ಸ್ವಚ್ಛತೆ ಪಾಲಿಸದಿರುವುದಕ್ಕೆ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ಕುಡಿಯುವ ನೀರಿನ ಟ್ಯಾಂಕ್ ಅಶುಚಿತ್ವದಿಂದ ಕೂಡಿದೆ. ಊಟದ ತಟ್ಟೆಗಳು ಗಲೀಜಿನಿಂದ ಕೂಡಿದ್ದು, ಅಡುಗೆ ಕೋಣೆಯ ಫ್ರಿಡ್ಜ್‌ನಲ್ಲಿ ಕೊಳೆತ ಮೊಟ್ಟೆ ಮತ್ತು ಆಹಾರ ಪದಾರ್ಥಗಳು ಇದ್ದವು ತಿಂಡಿ ತಿನಿಸುಗಳನ್ನು ತೆರೆದಿಟ್ಟ ಕಾರಣ ನೊಣಗಳು ಮುತ್ತಿದ್ದವು ಎಂದು ಪ್ರತಿಭಟನಾಕಾರರು ಆರೋಪಿಸಿದರು. ಇಂಥ ಅಶುಚಿತ್ವದಿಂದ ಕೂಡಿದ ಆಹಾರಗಳನ್ನು ತಿಂದರೆ ಕಾಯಿಲೆಗಳು ಬರುತ್ತವೆ. ಇದರಿಂದ ಆರೋಗ್ಯ ಸಮಸ್ಯೆಗಳಿಗೆ ನಾಂದಿಯಾಗುತ್ತದೆಯೆಂದು ಕರವೇ ಪದಾಧಿಕಾರಿಗಳು ಮನವರಿಕೆ ಮಾಡಿದರು. ಊಟಕ್ಕೆ 5 ರೂ.ಗೆ ಬದಲಾಗಿ 10 ರೂಪಾಯಿಯಂತೆ ತೆಗೆದುಕೊಂಡರೂ ಆಹಾರದ ಗುಣಮಟ್ಟ ಮಾತ್ರ ಕಳಪೆಯಿಂದ ಕೂಡಿರುತ್ತದೆ ಎಂದು ಸಾರ್ವಜನಿಕರು ಆರೋಪಿಸಿದರು.

ಪುರಸಭೆ ಆರೋಗ್ಯ ಅಧಿಕಾರಿ ಕೋಮಲ ಸ್ಥಳಕ್ಕಾಗಮಿಸಿ, ಈಗ ಆಗಿರುವ ತಪ್ಪು ಮತ್ತೆ ಮರುಕಳಿಸದಂತೆ ಎಚ್ಚರ ವಹಿಸಿ ಸ್ವಚ್ಛತೆ ಕಾಪಾಡುತ್ತೇವೆ ಎಂದು ಭರವಸೆ ನೀಡಿ ತಕ್ಷಣವೇ ಇಂದಿರಾ ಕ್ಯಾಂಟೀನ್‌ಗೆ ಬೀಗ ಹಾಕಿದರು. ಕರವೇ ಜಿಲ್ಲಾಧ್ಯಕ್ಷ ಫ್ರಾನ್ಸಿಸ್ ಡಿಸೋಜಾ ಮತ್ತು ಜಿಲ್ಲಾ ಕಾರ್ಯದರ್ಶಿ ಸುರೇಶ್, ಜಿಲ್ಲಾ ಸಲಹೆಗಾರ ಸಜೀಲ್ ಕುಮಾರ್, ಜಿಲ್ಲಾ ಕಾರ್ಯಾಧ್ಯಕ್ಷ ಪ್ರಿತುನ್ ಪೂವಣ್ಣ, ತಾಲೂಕು ಅಧ್ಯಕ್ಷ ಬೆಲ್ಲು ಕಾರ್ಯಪ್ಪ, ಸಬ್‌ಇನ್ಸ್‌ಪೆಕ್ಟರ್ ಪ್ರಮೋದ್, ಹಾಗೂ ಕಾವೇರಪ್ಪ, ಮತ್ತು ಪುರಸಭಾ ಅಧಿಕಾರಿಗಳು ಉಪಸ್ಥಿತರಿದ್ದರು.

ಸೂಚನೆ ನೀಡಿತ್ತು : ಇಂದಿರಾ ಕ್ಯಾಂಟೀನ್ ನಡೆಸುತ್ತಿರುವವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟು, ಶುಚಿತ್ವವನ್ನು ಕಾಪಾಡಿಕೊಂಡು ಸಾರ್ವಜನಿಕರಿಗೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ನೀಡಬೇಕು ಎಂದು ಸೂಚನೆ ನೀಡಿದ್ದೆವು. ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಲು ಸೂಚನೆ ನೀಡಲಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಪಿ.ಕೆ ನಾಚಪ್ಪ ತಿಳಿಸಿದರು.

ಕೆಲಸಗಾರರೇ ಇಲ್ಲ : ಕ್ಯಾಂಟಿನ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವವರು ಕಾರಣಾಂತರಗಳಿಂದ ಕೆಲಸ ಬಿಟ್ಟು ಹೋಗಿದ್ದಾರೆ. ಒಬ್ಬರೇ ಕ್ಯಾಂಟಿನ್ ನಿರ್ವಹಣೆ ಮಾಡುತ್ತಿದ್ದುದರಿಂದ ಅಶುಚಿತ್ವ ಕಂಡು ಬಂದಿದೆ. ಶುಚಿತ್ವ ಕಾಪಾಡಿಕೊಳ್ಳುವುದು ನಮ್ಮ ಜವಾಬ್ದಾರಿ.ಅದಕ್ಕಾಗಿ ಕ್ಯಾಂಟೀನ್ ಮುಚ್ಚಿದ್ದೇವೆ. ಇನ್ನೆರಡು ದಿನದಲ್ಲಿ ಸಂಪೂರ್ಣವಾಗಿ ಕ್ಯಾಂಟಿನ್ನನ್ನು ಸ್ವಚ್ಛಗೊಳಿಸಿದ ಬಳಿಕ ತೆರೆಯಲಾಗುತ್ತದೆ. ಸೋಮವಾರದಿಂದ ಇಂದಿರಾ ಕ್ಯಾಂಟಿನ್ ಸಾರ್ವಜನಿಕರಿಗೆ ಲಭ್ಯವಿರುತ್ತದೆ ಎಂದು ಕ್ಯಾಂಟೀನ್ ಉಸ್ತುವಾರಿ ವಹಿಸಿಕೊಂಡಿರುವ ಸತೀಶ್ ಹೇಳಿದರು.

ಪ್ರತಿಭಾ ಪ್ರದರ್ಶನಕ್ಕೆ ಕ್ರೀಡಾಕೂಟಗಳು ವೇದಿಕೆ



ಥ್ರೋಬಾಲ್‌ನಲ್ಲಿ ಪ್ರಥಮ ಸ್ಥಾನ ಪಡೆದ ಸಂತ ಅನ್ನಮ್ಮ ಧರ್ಮ ಕೇಂದ್ರದ ತಂಡಕ್ಕೆ ಪ್ರಧಾನ ಧರ್ಮಗುರು ಟ್ರೋಫಿ ವಿತರಿಸಿದರು.

ವಿರಾಜಪೇಟೆ, ಮೇ 22–ಪ್ರತಿಭಾ ಪ್ರದರ್ಶನಕ್ಕೆ ಕ್ರೀಡಾಕೂಟಗಳು ವೇದಿಕೆಗಳಾಗಿವೆ ಎಂದು ಸಂತ ಅನ್ನಮ್ಮ ಚರ್ಚ್‌ನ ಪ್ರಧಾನ ಧರ್ಮಗುರು ಜೇಮ್ಸ್ ಡೊಮಿನಿಕ್ ಹೇಳಿದ್ದಾರೆ.

ಪಟ್ಟಣದ ಸಂತ ಅನ್ನಮ್ಮ ಚರ್ಚ್‌ನ ಮಹಿಳಾ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ವಿದ್ಯಾಸಂಸ್ಥೆಯ ಮೈದಾನದಲ್ಲಿ ಕ್ರಿಶ್ಚಿಯನ್ ಕಪ್ ಸೀಸನ್ 1 ಪ್ರಯುಕ್ತ ನಡೆದ ಜಿಲ್ಲಾ ಮಟ್ಟದ ಮಹಿಳೆಯರ ಥ್ರೋಬಾಲ್ ಟೂರ್ನಿಗೆ ಚಾಲನೆ ನೀಡಿ, ಮಹಿಳೆಯರು ಕ್ರೀಡಾ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಕ್ರೀಡಾಕೂಟಗಳ ಅಗತ್ಯವಿದೆ ಎಂದರು.

ಸಮೀಪದ ಅಮ್ಮತ್ತಿಯ ಸಂತ ಅಂತೋಣಿ ಚರ್ಚ್‌ನ ಧರ್ಮಗುರು ಮದಲೈ ಮುತ್ತು ಮಾತನಾಡಿ ಮಹಿಳೆಯರೇ ಕ್ಲಬ್‌ನ್ನು ರಚಿಸಿ ಮೊದಲ ಬಾರಿಗೆ ಮಹಿಳಾ ಕ್ರೀಡಾಕೂಟವನ್ನು ಆಯೋಜಿಸಿರುವುದು ವಿಶೇಷವಾಗಿದೆ. ಈ ಮಹಿಳಾ ಕ್ಲಬ್ ಮತ್ತಷ್ಟು ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲಿ ಎಂದು ಶುಭ ಕೋರಿದರು.

ಸಂತ ಅನ್ನಮ್ಮ ಪದವಿ ಕಾಲೇಜಿನ ಪ್ರಾಂಶುಪಾಲೆ ತೃಪ್ತಿ ಬೋಪಣ್ಣ ಮಾತನಾಡಿ, ಮಹಿಳೆಯರು ಇಂದು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗದೆ, ಸಮಾಜದ ವಿವಿಧ ರಂಗಗಳಲ್ಲೂ ತೊಡಗಿಸಿಕೊಂಡಿರುತ್ತಾಳೆ. ಕ್ರೀಡಾ ಕ್ಷೇತ್ರದಲ್ಲಿಯೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆಯನ್ನು ಮಾಡುತ್ತಿದ್ದು, ಗಮನಾರ್ಹವಾಗಿದೆ ಎಂದರು.

ಕಾಂಗ್ರೆಸ್ ಸೇವಾದಳದ ರಾಜ್ಯ ಜಂಟಿ ಕಾರ್ಯದರ್ಶಿ ತೆರೆಸಾ ವಿಕ್ಟರ್ ಮಾತನಾಡಿದರು, ಮರಿಯಾ ಸಿಕ್ವೇರಾ ಮಹಿಳಾ ಸ್ಪೋರ್ಟ್ಸ್ ಕ್ಲಬ್‌ಗೆ ಚಾಲನೆ ನೀಡಿದರು. ಥ್ರೋಬಾಲ್ ಟೂರ್ನಿಯಲ್ಲಿ ಫೈನಲ್ ಪಂದ್ಯದಲ್ಲಿ ಸಂತ ಅನ್ನಮ್ಮ ಧರ್ಮಕೇಂದ್ರದ ತಂಡ ಜಯಗಳಿಸಿ ಪ್ರಥಮ ಸ್ಥಾನ ಪಡೆಯಿತು. ಸಿದ್ದಾಪುರ ಧರ್ಮ ಕೇಂದ್ರದ ಲಕ್ಕಿ ಲೇಡೀಸ್ ತಂಡವು ದ್ವಿತೀಯ ಸ್ಥಾನ ಪಡೆದುಕೊಂಡಿತು. ಉತ್ತಮ ಆಟಗಾರ್ತಿ ಪ್ರಶಸ್ತಿಯನ್ನು ಮಡಿಕೇರಿಯ ಸಂತ ಮೈಕೆಲರ ಧರ್ಮಕೇಂದ್ರದ ಮಿಶಾಲ್ ಲೋಪೆಸ್ ಪಡೆದುಕೊಂಡರು. ವಿಜೇತ ತಂಡಕ್ಕೆ ಟ್ರೋಫಿ ಹಾಗೂ ನಗದು, ದ್ವಿತೀಯ ಸ್ಥಾನ ಗಳಿಸಿದ ತಂಡಕ್ಕೆ ಟ್ರೋಫಿ ನಗದು ನೀಡಿ ಗೌರವಿಸಲಾಯಿತು. ಜಿಲ್ಲಾ ಮಟ್ಟದ ಥ್ರೋಬಾಲ್ ಕ್ರೀಡಾಕೂಟದಲ್ಲಿ ವಿರಾಜಪೇಟೆ, ಸಿದ್ದಾಪುರ, ಮಡಿಕೇರಿ ಹಾಗೂ ಪೊನ್ನಂಪೇಟೆ ಧರ್ಮ ಕೇಂದ್ರದ ತಂಡಗಳು ಪಾಲ್ಗೊಂಡಿದ್ದವು.

ಮಹಿಳಾ ಸ್ಪೋರ್ಟ್ಸ್ ಕ್ಲಬ್‌ನ ಅಧ್ಯಕ್ಷೆ ಲೀಲಾ ಮ್ಯಾಥ್ಯೂ, ಉಪಾಧ್ಯಕ್ಷೆ ಅನಿತಾ ಶಾಮ್, ಮುಖ್ಯ ಶಿಕ್ಷಕಿ ಸಿಸ್ಟರ್ ರೋಸಿ ಡೈಸಾ, ಸಿಸ್ಟರ್ ವಂದನಾ ಲೋಬೋ, ಶಿನಿ, ಲೇಡೀಸ್ ಕ್ಲಬ್ ಸದಸ್ಯರು, ಧರ್ಮಕೇಂದ್ರದವರು ಉಪಸ್ಥಿತರಿದ್ದರು.

ಇಂದಿನಿಂದ ಶ್ರೀಮೂಲ ಭದ್ರಕಾಳಿ ದೇವರ ಹಬ್ಬ

ವಿರಾಜಪೇಟೆ, ಮೇ 22–ತಾಲೂಕಿನ ಕುಂದಕುಕ್ಲುರು ಗ್ರಾಮದ ಶ್ರೀಮೂಲ ಲಭದ್ರಕಾಳಿ ದೇವರ ಹಬ್ಬವು ನಾಳೆಯಿಂದ ಮೂರು ದಿನಗಳ ಕಾಲ ನಡೆಯಲಿದೆ ಎಂದು ಕುಟ್ಟಂಡ ರವಿ ಮುದ್ದಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಜಿಲ್ಲಾ ಗೊಲ್ಲ ಸಮಾಜದ ವಾರ್ಷಿಕ ಕ್ರೀಡಾಕೂಟ

ನಾಪೋಕ್ಲು, ಮೇ 22–ಕೊಡಗು ಜಿಲ್ಲಾ ಗೊಲ್ಲ ಸಮಾಜದ ವತಿಯಿಂದ ಮೇ 23, 24ರಂದು ಇಲ್ಲಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ವಾರ್ಷಿಕ ಕ್ರೀಡಾಕೂಟ ನಡೆಯಲಿದೆ.

ಬೆಳಿಗ್ಗೆ 9ಗಂಟೆಗೆ ಕ್ರೀಡಾಕೂಟದ ಉದ್ಘಾಟನೆಯನ್ನು ಜಿಲ್ಲಾ ಗೊಲ್ಲ ಸಮಾಜದ ಅಧ್ಯಕ್ಷ ಅರೆಯಂಡ ರಘು ಭೀಮಯ್ಯ ಮತ್ತು ಕ್ರೀಡಾ ಸಮಿತಿ ಅಧ್ಯಕ್ಷ ತುತ್ತಿಯಂಡ ಅಜಂತ ನಾಣಯ್ಯ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಿವೃತ್ತ ಸೈನಿಕ ಪೊಂಗೆರ ಜೀವನ್ ಬೋಪಣ್ಣ, ನಿವೃತ್ತ ಹಿರಿಯ ಲೆಕ್ಕಾಧಿಕಾರಿ ಬೆಸ್ಕಾಂ ಇಲಾಖೆ ಬಿದ್ದಿಯಂಡ ನಂದ, ಆರೋಗ್ಯ ಇಲಾಖೆಯ ನಿವೃತ್ತ ಸ್ಟಾಫ್ ನರ್ಸ್ ಪೊನ್ನಕಂಡ ಉಷಾ ಹರೀಶ್ ಪಾಲ್ಗೊಳ್ಳಲಿದ್ದಾರೆ.

ಪುರುಷರಿಗೆ ಕ್ರಿಕೆಟ್ ಪಂದ್ಯಾಟ, ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಹಗ್ಗ ಜಗ್ಗಾಟ ಹಾಗೂ ಶಾಲಾ ಮಕ್ಕಳಿಗೆ ಆಟೋಟ ಸ್ಪರ್ಧೆಗಳು ನಡೆಯಲಿವೆ. ಫೈನಲ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭ ಮೇ 24ರ ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ. ಕೊಡಗು ಜಿಲ್ಲಾ ಗೊಲ್ಲ ಸಮಾಜದ ಅಧ್ಯಕ್ಷ ಅರೆಯಂಡ ರಘು ಭೀಮಯ್ಯ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕ ಎ.ಎಸ್ ಪೊನ್ನಣ್ಣ, ಉದ್ಯಮಿ ಎಡಿಕೇರಿ ಪ್ರಸನ್ನ, ನಿವೃತ್ತ ಮುಖ್ಯ ಶಿಕ್ಷಕಿಯರಾದ ಪೈತಾಡಿಯಂಡ ಪೊನ್ನಮ್ಮ, ನಿವೃತ್ತ ಮುಖ್ಯ ಶಿಕ್ಷಕಿ ಕೈಬ್ಲೀರ ಪಾರ್ವತಿ ಪಾಲ್ಗೊಳ್ಳಲಿದ್ದಾರೆ.

ಏಂಜಲ್ಸ್ ವಿಂಗ್ಸ್ ನೃತ್ಯ ಶಾಲೆಯಲ್ಲಿ ಆಕಸ್ಮಿಕ ಬೆಂಕಿ

ಕುಶಾಲನಗರ, ಮೇ 22–ಪಟ್ಟಣದ ಗೋಪಾಲ್ ಸರ್ಕಲ್‌ನಲ್ಲಿರುವ ಆಲ್ಬರ್ಟ್ ಡಿಸೋಜ ಅವರಿಗೆ ಸೇರಿದ ಕಟ್ಟಡದ ಮೇಲ್ಭಾಗದಲ್ಲಿ ಏಂಜಲ್ಸ್ ವಿಂಗ್ಸ್ ನೃತ್ಯ ಶಾಲೆ ತರಗತಿಯಲ್ಲಿ ಗುರುವಾರ ತಡರಾತ್ರಿ 2 ಗಂಟೆ ಸಮಯದಲ್ಲಿ ಅಗ್ನಿ ಅವಘಡ ಸಂಭವಿಸಿದೆ. ಮಾಹಿತಿ ದೊರೆತ ಕೂಡಲೆ ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ತೆರಳಿ ಬೆಂಕಿ ನಂದಿಸಿದ್ದಾರೆ. ಸ್ಥಳದಲ್ಲಿ ಯಾರೂ ಇಲ್ಲದ ಕಾರಣ ಹೆಚ್ಚಿನ ಅನಾಹುತ ಸಂಭವಿಸಿಲ್ಲ.



ಏಂಜಲ್ಸ್ ವಿಂಗ್ಸ್ ನೃತ್ಯ ಶಾಲೆ ಕಟ್ಟಡ ಆಕಸ್ಮಿಕ ಬೆಂಕಿಗೆ ತುತ್ತಾಗಿರುವುದು

ನೃತ್ಯ ಮತ್ತು ಸ್ಕೇಟಿಂಗ್ ತರಬೇತಿಗೆ ಸಂಬಂಧಿಸಿದ ಪರಿಕರಗಳು, ವಸ್ತುಗಳು, ಶಾಲೆಗೆ ದೊರೆತ ಪ್ರಶಸ್ತಿ ಫಲಕ, ನೆನಪಿನ ಕಾಣಿಕೆಗಳು ಸೇರಿದಂತೆ 2ಲಕ್ಷಕ್ಕೂ ಅಧಿಕ ಮೊತ್ತದ ಸಾಮಗ್ರಿಗಳು ಬೆಂಕಿಗೆ ಅಹುತಿಯಾಗಿವೆ.

ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಈ ಅವಘಡ ಸಂಭವಿಸಿರಬಹುದು ಎಂಬ ಸಂಶಯ ವ್ಯಕ್ತವಾಗಿದೆ. ಘಟನೆ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಚಾಮರಾಜನಗರದಲ್ಲಿ ಅದ್ಧೂರಿ ಬಸವೇಶ್ವರರ ಜಯಂತೋತ್ಸವ

ಬಸವಣ್ಣನವರ ಪುತ್ಥಳಿ, ಭಾವಚಿತ್ರಗಳ ಮೆರವಣಿಗೆ, ನಗರದೆಲ್ಲೆಡೆ ಮೊಳಗಿದ ಸಾಂಸ್ಕೃತಿಕ ನಾಯಕನ ನಾಮಸ್ಮರಣೆ







12ನೇ ಶತಮಾನದಲ್ಲಿ ಬಸವಣ್ಣನವರು ತಮ್ಮ ವಚನಗಳ ಮೂಲಕ ಸಮಾಜದಲ್ಲಿದ್ದ ಅಂಕು–ಡೊಂಕುಗಳನ್ನು ತಿದ್ದಿದರು. ರಾಜ್ಯ ಸರ್ಕಾರ ಕೂಡ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದೆ. ಈ ಮೂಲಕ ಬಸವಣ್ಣನವರ ನೀತಿಗಳನ್ನು ಅನುಸರಿಸಿ ಬಡವರ ಪರ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ.
–ಕೆ. ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವರು.

ಚಾಮರಾಜನಗರದಲ್ಲಿ ಶುಕ್ರವಾರ ಅದ್ಧೂರಿಯಾಗಿ ಬಸವೇಶ್ವರರ ಜಯಂತೋತ್ಸವ ಆಚರಿಸಲಾಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸಾವಿರಾರು ಮಂದಿ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಎಲ್ಲೆಡೆ ಬಸವೇಶ್ವರರ ನಾಮಸ್ಮರಣೆ, ಭಾವಚಿತ್ರಗಳು ರಾರಾಜಿಸಿದವು.

ಚಾಮರಾಜನಗರ: ಚಾಮರಾಜನಗರದಲ್ಲಿ ಶುಕ್ರವಾರ ಅದ್ಧೂರಿಯಾಗಿ ಬಸವೇಶ್ವರರ ಜಯಂತೋತ್ಸವ ಆಚರಿಸಲಾಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸಾವಿರಾರು ಮಂದಿ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಎಲ್ಲೆಡೆ ಬಸವೇಶ್ವರರ ನಾಮಸ್ಮರಣೆ, ಭಾವಚಿತ್ರಗಳು ರಾರಾಜಿಸಿದವು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ನಿರ್ಮಿಸಿರುವ ಬಸವೇಶ್ವರರ ಪುತ್ಥಳಿಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಅಧಿಕೃತವಾಗಿ ಚಾಲನೆ ನೀಡಿದರು.

ಮೆರವಣಿಗೆಯು ನಗರದ ಜಿಲ್ಲಾಡಳಿತ ಭವನದ ಮುಂಭಾಗದಿಂದ ಆರಂಭವಾಗಿ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಭುವನೇಶ್ವರಿ ವೃತ್ತ, ರಥದ ಬೀದಿ, ಮಹಾವೀರ ವೃತ್ತ ದೊಡ್ಡಂಗಡಿ ಬೀದಿ, ಅಗ್ರಹಾರ ಬೀದಿ, ಭುವನೇಶ್ವರಿ ವೃತ್ತ, ಬಿ. ರಾಚಯ್ಯ ರಸ್ತೆಯ ಮೂಲಕ ಶ್ರೀಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಆವರಣಕ್ಕೆ ಬಂದು ತಲುಪಿತು.

ಕಲಾತಂಡಗಳ ವೈಭವ: ನಗರದಲ್ಲಿ ನಡೆದ ಬಸವೇಶ್ವರರ ಜಯಂತೋತ್ಸವದ ಮೆರವಣಿಯಲ್ಲಿ ಚಾಮರಾಜನಗರ ತಾಲೂಕು ಸೇರಿದಂತೆ ಜಿಲ್ಲೆಯ ವಿವಿಧೆಡೆಯಿಂದ ಜಾನಪದ ಕಲಾ ತಂಡಗಳು ಪಾಲ್ಗೊಂಡಿದ್ದವು. ಮಹಿಳೆಯರ ಚಂಡವಾದ್ಯ, ಗಾರುಡಿ ಗೊಂಬೆ, ಡೊಳ್ಳು ಕುಣಿತ, ಕಂಸಾಳೆ, ವೀರಗಾಸೆ, ಗೊರವರ ಕುಣಿತ, ನಂದಿಧ್ವಜ, ಮಂಗಳವಾದ್ಯ, ಬ್ಯಾಂಡ್‌ಸೆಟ್ ಸೇರಿದಂತೆ 10ಕ್ಕೂ ಹೆಚ್ಚು ಕಲಾತಂಡಗಳ ಕಲಾವಿದರು ಮೆರವಣಿಗೆಯುದ್ದಕ್ಕೂ ತಮ್ಮ ಕಲಾ ಪ್ರದರ್ಶನ ಮಾಡುವ ಮೂಲಕ ಮೆರವಣಿಗೆಗೆ ಮೆರಗು ತಂದರು.

ಮೆರವಣಿಗೆಯಲ್ಲಿ 6ಕ್ಕೂ ಹೆಚ್ಚು ವಾಹನಗಳಲ್ಲಿ ಬಸವೇಶ್ವರರ ಭಾವಚಿತ್ರಗಳನ್ನು ಇಡಲಾಗಿತ್ತು. ಜೋಡೆತ್ತುಗಳೊಂದಿಗೆ ಕೆಲವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ನೂರಾರು ಯುವಕರು ಬ್ಯಾಂಡ್ ಸೆಟ್ ಸದ್ದಿಗೆ ಕುಣಿದು ಕುಪ್ಪಳಿಸಿದರು. ಬಸವೇಶ್ವರರ ಪರವಾಗಿ ಜಯಘೋಷಗಳನ್ನು ಕೂಗುವ ಮೂಲಕ ಸಂಭ್ರಮಿಸಿದರು.

ಪಾನಕ–ಮಜ್ಜಿಗೆ ವಿತರಣೆ: ನಗರದ ಜಿಲ್ಲಾ ಸ್ಪತ್ರೆಯ ಮುಂಭಾಗದಲ್ಲಿ ಭಾರತೀಯ ಜನತಾ ಪಾರ್ಟಿಯ ರೈತ ಮುಖಂಡ ಅಮ್ಮನಪುರದ ಮಲ್ಲೇಶ್ ಹಾಗೂ ಸಮುದಾಯದ ಮುಖಂಡರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಮಂದಿಗೆ ಪಾನಕ, ಮಜ್ಜಿಗೆ ವಿತರಿಸಿದರು.

ಸಾವಿರಾರು ಭಕ್ತರಿಗೆ ಅನ್ನದಾಸೋಹ: ಕಾರ್ಯಕ್ರಮದ ಅಂಗವಾಗಿ ನಗರದ ಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಆವರಣದಲ್ಲಿ ಸಾವಿರಾರು ಭಕ್ತರಿಗೆ ಬೆಳಗ್ಗೆ ತಿಂಡಿ ಹಾಗೂ ಮಧ್ಯಾಹ್ನ ಅನ್ನ ದಾಸೋಹ ಮಾಡಲಾಗಿತ್ತು. ಚಾಮರಾಜನಗರ ಸೇರಿದಂತೆ ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಜಯಂತ್ಯೋತ್ಸದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಶ್ರೀಸಿದ್ದಮಲ್ಲೇಶ್ವರ ವಿರಕ್ತ ಮಠದ ಚೆನ್ನಬಸವ ಸ್ವಾಮೀಜಿ, ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎಚ್.ಎಂ. ಗಣೇಶ ಪ್ರಸಾದ್, ಎಂ.ಆರ್. ಮಂಜುನಾಥ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಂದ್ರು ಜಿಲ್ಲಾಧಿಕಾರಿ ಶ್ರೀರೂಪ, ಜಿಪಂ ಸಿಇಒ ಮೋನಾರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಮಾಜಿ ಶಾಸಕರಾದ ಜಿ.ಎನ್. ನಂಜುಂಡಸ್ವಾಮಿ, ಪ್ರೊ.ಕೆ. ಆರ್. ಮಲ್ಲಿಕಾರ್ಜುನಪ್ಪ ಸಿ.ಎಸ್. ನಿರಂಜನ ಕುಮಾರ್, ಪರಿಮಳಾ ನಾಗಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್ ಸೇರಿದಂತೆ ಇತರರಿದ್ದರು.

ಬಸವಣ್ಣನವರ ಸಂದೇಶ ಸಮಾಜಕ್ಕೆ ದಾರಿ ದೀಪ

ಚಾಮರಾಜನಗರ: ಬಸವಣ್ಣನವರ ಆದರ್ಶ, ಸಂದೇಶಗಳು ಸಮಾಜಕ್ಕೆ ದಾರಿ ದೀಪವಾಗಿವೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ನಡೆದ ಬಸವೇಶ್ವರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ರಾಜ್ಯ ಸರ್ಕಾರ ಕೂಡ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿರುವುದು ಶ್ಲಾಘನೀಯ. ಬಸವಣ್ಣನವರ ಆದರ್ಶಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಿವೆ ಎಂದು ತಿಳಿಸಿದರು.

ನಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಮಾತನಾಡಿ, ಬಸವಣ್ಣನವರ ತತ್ವ, ಆದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಬಸವಣ್ಣನವರ ನೀತಿಗಳನ್ನು ರಾಜ್ಯ ಸರ್ಕಾರ ಅನುಸರಿಸಿ ಬಡವರ ಪರ ಅನೇಕ ಕಾರ್ಯಕ್ರಮ ಜಾರಿಗೊಳಿಸಿದೆ ಎಂದು ತಿಳಿಸಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದಿದರು. ಎಲ್ಲರಿಗೂ ಅರ್ಥ ವಾಗುವ ರೀತಿಯಲ್ಲಿ ಸರಳವಾಗಿ ವಚನಗಳನ್ನು ರಚನೆ ಮಾಡಿ ಸಮಾಜದ ಅಂಕುಡೊಂಕು ಗಳ ವಿರುದ್ಧ ಹೋರಾಡಿದರು ಎಂದರು. ಇದೇ ವೇಳೆ ಶಾಸಕ ಎಚ್.ಎಂ. ಗಣೇಶಪ್ರಸಾದ್ ಮಾತನಾಡಿ, ಪ್ರತಿಯೊಬ್ಬರು ಬಸವಣ್ಣನವರ ತತ್ವಗಳನ್ನು ಪಾಲಿಸುವ ಮೂಲಕ ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮೇ 24ರಂದು ಬೇಗೂರು ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮೇ 22– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ಮೇ 24ರಂದು ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕಬ್ಬಳ್ಳಿ, ಸೋಮಳ್ಳಿ, ಪಡಗೂರು, ಬಲಚವಾಡಿ, ನಿಟ್ರೆ, ಅಗತಗೌಡನಹಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಾಗೇಂದ್ರ ನಿಧನ

ಬೇಗೂರು(ಗುಂಡ್ಲುಪೇಟೆ): ಗ್ರಾಮದ ನಿವಾಸಿ ಸಿ.ಬಿ ನಾಗೇಂದ್ರ (63) ಬುಧವಾರ ಬೆಳಗ್ಗೆ ನಿಧನರಾದರು. ದಿವಂಗತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಬೇಗೂರು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಶರತ್



ಚಾಮರಾಜನಗರ ತಾಲೂಕಿನ ನಂಜೇದೇವನಪುರ ಗ್ರಾಮದ ಪೋಸ್ಟ್ ಮಾಸ್ಟರ್ ರೇವಣ್ಣ ಸಿದ್ದಪ್ಪನವರ ಮಗ ಶರತ್(29) ಹೃದಯಾಘಾತದಿಂದ ಶುಕ್ರವಾರ ಸಂಜೆ ನಿಧನರಾದರು.

ಮೃತರಿಗೆ ತಂದೆ ತಾಯಿ ಸೋದರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೌಜಲಕ್ಕಿ ಮಾರಾಟಕ್ಕೆ ಯತ್ನ: ಒಬ್ಬನ ಸೆರೆ

ದಾಸನಪುರ ಬಳಿ 12 ಜೀವಂತ ಗೌಜಲಕ್ಕಿ, 3 ಪಂಜರ ವಶ

ಕೊಳ್ಳೇಗಾಲ: ಕೊಳ್ಳೇಗಾಲ ಪಟ್ಟಣ ವ್ಯಾಪ್ತಿಯ ದಾಸನಪುರ ಗ್ರಾಮದ ಹೊರವಲಯದಲ್ಲಿ ಅಕ್ರಮವಾಗಿ ಪಂಜರಗಳಲ್ಲಿ ವನ್ಯಜೀವಿಗಳಾದ ಗೌಜಲಕ್ಕಿಗಳನ್ನು ಬಂಧಿಸಿಟ್ಟು ಮಾರಾಟಕ್ಕೆ ಯತ್ನಿಸಿದ ಆರೋಪಿಯನ್ನು ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸಿದ್ದಾರೆ.

ತಿ.ನರಸೀಪುರ ತಾಲೂಕಿನ ಮೇದಿನಿ ಗ್ರಾಮದ ಮಾದೇವ(43) ಬಂಧಿತ ಆರೋಪಿ. ಈತನಿಂದ ಜೀವಂತ 12 ಗೌಜಲಕ್ಕಿ ಹಾಗೂ ಹಕ್ಕಿಗಳನ್ನು ಬಂಧಿಸಲ್ಪಟ್ಟಿದ್ದ 3 ಪಂಜರಗಳನ್ನು ವಶಕ್ಕೆ ಪಡೆಯಲಾಗಿದೆ.

ಕೊಳ್ಳೇಗಾಲ ಸಮೀಪದ ದಾಸನಪುರ ಗ್ರಾಮ ಸಮೀಪದ ಹೊರವಲಯದಲ್ಲಿ ಆರೋಪಿ ಅಕ್ರಮವಾಗಿ ಗೌಜಲಕ್ಕಿಗಳನ್ನು ಪಂಜರದಲ್ಲಿಟ್ಟುಕೊಂಡು ಮಾರಾಟಕ್ಕೆ ಯತ್ನಿಸುತ್ತಿದ್ದ ಬಗ್ಗೆ ಖಚಿತ ಮಾಹಿತಿ ದೊರೆಯುತ್ತಿದ್ದಂತೆ ಸಿಐಡಿ ಅರಣ್ಯ ಸಂಚಾರಿದಳದ ಪೊಲೀಸ್ ಮಹಾನಿರೀಕ್ಷಕರ ಮಾರ್ಗದರ್ಶನದಲ್ಲಿ ಪಿಎಸ್ಐ ಅವಿನಾಶ್, ಮುಖ್ಯ ಪೇದೆಗಳಾದ ಸ್ವಾಮಿ, ಲತಾ, ಬಸವರಾಜು, ರಾಮಚಂದ್ರ, ಜಮೀಲ್, ಬಸವರಾಜ್, ಪ್ರಭಾಕರ್ ಅವರುಗಳು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಮಾಲು ಸಮೇತ ಬಂಧಿಸಿ ಮುಂದಿನ ಕ್ರಮಕ್ಕೈಗೊಂಡಿದ್ದಾರೆ



ಆರೋಪಿಯನ್ನು ಬಂಧಿಸಿರುವ ಪೊಲೀಸರು ಪಂಜರ ಮತ್ತು ಗೌಜಲಕ್ಕಿಗಳನ್ನು ವಶಪಡಿಸಿಕೊಂಡಿರುವುದು.

ನಾಳೆ ನಗರದಲ್ಲಿ ಜಾನಪದ ಉತ್ಸವ

ಚಾಮರಾಜನಗರ: ಕರ್ನಾಟಕ ಜಾನಪದ ಪರಿಷತ್, ಚಾಮರಾಜನಗರ ಜಿಲ್ಲಾ ಘಟಕ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಮೇ.24 ರಂದು ಬೆಳಗ್ಗೆ 10.30ಕ್ಕೆ ನಗರದ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ 'ಚಾಮರಾಜನಗರ ಜಿಲ್ಲಾ ಜಾನಪದ ಉತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚಿಕ್ಕಲ್ಲೂರು ಮಂಟೇಸ್ವಾಮಿ ಮಠದ ಭರತರಾಜೇ ಅರಸ್ ಸಾನಿಧ್ಯ ವಹಿಸುವರು. ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕರ್ನಾಟಕ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಪ್ರೊ.ಹಿ.ಚಿ.ಬೋರಲಿಂಗಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು.

ಪ್ರಸಿದ್ಧ ಹಿರಿಯ ನೀಲಗಾರ ಕಲಾವಿದ ಮೈಸೂರು ಡಾ.ಗುರುರಾಜು ಅವರಿಗೆ ಕೊಳ್ಳೇಗಾಲ ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ. ದತ್ತೇಶ್ ಕುಮಾರ್ ಪ್ರಭುದೇವರಾಜ ಅರಸ್ ಪರಂಜ್ಯೋತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ

ಮಧ್ಯಾಹ್ನ 12ಕ್ಕೆ ವಿಚಾರ ಮಂಡನೆ ಕಾರ್ಯಕ್ರಮ ನಡೆಯಲಿದ್ದು, ಮೈಸೂರು ಮಹಾರಾಜ ಕಾಲೇಜು ಜಾನಪದ ವಿಭಾಗದ ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಮಾನಾಪುರ 'ಸಮಕಾಲೀನ ಸಂದರ್ಭದಲ್ಲಿ ಜಾನಪದದ ಪ್ರಸ್ತುತತೆ' ಮೈಸೂರು ಕರಾಮುವಿ, ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗದ ಸಹ ಪ್ರಾಧ್ಯಾಪಕ ಡಾ.ಪಿ.ಮಣಿ ಚಾ.ನಗರ ಜಿಲ್ಲೆಯ ಜನಪದ ಕಲೆಗಳ ವೈಶಿಷ್ಟ್ಯತೆ ಕುರಿತು ವಿಚಾರ ಮಂಡನೆ ಮಾಡುವರು.

ಗಾಳಿ–ಮಳೆಗೆ ಬಾಳೆ ಫಸಲು ನಾಶ



ಚಾಮರಾಜನಗರ: ಗುರುವಾರ ಸಂಜೆ ಬಿದ್ದ ಜೋರು ಗಾಳಿ ಮಳೆಗೆ ಕಾಗಲವಾಡಿಯಲ್ಲಿ ಬಾಳೆ ಬೆಳೆ ಸಂಪೂರ್ಣವಾಗಿ ನೆಲಕಚ್ಚಿದೆ. ಗ್ರಾಮದ ಗೌಡಿಕೆ ಕೆ.ಎಂ.ನಾಗಸುಂದ್ರ ಎಂಬ ರೈತರಿಗೆ ಸೇರಿದ 1 ಎಕರೆ ಪ್ರದೇಶದಲ್ಲಿ ಸುಮಾರು 1200ಕ್ಕೂ ಹೆಚ್ಚು ಫಸಲಿಗೆ ಬಂದಿದ್ದ ನೇಂದ್ರ ಬಾಳೆ ಗಿಡಗಳು ನೆಲಸಮವಾಗಿದ್ದು, ಸುಮಾರು ಒಂದು ಲಕ್ಷಕ್ಕೂ ಹೆಚ್ಚು ರೂ.ವೆಚ್ಚ ಮಾಡಲಾಗಿದೆ.

ಕನಿಷ್ಠ 4 ಲಕ್ಷ ರೂ ಸಿಗುವ ನಿರೀಕ್ಷೆಯಲ್ಲಿದ್ದು ಮಳೆಯಿಂದ ನಷ್ಟ ಉಂಟಾಗಿದೆ. ಬಾಳೆಗೆ ಫಸಲಿಗೆ ಮಾಡಿದ ಸಾಲ ಬಡ್ಡಿ ಕಟ್ಟಲು ತೊಂದರೆ ಆಗಿದ್ದು, ಜಿಲ್ಲಾಡಳಿತ ಸೂಕ್ತ ಪರಿಹಾರ ನೀಡಬೇಕು ಎಂದು ನಷ್ಟಕ್ಕೊಳಗಾದ ಕೆ.ಎಂ.ನಾಗಸುಂದ್ರ ಅಳಲು ತೋಡಿಕೊಂಡಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ಇರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. EDUCATION SSLC, PUC, ITI, DIPLOMA, DEGREE ಖಾಲಿ ಇರುವ ಹುದ್ದೆಗಳು, CASHIER, BILLING, RECEPTIONIST, HR, ADMIN, ACCOUNTANT ETC, SALARY (18k -38k), ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
8317415401 9632659609

JOB OPPORTUNITY SEMINAR
For Retired officials Senior Citizens & House Wives 50+ Age, Secure your Future Today, Place: Shree Guru Residency, Near Metropole Hotel, JLB Road, Mysore. Date: 25-5-2026. Time: 11 am, Education: SSLC & above any degree. Benifites Fixed Salary up to 75000, PART/FULL TIME, Flexible timings, Pension Income. For Registration Call
9449068132

FOR SALE
20x30 & 30x40 site and Duplex & Individual House in Srirampura close to Vivekananda Circle. Sri Vishnu Properties
Mob: 98407 28571

SITES FOR SALE
30x50 North face
30x40 West Face
Sultan Batheri Road, Opp. Smart Public School, Gundlupet.
99802-34657 89515-45857

ಬೇಕಾಗಿದ್ದಾರೆ
B.Com., BE, BBM English ಮಾತನಾಡಲು ಚೆನ್ನಾಗಿ ಬರಬೇಕು.
Mob: 82772-42979
ಮೈಸೂರು

TO LET
Commercial Purpose, open site 4000 sq.ft. Ring Road Site No. 1939, Dattagalli 3rd Stage, Near Kajaria Tiles, Mysuru.
Mobile: 92435-05777 99164-11293

IMMEDIATE REQUIREMENT
DATA ENTRY OPERATOR with MS-Office (Kannada and English Typing)
ACCOUNTANT (Taly ERP 9)
AUDITOR (Expert in MS-Office)
(Minimum 2 Year Experience)
(Attractive Salary with ESI and EPF)
0821-2543527 & 0821-4148888
https://maps.app.goo.gl/1v3kQyFCGjfEyUn1A

ಮೈಸೂರಿನಲ್ಲಿ ಉದ್ಯೋಗ ಅವಕಾಶ
ವರ್ಕ್ ಫ್ರಮ್ ಹೋಮ್, ಪ್ಯಾಕಿಂಗ್ ಪಿಕ್ಕಿಂಗ್, ಡೇಟಾ ಎಂಟ್ರಿ, ಡಾಕ್ಯುಮೆಂಟ್ ವೆರಿಫಿಕೇಷನ್, ಕಂಪನಿ ವರ್ಕ್, ಆಫೀಸ್ ವರ್ಕ್, ಮೊದಲು ಬಂದವರಿಗೆ ಆದ್ಯತೆ ಈ ಕೂಡಲೇ ಸಂಪರ್ಕಿಸಿ:
7022729803 6361167510

ಸೈಟ್ ಮಾರಾಟಕ್ಕಿದೆ
60x90
ಪೋಸ್ಟ್ ಆಫೀಸ್ ಪಕ್ಕ, ಸೋಮವಾರಪೇಟೆ, ಚಾಮರಾಜನಗರ.
ಬೆಲೆ : 60 ಲಕ್ಷ
9448187863

SITE FOR SALE
50x80 North face 40 feet road, MUDA APPROVED
Paramanandasagar, Ilwala
Final Price 1750 per sq ft.
Mob: 8088030980

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಹೆಂಗಸರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ನಜರ್‌ಬಾದ್, ಮೈಸೂರು–10
Ph: 9739816440

Teakwood
Doors & Windows @ Company Depot Rates
Aishwarya 9148991267

ಶ್ರೀ ಗೌರೀಶಂಕರ ಟ್ರಾವೆಲ್ಸ್
29–5–2026 (13 ದಿನ): ಹರಿದ್ವಾರ್, ಋಷಿಕೇಷ್, ಗಂಗೋತ್ರಿ, ಉತ್ತರ ಕಾಶಿ, ಯಮುನೋತ್ರಿ, ಗುಪ್ತಕಾಶಿ, ಬದರಿನಾಥ್, ಕೇದಾರ್‌ನಾಥ್, ದೇವಪ್ರಯಾಗ್, ದೆಹಲಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ಸಂಪು
ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

ನೇರ ಸಂದರ್ಶನ
1) ಭದ್ರತಾ ಸಿಬ್ಬಂದಿ – 10 ಜನ. 25 ರಿಂದ 35 ವರ್ಷ ವಾರದ ಸಂಬಳವಿರುತ್ತದೆ.
2. MARKETING EXECUTIVE (25 TO 35) TWO WHEELER MUST (KANNADA, ENGLISH, HINDI) ಸಂಪರ್ಕಿಸಿ
99007 49104 90367 45292

ಬೇಕಾಗಿದ್ದಾರೆ
ಟೈಲರ್ ಫಾರ್ ಲೇಡೀಸ್ ಬೋಟಿಕ್ /ಸೇಲ್ ಗರ್ಲ್. ಹಿನಕಲ್, ಮೈಸೂರ್.
Mob: 9538811425

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಮತ್ತು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಮೈಸೂರಿನ ಸುತ್ತಮುತ್ತ
7795104543 9538886328

FOR SALE
40x60 E/F MUDA AUCTION SITE @ Vijayanagar 4th stage, 40X70, N/ E CORNER SITE @ Srirampura, 40x65 House Yadavgiri, 10 acres Agriculture Land and Farm House® Talakadu.
Call: 74113 63509 / 99450 19509

CHANGE OF NAME
I, Divesh A Jain, S/o P Ashok Kumar Jain, residing at # 146/A, New CH-11/A, College Road, Chamaraja Mohalla, Mysore, Karnataka-570004, I have changed by my name from DIVESH KUMAR JAIN to DIVESH A JAIN, Affidavit sworn before Notary Rajendrakumar K. M. Advocate and Notary, dated : 20.05.2026.

ಜೆಮಿನಿ
ರೋಲಿಂಗ್ ಷಟರ್ ಮೆಟೀರಿಯಲ್ಸ್
ರೋಲಿಂಗ್ ಷಟರ್ ಬಿಡಿ ಭಾಗಗಳ ತಯಾರಕರು.
ಡೈರೆಕ್ಟ್ ಫ್ಯಾಕ್ಟರಿ ಸೇಲ್
ಸಂಪರ್ಕಿಸಿ :9740788263
#874/A ಮಾನಂದವಾಡಿ ರಸ್ತೆ ಮೈಸೂರು =570008

ಸುವರ್ಣ ಯಾತ್ರಾ
* 9 ದಿನಗಳ ನೇಪಾಳ ಅಯೋಧ್ಯ ಪ್ರವಾಸ 12/6/26
* 9 ದಿನಗಳ ಅಸ್ಸಾಂ ಮೇಘಾಲಯ ಅರುಣಾಚಲ್ ಪ್ರದೇಶ 18/6/26
* 4 ದಿನಗಳ ಕಾಶಿ ಅಯೋಧ್ಯಾ ಪ್ರವಾಸ 14/6/26
* 7 ದಿನಗಳ ಭೂತನ್ 15/6/26.
9019462508 9480843945

ಬೇಕಾಗಿದ್ದಾರೆ
B M Habitet ಮಾಲ್‌ನಲ್ಲಿ ಪಾರ್ಕಿಂಗ್ ಕ್ಯಾಷಿಯರ್ ಕೆಲಸ ಮಾಡಲು ಬೇಕಾಗಿದ್ದಾರೆ. ಹುಡುಗರು ಮಾತ್ರ.
Time: 9AM To 6 PM 5PM To 2 AM
74116-46663 96326-06663

ಜಮೀನು ಬಾಡಿಗೆಗೆ ಇದೆ
1 1/4 ಎಕರೆ ಅಲಿನೇಶನ್ ಜಮೀನು ಎಲ್ಲಾ ಸೌಕರ್ಯವಿದ್ದು, ಸ್ಕೂಲು, ಆಸ್ಪತ್ರೆ, ರೆಸಾರ್ಟ್, ಹೋಂಸ್ಟೇ ಉದ್ದೇಶಕ್ಕೆ ಗದ್ದಿಗೆ ರಸ್ತೆ ಹತ್ತಿರ ಚ.ಅ. 99 ಪೈಸೆ ಬಾಡಿಗೆಗಿದೆ.
Mob: 81976-09290

ಕೆಲಸಕ್ಕೆ ಬೇಕಾಗಿದ್ದಾರೆ
ನೇಮ್‌ಪ್ಲೇಟ್ ಕೆಲಸಕ್ಕಾಗಿ. ಹುಡುಗರು
ವಯೋಮಿತಿ : 18 ರಿಂದ 30
ಸಂಬಳ : 10K + 2K
ಸ್ಥಳ : ಅಗ್ರಹಾರ & ಶ್ರೀರಾಂಪುರ
ಸಮಯ ಬೆಳಗ್ಗೆ 10:00 ರಿಂದ ಸಂಜೆ 7:30 ರವರೆಗೆ
95132 20070

100% TEAK WOOD
FACTORY FINISH DOORS & WINDOWS @ FACTORY DEPOT RATES
10 YEARS WARRANTY*
9731591267 9901291267

SHORT-N-SWEET 2/3 DAY TOURS
Time Saving Well Curarted Week Ends
ESSENCE OF Kerala, Tamil Nadu, Dandeli Goa — 2/3 Day Pkg. Train A.C. Coach
1. Tamil Nadu - Madhurai, Rameshwaram Kanyakumari (Golden Triangle) 8000/-
2. Adiyogi, Yercaud, Tiruvannamalai / Trivandrum Kovalam Beach, Kerala, Varkala, Jatayu, Alleppey
DANDELI & GOA 4000/-, 6800/-, 9500/- | 28 May-11&25 June
Be a Member for Whatsapp Updates & Lucky Dip
Hygiene Food, Luxury Rooms / Call : 9886697052

Designed to make EVERY SPACE beautiful
2 BHK HOME INTERIORS @₹2.9 Lakhs Onwards
HOME SPACE MART
Mysore • Kushalnagar • Bangalore
For Site Visit: Aishwarya 9148991267

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

NANDI ENCLAVE
@ Bilikere, Mysore
Immediate registration.
A premium residential layout, gated community, C.C. Road. All good civic amenities.
Mob: 99720-85599

ನಿವೇಶನ ಮಾರಾಟಕ್ಕಿದೆ
ಶ್ರೀರಾಂಪುರ ಚೌಡಹಳ್ಳಿ K.P.T.C.L. ವಿದ್ಯುತ್ ನಗರ ಬಡಾವಣೆ S/F ನಿವೇಶನ 9x12 ಮೀ. ನಿವೇಶನ ಮಾರಾಟಕ್ಕಿದೆ
Mob: 97391-51987

ಬಿರ್ಲಾ ಓಪಸ್ ಪೇಂಟ್‌ನ (c/o) ಹೆರಿಟೇಜ್ ಅಂಡ್ ಕೋ., ಹೆಬ್ಬಾಳ್, ಮೈಸೂರು
ಗೋಡೌನ್‌ನಲ್ಲಿ ಕೆಲಸಕ್ಕೆ ಆಸಕ್ತಿ ಇರುವ, 1 ವರ್ಷ ಅನುಭವ ಇರುವ ಕಂಪ್ಯೂಟರ್ ಆಪರೇಟರ್, ಸೂಪರ್‌ವೈಸರ್, ಪಿಕ್ಕರ್ ಹಾಗೂ ಡ್ರೈವರ್‌ಗಳು ಬೇಕಾಗಿದ್ದಾರೆ. ಮಾಸಿಕ ವೇತನ 16000/– ರಿಂದ 23000/– ವರೆಗೆ ಕೊಡಲಾಗುವುದು ESI, PF ಸೌಲಭ್ಯ ಕೂಡ ಕೊಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9538520013 / 9148108838 9113956899

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

SITE FOR SALE
For Immediate Registration
30x40 West Facing Site @32 Lacks*
30x42 South Park Facing Site @34 Lacks*
Next to SAHA MEADOWS & JSS Layout Stage-4, Before JSS International University & Upcoming Pheripheral Ringroad
3 km from Marvel PU Collage & Lalithadripura Ring Road, Mysore
Call: 7795609173

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ಮನೆಯಿಂದಲೇ ಕೆಲಸ ನೇರ ನೇಮಕಾತಿ
ಡೇಟಾ ಎಂಟ್ರಿ, ಫಾರಂ ಫಿಲ್ಲಿಂಗ್, ಟೆಲಿಕಾಲರ್, ಪ್ಯಾಕಿಂಗ್, ಲೇಬಲ್ ಮಾಡುವುದು ದಿನದಲ್ಲಿ 4 ಗಂಟೆಗಳ ಕೆಲಸ ಗೃಹಿಣಿಯರಿಗೆ, ಮಹಿಳೆಯರಿಗೆ, ಪುರುಷರಿಗೆ & ವಿದ್ಯಾರ್ಥಿಗಳಿಗೆ ಉದ್ಯೋಗವಕಾಶವಿದೆ Work from home. 18000 to 30000.
Mob: 7090177661

ಸಂಪು, ಟ್ಯಾಂಕ್ ಕ್ಲೀನಿಂಗ್, ಕೋರ್ ಕಟಿಂಗ್, ಸೋಲಾರ್ ಸರ್ವೀಸ್, ಸ್ಲಾಬ್ ಕಟಿಂಗ್, ಗ್ಯಾಸ್ ಲೈನ್, ಪ್ಲಂಬಿಂಗ್ ವರ್ಕ್.
63621-50462 / 77957-49881

FARM LAND FOR SALE
2 acre farmland for sale in mavinahalli. Just 2 km from jayapura. Just 10 km from Srirampura Ring Road. 2.5 lakh per Gunta Interested can cal me
88846-16461 / 80733-00783

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ: 18500 (26 ದಿನಗಳು, 8 ಗಂಟೆ)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 48 ವರ್ಷದೊಳಗೆ
ಸಂಬಳ : ಸೂಪರ್‌ವೈಸರ್ : 24,000/-
ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

SITE FOR SALE
30X40 EAST FACING
30X40 WEST FACING
MUDA APPROVED LAYOUT, NEAR VIJAYANAGAR 4TH STAGE, AADISWAR NAGAR BACK SIDE,
Mob : 9844130293

WANTED
WE NEED A MALE STAFF FOR OUR ICECREAM SHOP HAVING EXPERIENCE IN PREPARING, ROLL ICECREAM, STONE ICECREAM, SUNDAYS, SANDWICHES, MILKSHAKES JUICES ETC, ATTRACTIVE SALARY FOR THE RIGHT PERSON PLEASE CALL
8970773012

CHANGE OF NAME
I, NAVEEN DEVANG N, S/o K.Nagaraj, Residing at No. 100, Karakushalanagar, Metagalli, Mysuru -570016 (K.S), have Changed My name From NAVEEN KUMAR.N To NAVEEN DEVANG.N By own Will & Wish Before Notary Rajeshwari, Mysuru City
Dated: 04.07.2022

ತಕ್ಷಣ ಬೇಕಾಗಿದ್ದಾರೆ
ಗಾರೆ ಕೆಲಸಗಾರರು ಬೇಕಾಗಿದ್ದಾರೆ
ರಮಾಬಾಯಿ ನಗರದಲ್ಲಿ ಮೈಸೂರು, ಮನೆ ಕಟ್ಟಲು ಗಾರೆ ಕೆಲಸಗಾರರು ಬೇಕಾಗಿದ್ದಾರೆ. ದಿನದ ಕೂಲಿ ರೂ. 1250. ಸಮಯ ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ. ಸಂಪರ್ಕಿಸಿ:
Mob: 99863-22444

ಹೋಟೆಲ್ ಕೆಲಸಕ್ಕೆ ಹೆಂಗಸರು ಬೇಕಾಗಿದ್ದಾರೆ
ಕೌಂಟ್ರು ಸಂಬಳ: 14,000
ದೋಸೆ ಭಟ್ಟ : 18,000.
ಸಪ್ಲೈಯರ್ 13,000
Mob: 99869-98606

FOR RENT
1ST FLOOR OFFICE SPACE FOR RENT (PLUG AND PLAY) 1200 SQ FT IN KUVEMPUNAGAR,
8147249040

SITE FOR SALE
40x60 S/F MANASI NAGAR DEVEGOWDA CIRCLE
7892565278

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
9448229184 7899625268

ಬೇಕಾಗಿದ್ದಾರೆ
ಹೊಟೇಲ್ ಒಂದರಲ್ಲಿ ಕೆಲಸ ಮಾಡಲು ಮಾಂಸಾಹಾರಿ ಮತ್ತು ಸಸ್ಯಾಹಾರಿ ಅಡುಗೆ ಭಟ್ಟರು, ಪರೋಟ ಮಾಸ್ಟರ್, ಪಾತ್ರೆ ಕ್ಲೀನ್ ಮಾಡುವವರು ಹಾಗೂ ಹೌಸ್ ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
9845010281 8105734012

ಅನುಬಂಧ ವೃದ್ಧಾಶ್ರಮ
ಆರೋಗ್ಯ, ಆರೈಕೆ ಬೇಕಾದ ಹಿರಿಯ ನಾಗರೀಕರಿಗೆ ಹಾಗೂ ಹಾಸಿಗೆ ಹಿಡಿದವರಿಗೆ, ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರಿ ಊಟ, ವಸತಿ, ವೈದ್ಯಕೀಯ ತಪಾಸಣೆ ಹಾಗೂ ನರ್ಸಿಂಗ್ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. ಸಂಪರ್ಕಿಸಿ :
9880793910

30'x40'
11 'A' ಖಾತಾ ಸೊಸೈಟಿ ಸೈಟು ಮಾರಾಟಕ್ಕಿದೆ. 22 ಲಕ್ಷಗಳು. ನಂಜುಂಡೇಶ್ವರ ನಗರ, ತಳೂರು, ಟಿವಿಎಸ್ ಫ್ಯಾಕ್ಟರಿ ಹತ್ತಿರ, ಮೈಸೂರು
Mob: 97421-98093

ಮನೆ, ಸೈಟು ಮಾರಾಟಕ್ಕಿದೆ
- 30x50 ಶ್ರೀರಾಂಪುರ
- 30x40 ಮನೆ
- 70x50 ಕಮರ್ಷಿಯಲ್ ಜಾಗ
- 20x30 ಮನೆ
- 60x40 ಮನೆ.

Mob: 90087-11654

ಕಮರ್ಷಿಯಲ್ ಸೈಟು ಮಾರಾಟಕ್ಕಿದೆ
80 ಅಡಿ ಮುಖ್ಯ ರಸ್ತೆ, North East ಕಾರ್ನರ್, ದಟ್ಟಗಳ್ಳಿ ಕೊಳ್ಳುವವರು ಸಂಪರ್ಕಿಸಿ
9945042875

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Solar Water Heaters


built for Modern Living
JUPITER SOLAR
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಉದ್ಯೋಗಕ್ಕೆ ಬೇಕಾಗಿದ್ದಾರೆ
ಪೆಬ್ಲಿ ಸ್ಪೋರ್ಟ್ಸ್ ಕ್ಲಬ್, ಕೆರ್ಗಳ್ಳಿ, ಮೈಸೂರು
○ ಹುದ್ದೆ: ಟರ್ಫ್ ನೋಡಿಕೊಳ್ಳುವ ಸಿಬ್ಬಂದಿ
○ ಬೆಳಿಗ್ಗೆ: 6AM – 4PM | Rs- 10,000/-
○ ಸಂಜೆ: 4PM – 11PM | Rs- 8,000/-
9035350202

TO LET TEACHING STAFF
COMMERCIAL / OFFICE SPACE
1st Floor, 1000 sq.ft. Manandavadi Road, near Ashokapuram Railway Station, Mysuru-14. Contact:
Mob: 92435-05777

HOME FOR THE AGED
Providing care for all senior citizens with comfortable accommodation, vegetarian food, professional nursing support in a homely environment. Day care facility also available.
Call: 73534-30309

HOUSE FOR SALE
30x40 Ground, First and Second Floor Duplex House and 40x60 Ground & First Floor house for sale at Ramakrishna Nagar, 1 BHK house for rent at T.K. Layout.
Call: 73534-30309

WANTED FEMALE WARDEN
SNEHABHAVAN - HOME FOR MENTALLY CHALLENGED GIRLS, Mysore, seeks a compassionate & responsible warden. Candidates with experience in caregiving or social work are preferred. Food & accommodation are provided.
70125-50480 / 99803-92428

WANTED TEACHING STAFF
For a reputed institution (Experience Preferred) for English , Maths, Nursery & Hindi subjects. Transport facilities available. Drop your resume through WhatsApp or Contact no:
89715-77685, 99806-31121

B.S.G. PROPERTIES
Hinkal, Mysore
Telecallers - 10 Nos.
Team Leaders - 5 Nos.
Fixed salary + Incentive. Only girls. Contact:
Mob: 73494-73373
Office No. 88679-97483

ಬಾಡಿಗೆಗೆ ಇದೆ
ಮೈಸೂರಿನ ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಫ್ಯಾಕ್ಟರಿ ಶೆಡ್ ಬಾಡಿಗೆಗೆ ಇದೆ. 65 HP ವಿದ್ಯುತ್ ಸಂಪರ್ಕವುಳ್ಳ 4500 ಚ.ಅಡಿ. 1 ಆಫೀಸ್ ರೂಂ (1 1/2 ಎಕರೆ ಬೌಂಡರಿ) ಲೂನಾರ್ ಫ್ಯಾಕ್ಟರಿ ಮೇನ್ ಎದುರು.
Mob: 98808-02232 99454-84649

ಬೇಕಾಗಿದ್ದಾರೆ
ಮೈಸೂರಿನ ಕೆಆರ್‌ಎಸ್ ರಸ್ತೆ, ಜೆ.ಕೆ. ಟೈರ್ಸ್ ಹತ್ತಿರವಿರುವ ಫಾರ್ಮಾಸಿಟಿಕಲ್ ಕಾರ್ಖಾನೆಗೆ 8 ಗಂಟೆ ಶಿಫ್ಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವೇತನ 26 ದಿನಕ್ಕೆ ಇಎಸ್‌ಐ ಮತ್ತು ಪಿಎಫ್ ಕಟ್ಟಾಗಿ ಟೇಕ್ ಹೋಮ್ ರೂ. 15,000. ಸಂಪರ್ಕಿಸಿ:
Mob: 97319-76148

ಸೈಟು ಮಾರಾಟಕ್ಕಿದೆ
ನಂಜುಂಡೇಶ್ವರ ಲೇಔಟ್ ನಿಯರ್ ಜೆಪಿ ನಗರ 30x50
ರಾಮಾನುಜ ರೋಡ್ 19x25,
ಚಾಮುಂಡಿಪುರಂ ಹತ್ತಿರ 30x40
Mob: 7259274059 9663948719

ಸೈಟು ಮಾರಾಟಕ್ಕಿದೆ
20x30 E/F, 37 ಲಕ್ಷ, ರೂಪನಗರ ಪಕ್ಕ, ಪುಷ್ಪ ಲೇಔಟ್.
30x40 E/F, 38 ಲಕ್ಷ. ಸುವರ್ಣನಗರ ಪಕ್ಕ, ಬೋಗಾದಿ.
Mob: 98457 65573

DTP OPERATOR
Pratham is looking for a DTP person for its programmes with knowledge of CorelDraw and related software. Contact:
Mob: 95356-96842

ಮಹಿಳಾ ವಾರ್ಡನ್ ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಬಿಳಿಕೆರೆ ಹೋಬಳಿಯ ಸಬ್ಬನಹಳ್ಳಿ ಗ್ರಾಮದ ಸ್ನೇಹ ಭವನ ಸಂಸ್ಥೆಯ ವಿಶೇಷ ಚೇತನವುಳ್ಳ ಮಕ್ಕಳ ವಸತಿ ನಿಲಯಕ್ಕೆ ಒಬ್ಬರು ಮಹಿಳಾ ವಸತಿಯುತ ವಾರ್ಡನ್ ಬೇಕಾಗಿದ್ದಾರೆ. ಉಚಿತ ವಸತಿ ಮತ್ತು ಊಟ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ:
70125-50480 / 99803-92428

ಡ್ರೈವರ್ಸ್ ಬೇಕಾಗಿದ್ದಾರೆ
ಸ್ಕೂಲ್ ಬಸ್ ಚಾಲಕರು ಬೇಕಾಗಿದ್ದಾರೆ. ಹೆವಿ ಡ್ರೈವಿಂಗ್ ಲೈಸನ್ಸ್ ಇರತಕ್ಕದ್ದು, 05 ವರ್ಷ ಅನುಭವ ಇರುವವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.
ಸಂಪರ್ಕಿಸಿ: ಭಾರತೀಯ ವಿದ್ಯಾ ಭವನ ವಿಜಯನಗರ, ಮೈಸೂರು.
ಆಡಳಿತಾಧಿಕಾರಿ, 99860-02207

ಬೇಕಾಗಿದ್ದಾರೆ
ಹನುಮಂತು ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ.
ಸಂಬಳ: 12,000 ದಿಂದ 14,000
ಬಿ.ಎನ್. ಸ್ಟ್ರೀಟ್, ಮಾರ್ಕೆಟ್ ಬಿಲ್ಡಿಂಗ್, ಮಂಡಿಮೊಹಲ್ಲಾ, ಮೈಸೂರು.
ಸಂದರ್ಶನಕ್ಕೆ ಸಂಪರ್ಕಿಸಿ:
Mob: 96114-31188

SITES FOR SALE
- 30x40 BEML Rajarajeshwari Nagara, Dattagalli.
- 20x30 MUDA approved Dattagalli.
- 40x60 Pragathi Nagara, Yelwala
- 40x60 Kuberananda Sagara.

63629-99147, 96320-30718

FOR RENT
Commercial shop and 3 BHK hosue for office purpose. A.V. Hospital Junction, Siddhartha Layout. Contact:
Mob: 90604-06669

ಮೈಸೂರು ನಗರದ ಸುತ್ತಮುತ್ತ
ನಗರದ ಕಾರ್ಖಾನೆ, ಕಂಪನಿಗಳಲ್ಲಿ ಸ್ಕೂಲ್‌ಗಳಲ್ಲಿ, ಗೋಲ್ಡ್ ಮಾಲ್‌ಗಳಲ್ಲಿ, ಹಾಸ್ಪಿಟಲ್, ಎಲೆಕ್ಟ್ರಿಕಲ್ ಕಂಪನಿಗಳಲ್ಲಿ, ಕೆಲಸ ಮಾಡಲು ಹೆಲ್ಪರ್ಸ್, ಸೆಕ್ಯೂರಿಟಿ, ಸೆಕ್ಯೂರಿಟಿ ಸೂಪರ್‌ವೈಸರ್‌ಗಳು, ಹೌಸ್‌ಕೀಪಿಂಗ್, ವರ್ಕ್ಸ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
96112-08553, 90364-61347

ಮನೆ ಮಾರಾಟಕ್ಕಿದೆ
30x30 ಪೂರ್ವ ದಿಕ್ಕು ಬಾಗಿಲು, ಪೂರ್ವಕ್ಕೆ, G+1st Floor, IPS ನಗರ, ರಿಂಗ್ ರೋಡ್ ನಿಂದ 300 ಮೀ ಹತ್ತಿರದಲ್ಲಿ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
Mob: 80503-32377

ಬೇಕಾಗಿದ್ದಾರೆ
ಮೈಸೂರಿನಲ್ಲಿ ಫೀಲ್ಡ್ ಆಫೀಸರ್ & ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡಲು ಮತ್ತು ಮಂಡ್ಯದಲ್ಲಿ ತೋಟದಲ್ಲಿ ಜಮೀನು ಕೆಲಸ ಮಾಡುವವರು ಮತ್ತು ಮಂಡ್ಯದಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ.
96067 01359

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಹುಣಸೂರು ತಾಲೂಕು ಹನಗೋಡು ಹೋಬಳಿ ಚರಕುಂದ ಗ್ರಾಮದಲ್ಲಿ ವಾಸವಿರುವ ಸೋಮೇಗೌಡ ರವರ ಮಗ ಸಿ.ಎಸ್. ರವಿ ಆದ ನಾನು ಪ್ರಮಾಣೀಕರಿಸುವುದೇನೆಂದರೆ ನನ್ನ ಆಧಾರ್ ಕಾರ್ಡ್ ಮತ್ತು ಶಾಲಾ ದಾಖಲಾತಿಯಲ್ಲಿ ಸಿ.ಎಸ್. ರವಿ ಬಿನ್ ಸೋಮೇ ಗೌಡ ಎಂಬುದಿದ್ದು, ಡ್ರೈವಿಂಗ್ ಲೈಸೆನ್ಸ್ ನಲ್ಲಿ ರವಿ ಎಸ್ ಎಂಬುದಾಗಿದೆ ಆದ್ದರಿಂದ ನನ್ನ ಆಧಾರ್ ಕಾರ್ಡ್ ಮತ್ತು ಸಾಲದ ಖಾತೆಯಲ್ಲಿರುವಂತೆ ಸಿಎಸ್ ರವಿ ಬಿನ್ ಸೋಮೇಗೌಡ ಎಂದು ನೋಟರಿಯವರ ಸಮ್ಮುಖದಲ್ಲಿ ತಿದ್ದುಪಡಿ ಮಾಡಿಸಿರುತ್ತೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಸಹಿ/- ಸಿ.ಎಸ್. ರವಿ

ಮೈಸೂರು ಮಿತ್ರ 47 ಓದುಗರ ಗಮನಕ್ಕೆ

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 10ನೇ ಪುಟ ನೋಡಿ

ಶಿಕ್ಷಕರ ಹಿತ ಕಾಪಾಡಿ, ಶಿಕ್ಷಣದ ಗುಣಮಟ್ಟ ಹೆಚ್ಚಿಸಿ

ಶಿಕ್ಷಕರ ಸಂಘದ ಪದಾಧಿಕಾರಿಗಳಿಗೆ ಬಿಇಓ ಎಸ್.ಸಿ.ಶಿವಮೂರ್ತಿ ಕರೆ

ತಿ.ನರಸೀಪುರ, ಮೇ 22– ಶಿಕ್ಷಕರ ಸಂಘದ ಪದಾಧಿಕಾರಿಗಳು ಶಿಕ್ಷಕರ ಹಿತಾಸಕ್ತಿ ಕಾಪಾಡುವ ಜೊತೆಗೆ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶ್ರಮಿಸಬೇಕು. ಸಂಘದ ಮೂಲಕ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ, ಸರ್ಕಾರದ ಗಮನಕ್ಕೆ ತಂದು ಪರಿಹಾರ ದೊರಕಿಸುವ ಕಾರ್ಯ ಮಾಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ. ಶಿವಮೂರ್ತಿ ಕರೆ ನೀಡಿದರು.


ಸಂಘದ ನೂತನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಪಟ್ಟಣದ ಗುರು ಭವನದಲ್ಲಿ ಶುಕ್ರವಾರ ನಡೆದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಕರು ಸಮಾಜದ ಶಿಲ್ಪಿಗಳು, ಸಂಘದ ಪದಾಧಿಕಾರಿಗಳು ಎಲ್ಲರನ್ನು ಒಗ್ಗೂಡಿಸಿಕೊಂಡು ಸಂಘಟಿತ ಶಕ್ತಿಯಿಂದ ಕಾರ್ಯ ನಿರ್ವಹಿಸಬೇಕು. ಶಿಕ್ಷಕರ ಹಕ್ಕುಗಳ ರಕ್ಷಣೆ, ವಿದ್ಯಾರ್ಥಿಗಳ ಉತ್ತಮ ಭವಿಷ್ಯ ನಿರ್ಮಾಣ ಹಾಗೂ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಬೇಕು. ಶಾಲೆಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ, ಶಿಕ್ಷಕರಿಗೆ ಅಗತ್ಯ ತರಬೇತಿ, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಸಂಘ ಕಾರ್ಯ ನಿರ್ವಹಿಸಬೇಕು. ಶಿಕ್ಷಕರ ನಡುವಿನ ಏಕತೆ ಮತ್ತು ಪರಸ್ಪರ ಸಹಕಾರ ಸಂಘದ ಬಲವಾಗಬೇಕು. ಸಂಘದ ಪದಾಧಿಕಾರಿಗಳು ವೈಯಕ್ತಿಕ ಭಿನ್ನಾಭಿಪ್ರಾಯ ಬದಿಗಿಟ್ಟು ಶಿಕ್ಷಣ ಮತ್ತು ಶಿಕ್ಷಕರ ಕಲ್ಯಾಣ ಮುಖ್ಯ ಧ್ಯೇಯವಾಗಬೇಕು. ಸಮಾಜದಲ್ಲಿ ಶಿಕ್ಷಕರಿಗೆ ಗೌರವ ಹೆಚ್ಚಿಸುವ ಕಾರ್ಯ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಶಿಕ್ಷಕರು ಹಾಗೂ ಸಂಘಟನೆ, ಸಾರ್ವಜನಿಕ ಸಹಭಾಗಿತ್ವ ಪಡೆದುಕೊಂಡು ಖಾಸಗಿ ಶಾಲೆಗಳಲ್ಲಿ ಸಿಗುವ ಸೌಲಭ್ಯಗಳ ಮಾದರಿ ಸರ್ಕಾರಿ ಶಾಲೆಗಳಲ್ಲೂ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಶಿಕ್ಷಕರ ಸಂಘವು ಅಗತ್ಯ ಸಹಕಾರದೊಂದಿಗೆ ಕಾರ್ಯ ನಿರ್ವಹಿಸಬೇಕು. ಎಲ್ಲಾ ಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಲಾಖೆಯ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡುವಂತೆ ಸಲಹೆ ನೀಡಿದರು.

ಸಂಘಟನೆಯ ಪದಾಧಿಕಾರಿಗಳು ಸಂಘದ ಪ್ರಗತಿ ಜೊತೆಗೆ ಶಾಲೆಗಳ ಪ್ರಗತಿಗೂ, ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಆದ್ಯತೆ ನೀಡಬೇಕು. ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಬೇಕು. ಚುನಾವಣೆಯಲ್ಲಿ ಕಂಡು ಬಂದ ಉತ್ಸಾಹ ಮುಂದಿನ 5 ವರ್ಷದರೆಗೆ ಇಟ್ಟುಕೊಂಡು ಉತ್ತಮ ಸೇವಾ ಚಟುವಟಿಕೆಗಳ ಮೂಲಕ ಕಾರ್ಯ ನಿರ್ವಹಿಸುವಂತೆ ಶುಭ ಕೋರಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ಮಾತನಾಡಿ, ಸಂಘಕ್ಕೆ ಆಯ್ಕೆಯಾದ ಎಲ್ಲರನ್ನೂ ಅಭಿನಂದಿಸುತ್ತೇನೆ. ಶಿಕ್ಷಕರ ಯಾವುದೇ ಸಮಸ್ಯೆಯನ್ನು ಸೂಕ್ತ ರೀತಿ ಬಗೆಹರಿಸುವ ಜೊತೆಗೆ ಶಾಲೆಗಳ ಪ್ರಗತಿಗೂ ಆದ್ಯತೆ ನೀಡಿ. ಶಿಕ್ಷಕರ ಸಮಸ್ಯೆಗಳನ್ನು ಅದಾಲತ್ ಮಾದರಿ ಬಗೆಹರಿಸುವ ಬಗ್ಗೆ ಕೂಡ ಚಿಂತನೆ ಇದೆ. ಸಂಘವನ್ನು ಉತ್ತಮ ರೀತಿಯಲ್ಲಿ ಮುನ್ನಡೆಸುವಂತೆ ಅವರು ಪದಾಧಿಕಾರಿಗಳಿಗೆ ಸಲಹೆ ನೀಡಿದರು.

ಇದೇ ವೇಳೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಪದಾಧಿಕಾರಿಗಾಗಿ ಆಯ್ಕೆಯಾದ ತಿ.ನರಸೀಪುರ ತಾಲೂಕು ಶಾಖೆ ಅಧ್ಯಕ್ಷ ಎ.ಗಜೇಂದ್ರ ಪ್ರಧಾನ ಕಾರ್ಯದರ್ಶಿ ಎನ್.ರೇವಣ್ಣ, ಖಜಾಂಚಿ ಜಿ.ಸಿದ್ದಮ್ಮಲ್ಲಪ್ಪ, ಉಪಾಧ್ಯಕ್ಷ ಸಿ.ಮಹದೇವಸ್ವಾಮಿ, ಅಕ್ಕಮಹಾದೇವಿ, ಸಹ ಕಾರ್ಯದರ್ಶಿ ಸಿ.ಕಿಕ್ಕೇರಿ ಶೆಟ್ಟಿ, ಎಸ್.ನಂದಿನಿ, ಸಂಘಟನಾ ಕಾರ್ಯದರ್ಶಿ ಸಿ.ಸುರೇಶ, ಎಂ.ವೈಜೀನತ್ ಅವರನ್ನು ಅಭಿನಂದಿಸಲಾಯಿತು.

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ನಾಗೇಶ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪುಟ್ಟಸ್ವಾಮಿ, ನಿಕಟ ಪೂರ್ವ ಅಧ್ಯಕ್ಷ ಸುಬ್ಬಣ್ಣ ನಿರ್ದೇಶಕರಾದ ಸುಬ್ರಮಣ್ಯ, ಚಂದ್ರಕಲಾ, ಕುಪ್ಯ ಪುಟ್ಟಸ್ವಾಮಿ, ಶ್ರೀಧರ್ ಉತ್ತಂಬಳ್ಳಿ ನಾಗರಾಜು ಬಿಲಿಗೆರೆ ಹುಂಡಿ ಸಿದ್ದರಾಜು, ಶ್ರೀಧರ್, ಕಲ್ಲುಂದ ಮಹದೇವಸ್ವಾಮಿ, ಚುನಾವಣಾಧಿಕಾರಿ ಪ್ರಕಾಶ್ ಸೇರಿದಂತೆ ಇತರರಿದ್ದರು.

> “ ಶಿಕ್ಷಕರು ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಂಡಿರುವುದು ಉತ್ತಮ ಬೆಳವಣಿಗೆ. ತಾಲೂಕಿನಲ್ಲಿ 800 ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಣ್ಣ ಪುಟ್ಟ ಸಮಸ್ಯೆ ಸಹಜ. ಶಿಕ್ಷಕರು ಶೈಕ್ಷಣಿಕ ಅಭಿವೃದ್ಧಿಗಾಗಿ ವಿಶೇಷ ಕಾರ್ಯಾಗಾರ ಹಮ್ಮಿಕೊಂಡು ಕೆಲಸ ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯೋನ್ಮುಖರಾಗಬೇಕಿದೆ. ತಾಲೂಕಿನಲ್ಲಿ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳು ಉತ್ತಮವಾಗಿ ನಡೆಯಬೇಕಾದರೆ, ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಜವಾಬ್ದಾರಿ ಬಹು ಮುಖ್ಯ.
> – ಸೋಸ್ಲೆ ನಾಗೇಶ್, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹುಟ್ಟುಹಬ್ಬ ಅಂಗವಾಗಿ

ಇಂದು ಬೃಹತ್ ಉದ್ಯೋಗ ಮೇಳ


ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್ ಉದ್ಯೋಗ ಮೇಳ ಸ್ಥಳ ಪರಿಶೀಲಿಸಿದರು.

ಹುಣಸೂರು, ಮೇ 22– ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ 59ನೇ ಹುಟ್ಟುಹಬ್ಬದ ಅಂಗವಾಗಿ ಸ್ನೇಹ ಜೀವಿ ಬಳಗದ ಸಹಯೋಗದಲ್ಲಿ ನಗರದ ಅಂಬೇಡ್ಕರ್ ಭವನದಲ್ಲಿ ಮೇ 23ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಹುಡಾ ಅಧ್ಯಕ್ಷ ಹೆಚ್.ಪಿ.ಅಮರನಾಥ್ ತಿಳಿಸಿದರು.

ಶುಕ್ರವಾರ ಉದ್ಯೋಗ ಮೇಳ ನಡೆಯುವ ಸ್ಥಳ ಪರಿಶೀಲಿಸಿ ಮಾತನಾಡಿದ ಅವರು, ಉದ್ಯೋಗ ಮೇಳವನ್ನು ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ, ಪದವಿ ಪಡೆದ ನಿರುದ್ಯೋಗಿ ಯುವಕ–ಯುವತಿಯರಿಗಾಗಿ ಆಯೋಜಿಸಲಾಗಿದ್ದು, ಮೈಸೂರು, ಹುಣಸೂರು, ಕೆ.ಆರ್.ನಗರ, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ 18ರಿಂದ 30 ವರ್ಷದ ಪುರುಷರು, 18ರಿಂದ 25 ವರ್ಷದ ಯುವತಿಯರು ಭಾಗವಹಿಸಿ ಮೇಳವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಉದ್ಯೋಗ ಮೇಳದಲ್ಲಿ ಭಾಗವಹಿಸುವ ಕಂಪನಿಗಳೇ ನೇರವಾಗಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿದ್ದಾರೆ. ಉದ್ಯೋಗ ಮೇಳದಲ್ಲಿ ಭಾಗವಹಿಸಿದ ಎಲ್ಲರಿಗೂ ತಿಂಡಿ, ಊಟದ ವ್ಯವಸ್ಥೆ ಮಾಡಲಾಗಿದೆ ಎಂದರು.

ಅಭ್ಯರ್ಥಿಗಳು ಉದ್ಯೋಗ ಮೇಳಕ್ಕೆ ಬಂದ ತಕ್ಷಣ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಅಲ್ಲದೇ ಬಯೋಡೆಟಾ ಸೇರಿದಂತೆ ವಿದ್ಯಾರ್ಹತೆಯ ದಾಖಲಾತಿಗಳೊಂದಿಗೆ ಭಾಗವಹಿಸಬೇಕು ಎಂದು ತಿಳಿಸಿದರು.

ಈ ವೇಳೆ ತಾಲೂಕು ಹಿಂದುಳಿದ ವರ್ಗಗಳ ಅಧ್ಯಕ್ಷ ವಿ.ಮಹದೇವ್, ಗ್ರಾಪಂ ಸದಸ್ಯ ನಾಗರಾಜ್, ಸ್ನೇಹಜೀವಿ ಬಳಗದ ಗಣೇಶ್, ಪ್ರದೀಪ್, ನಾಗರಾಜು, ಕಾಂತರಾಜ್, ಮಂಜು ಇತರರಿದ್ದರು.

ಮೇ 25, ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ

ತಿ.ನರಸೀಪುರ, ಮೇ 22– ತಾಲೂಕು ಸರ್ಕಾರಿ ನೌಕರರ ಸಂಘ, ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಮೈಸೂರಿನ ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗದ ಸಹಯೋಗದಲ್ಲಿ ಮೇ 25ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಪಟ್ಟಣದ ಗುರು ಭವನದಲ್ಲಿ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆಗೆ ಅರ್ಹರಾದವರನ್ನು ಆ ದಿನವೇ ಬೆಂಗಳೂರಿಗೆ ಕರೆದೊಯ್ದು ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡಲಾಗುವುದು. ಶಸ್ತ್ರ ಚಿಕಿತ್ಸೆಗೆ ಒಳಪಡುವವರು ತಲಾ 2 ಆಧಾರ್ ಕಾರ್ಡ್, ರೇಷನ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಜೆರಾಕ್ಸ್, ಕಲರ್ ಫೋಟೋ ಸೇರಿದಂತೆ ಫೋನ್ ತರಬೇಕು. ನೇತ್ರ ತಜ್ಞರ ಸಲಹೆಯಂತೆ ಉಚಿತವಾಗಿ ಲೆನ್ಸ್ ಅಳವಡಿಸಲಾಗುವುದು. ಹೆಚ್ಚಿನ ಮಾಹಿತಿಗೆ ಶಿವಶಂಕರ ಮೂರ್ತಿ ಎಂ.ವಿ(9980460685), ಸೋಸಲೆ ನಾಗೇಶ್ (9945656881), ನಾರಾಯಣ ಮೂರ್ತಿ (9164489424), ನಾಗರಾಜು(7892271665) ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಗ್ರಾಮೀಣ ಜಾನಪದ ಕಲೆಗಳು ಇಂದಿಗೂ ಜೀವಂತ

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿಂಡಿಮ ಶಂಕರ್

ಕೆ.ಆರ್.ನಗರ, ಮೇ 22– ನಮ್ಮ ಹಿರಿಯರು ಗ್ರಾಮದಲ್ಲಿ ನಡೆಸುತ್ತಿದ್ದ ತೊಗಲು ಗೊಂಬೆ ಪ್ರದರ್ಶನ ಸೇರಿದಂತೆ ಗ್ರಾಮೀಣ ಜಾನಪದ ಕಲೆಗಳು ಇಂದಿಗೂ ಜೀವಂತವಾಗಿದ್ದು, ಜಾನಪದ ಕಲೆ ಹಾಗೂ ಕಲಾವಿದರನ್ನು ಸರ್ಕಾರ ಮತ್ತು ಕನ್ನಡ ಸಾಹಿತ್ಯಾಭಿಮಾನಿಗಳು ಪ್ರೋತ್ಸಾಹಿಸಬೇಕು ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿಂಡಿಮ ಶಂಕರ್ ತಿಳಿಸಿದರು.


ಕೆ.ಆರ್.ನಗರದಲ್ಲಿ ಕಸಾಪ 115ನೇ ಸಂಸ್ಥಾಪನಾ ದಿನಾಚರಣೆ ನಡೆಯಿತು.

ಪಟ್ಟಣದ ಪುರಸಭೆ ಬಯಲು ರಂಗ ಮಂದಿರದಲ್ಲಿ ಕಸಾಪ 115ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ನಾಡು–ನುಡಿ, ಸಂಸ್ಕೃತಿಯನ್ನು ಇಡೀ ವಿಶ್ವವೇ ಗೌರವಿಸುತ್ತಿರುವುದು ಬಹಳ ಸಂತೋಷದ ವಿಚಾರ. ಆದರೆ ಗ್ರಾಮೀಣ ಭಾಗದ ಜಾನಪದ ಕಲೆ ತೊಗಲು ಗೊಂಬೆ ಪ್ರದರ್ಶನ ನಶಿಸುತ್ತಿರುವುದು ಬೇಸರದ ಸಂಗತಿ. ಕಲೆಯನ್ನೇ ನಂಬಿರುವ ಕುಟುಂಬಗಳ ಬಗ್ಗೆ ಸರ್ಕಾರ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಆಸಕ್ತಿ ವಹಿಸುವಲ್ಲಿ ನಿರ್ಲಕ್ಷ್ಯ ತೋರಿರುವ ಕಾರಣ ಕಲಾವಿದರ ಬದುಕು ಬೀದಿಗೆ ಬಂದಿದೆ. ಕೇಳುವವರು ಯಾರು ಇಲ್ಲದಂತಾಗಿದೆ ಎಂದರು.

ಸುಮಾರು 80 ವರ್ಷಗಳಿಂದ ತಾಲೂಕಿನ ಸಾತಿಗ್ರಾಮದ ಸಂಜೀವಯ್ಯನವರ ಕುಟುಂಬ ತೊಗಲು ಬೊಂಬೆ ಕಲೆ ಪ್ರದರ್ಶಿಸುತ್ತಿದ್ದು, ಅವರ ಪುತ್ರ ನಾಗೇಂದ್ರ, ಪತ್ನಿ ಕಾಮಾಕ್ಷಿ ಇಂದಿಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ ಎಂದರು.

ಶಾಸಕ ಡಿ.ರವಿಶಂಕರ್, ವೈದ್ಯಾಧಿಕಾರಿ ಡಾ.ಡಿ.ನಟರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ರೋಟರಿ ಅಧ್ಯಕ್ಷ ದಯಾನಂದ, ನಗರ ಘಟಕದ ಅಧ್ಯಕ್ಷ ಮೋಹನ್ ಕುಮಾರ್, ಕನ್ನಡ ಜಾನಪದ ಪರಿಷತ್‌ನ ತಿಮ್ಮಶೆಟ್ಟಿ, ಸಾಹಿತ್ಯ ಪರಿಷತ್ ಸಮಿತಿ ಉದಯಕುಮಾರ್ ಇತರರಿದ್ದರು.

ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ವಿತರಣೆ


ಹೆಚ್.ಡಿ.ಕೋಟೆ ತಾಲೂಕು ಕಚೇರಿ ಆವರಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ವಿತರಿಸಿದರು. ಅಲ್ಲದೇ ಮಹಿಳೆಯರಿಗೆ ಶಾಸಕರು ಹೊಲಿಗೆ ಯಂತ್ರ ವಿತರಿಸಿದರು. ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್, ಕಾರ್ಯಕ್ರಮ ನಿರ್ವಹಣಾಧಿಕಾರಿ ಧರ್ಮೇಶ್, ಗಿರಿಜನ ಕಲ್ಯಾಣಾಧಿಕಾರಿ ಮಹೇಶ್, ವಿಶೇಷ ಚೇತನ ತಾಲೂಕು ಸಂಯೋಜಕ ಮಹದೇವಯ್ಯ ಇತರರಿದ್ದರು.

ಆರ್. ಶೀತಲ್‌ಗೆ ಪಿಹೆಚ್.ಡಿ



ಮೈಸೂರು, ಮೇ 22– ಡಾ. ಎನ್.ನಾಗರಾಜ್ ಅವರ ಮಾರ್ಗದರ್ಶನದಲ್ಲಿ ಆರ್.ಶೀತಲ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಸರಸ್ವತಿ ಅಮ್ಮಾಳ್ ನಿಧನ



ಪಿರಿಯಾಪಟ್ಟಣ, ಮೇ 22– ಪಟ್ಟಣದ ಮುತ್ತಯ್ಯ ಬಡಾವಣೆ ನಿವಾಸಿ ದಿ.ನಾರಾಯಣರಾವ್ ಅವರ ಪತ್ನಿ, ಪತ್ರಕರ್ತ ಸಿ.ಎಮ್.ವಿಜಯ್ ಅವರ ತಾಯಿ ಸರಸ್ವತಿ ಅಮ್ಮಾಳ್(84) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಆರೋಗ್ಯ ಇಲಾಖೆಯಲ್ಲಿ ನರ್ಸ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅಂತ್ಯಕ್ರಿಯೆ ಮುತ್ತೂರಿನ ಬಳಿಯ ಮೃತರ ತೋಟದಲ್ಲಿ ನಡೆಯಿತು.

9ನೇ ಪುಟದಿಂದ ಮುಂದುವರೆದ ವರ್ಗೀಕೃತ ಜಾಹೀರಾತು

ನಿರಂಜನ ಗುರು ಮಲ್ಲೇಶ್ವರರ 127ನೇ ಆರಾಧನಾ ಮಹೋತ್ಸವ

ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಆಹ್ವಾನ


ಸಮಾರಂಭಕ್ಕೆ ಸಿಎಂ ಸಿದ್ದರಾಮಯ್ಯ ಅವರನ್ನು ಮಠದ ವತಿಯಿಂದ ಆಹ್ವಾನಿಸಲಾಯಿತು.

ನಂಜನಗೂಡು, ಮೇ 22– ದೇವನೂರು ಗುರು ಮಲ್ಲೇಶ್ವರ ದಾಸೋಹ ಮಠದ ನಿರಂಜನ ಗುರುಮಲ್ಲೇಶ್ವರ ಅವರ 127ನೇ ಆರಾಧನಾ ಮಹೋತ್ಸವದ ಅಂಗವಾಗಿ ನೂತನವಾಗಿ ನಿರ್ಮಿಸಿರುವ ಕಲ್ಯಾಣಿ ಹಾಗೂ ಬಸವನ ಗೋಪುರ ಪ್ರವೇಶ ದ್ವಾರದ ಉದ್ಘಾಟನಾ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಠದ ವತಿಯಿಂದ ಆಹ್ವಾನಿಸಲಾಯಿತು.

ದೇವನೂರು ಬುಲೆಟ್ ಮಹದೇವಪ್ಪ ಮಾತನಾಡಿ, ಜು.1ರಂದು ತಾಲೂಕಿನ ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದ ಆವರಣದಲ್ಲಿ ನಿರಂಜನ ಗುರು ಮಲ್ಲೇಶ್ವರರ 127ನೇ ಆರಾಧನಾ ಮಹೋತ್ಸವ ಜರುಗಲಿದ್ದು, ಈ ವೇಳೆ ಮಠದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಲ್ಯಾಣಿ ಮತ್ತು ಬಸವನ ಗೋಪುರ ಪ್ರವೇಶ ದ್ವಾರದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಉದ್ಘಾಟನೆ ನೆರವೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದ್ದು, ಅವರು ಸಮಾರಂಭದಲ್ಲಿ ಭಾಗಿಯಾಗುವುದಾಗಿ ಹೇಳಿದ್ದಾರೆ. ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಮಠದ ಪರವಾಗಿ ಆಹ್ವಾನಿಸಿದ್ದೇವೆ. ಸಮಾರಂಭದಲ್ಲಿ ನಾಡಿನ ವಿವಿಧ ಮಠದ ಹರ ಗುರು ಚರಮೂರ್ತಿಗಳು ಭಾಗಿಯಾಗಲಿದ್ದಾರೆ ಎಂದರು.

ಈ ವೇಳೆ ಮೈಸೂರಿನ ಚಂದ್ರಶೇಖರ ಸ್ವಾಮೀಜಿ, ಸದಾಶಿವಮೂರ್ತಿ, ನಂಜಪ್ಪ, ರಾಜಶೇಖರ್ ಮೂರ್ತಿ, ಭಾನುಪ್ರಕಾಶ್, ಆನಂದ್, ನಂಜುಂಡಸ್ವಾಮಿ, ಮಣಿ, ಮಂಜುನಾಥ್, ಸಿಂಧುವಳ್ಳಿಪುರ ಮಲ್ಲೇಶ್, ರತ್ನಶೇಖರ್, ಮಾಧು, ಕೆಂಪಣ್ಣ, ರವಿ, ಮಹದೇವಪ್ಪ, ಕೆಂಡಪ್ಪ, ಬಸವರಾಜು, ಗುರು ಸಿದ್ದಪ್ಪ ಪ್ರಕಾಶ್, ಬಸಪ್ಪ ಉಪಸ್ಥಿತರಿದ್ದರು.

ಸಮಾಜ ಸನ್ಮಾರ್ಗದಲ್ಲಿ ಸಾಗಲು ಮಹಾತ್ಮರ ಮಾರ್ಗದರ್ಶನ ಅವಶ್ಯಕ

ನಂಜನಗೂಡು, ಮೇ 22– ಸಮಾಜ ಸನ್ಮಾರ್ಗದಲ್ಲಿ ಸಾಗಲು ಸಾಧು ಸಂತರು ಹಾಗೂ ಮಹಾತ್ಮರ ಮಾರ್ಗದರ್ಶನ ಅವಶ್ಯಕ ಎಂದು ಮಾಜಿ ಶಾಸಕ ಬಿ.ಆರ್.ಪಾಟೀಲ್ ತಿಳಿಸಿದರು.


ಕಾರ್ಯಕ್ರಮವನ್ನು ಮಾಜಿ ಶಾಸಕ ಬಿ.ಆರ್.ಪಾಟೀಲ್ ಉದ್ಘಾಟಿಸಿದರು.

ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ ಕೃತಿ ಕುರಿತು ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರಿಗೆ ಏರ್ಪಡಿಸಿರುವ ಅಧ್ಯಯನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಪರಂಪರೆಯಲ್ಲಿ ಸತ್ಪುರುಷರಿಗೆ ವಿಶೇಷ ಸ್ಥಾನವಿದೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯವನ್ನು ಸಾಧು ಸಂತರು ಮಾಡುತ್ತಿರುತ್ತಾರೆ. ಈ ಶಿಬಿರವು ನಮ್ಮೆಲ್ಲರಿಗೂ ಜ್ಞಾನ ಶಕ್ತಿಯನ್ನು ನೀಡುತ್ತದೆ.ಇದನ್ನು ಆಯೋಜನೆ ಮಾಡಿರುವ ಶ್ರೀಗಳ ಕಾರ್ಯ ಸದಾ ಸ್ಮರಣೀಯವಾದುದು ಎಂದರು.

ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮಾತನಾಡಿ, ಮಾನವೀಯ ಮೌಲ್ಯಗಳಿಂದ ಕೂಡಿರುವ ಸಮಾಜ ನಿರ್ಮಾಣ ಮಾಡಬೇಕು. ಭಾರತೀಯ ಪರಂಪರೆಗೆ ಅತ್ಯುತ್ತಮ ಹಿನ್ನೆಲೆ ಇದೆ. ವಿಜ್ಞಾನ ಮತ್ತು ತತ್ವಜ್ಞಾನವನ್ನು ಸಮನ್ವಯ ಗೊಳಿಸಿಕೊಳ್ಳಬೇಕು. ಶ್ರೀಮಠದ ದಾಸೋಹ ಸೇವೆಯು ಸರ್ವ ದಿಕ್ಕುಗಳಲ್ಲಿ ಪಸರಿಸಿದೆ. ಅನ್ನ, ಆರೋಗ್ಯ, ಸಂಸ್ಕೃತಿ, ಆಧ್ಯಾತ್ಮಿಕತೆ, ವಿದ್ಯೆ, ಜ್ಞಾನ ಹಾಗೂ ಜನ ಜಾಗೃತಿ ಇವೇ ಮೊದಲಾದ ಸಾಮಾಜಿಕ, ಧಾರ್ಮಿಕ ಸೇವೆಯನ್ನು ಇಡೀ ನಾಡಿಗೆ ನೀಡುತ್ತಿದೆ. ವಿವೇಕ ಚಿಂತಾಮಣಿ ಗ್ರಂಥವು ವಿಶ್ವಕೋಶವಾಗಿದೆ ಎಂದರು.

ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಕೆ. ಅನಂತ ರಾಮು ಮಾತನಾಡಿ, ಭಾರತೀಯ ಸಂಸ್ಕೃತಿಯು ಋಷಿಮುನಿಗಳಿಂದ ಬೆಳೆದ ಸಂಸ್ಕೃತಿಯಾಗಿದೆ. ಈ ಶಿಬಿರವು ಆಧ್ಯಾತ್ಮಿಕ ಸಂಪತ್ತನ್ನು ನೀಡುತ್ತದೆ. ನಿಜಗುಣ ಶಿವಯೋಗಿಗಳು ಕವಿಗಳು, ವಿದ್ವಾಂಸರು, ವೇದಶಾಸ್ತ್ರ ಪಂಡಿತರು ಹಾಗೂ ಬ್ರಹ್ಮಜ್ಞಾನಿಗಳಾಗಿದ್ದರು. ಇವರ ವಿವೇಕ ಚಿಂತಾಮಣಿಯು ಮೇರು ಆಧ್ಯಾತ್ಮಿಕ ಗ್ರಂಥವಾಗಿದೆ. ಜ್ಞಾನ ವಿಷಯದಲ್ಲಿ ಜ್ಞಾನರತ್ನವೇ ಆಗಿದೆ. ವೇದ, ಶಾಸ್ತ್ರ ಪುರುಷಾರ್ಥ ಹಾಗೂ ಇತಿಹಾಸ ಹಿಂದೂ ಧರ್ಮದ ಆಧಾರ ಸ್ತಂಭಗಳಾಗಿದ್ದು, ಇವುಗಳನ್ನು ಈ ಗ್ರಂಥದಲ್ಲಿ ಕಾಣಬಹುದಾಗಿದೆ ಎಂದರು.

ಘೊಡಗೇರಿಯ ಶಿವಾನಂದ ಮಠದ ಶ್ರೀಮಲ್ಲಯ್ಯ ಸ್ವಾಮೀಜಿ ಮಾತನಾಡಿ, ಹೂವು ತನ್ನ ಪರಿಮಳವನ್ನು ಜಗತ್ತಿಗೆ ಹರಡುವಂತೆ ನಮ್ಮ ಬದುಕು ಸಮಾಜಕ್ಕೆ ಸಮರ್ಪಣೆಯಾಗಬೇಕು. ವಿವೇಕ ಚಿಂತಾಮಣಿ ಗ್ರಂಥವು ಶ್ರೇಷ್ಠ ಗ್ರಂಥವಾಗಿದ್ದು, ಇದುವರೆಗೆ ಯಾರೂ ಇದರ ಕುರಿತು ವ್ಯಾಖ್ಯಾನ ಗ್ರಂಥವನ್ನು ರಚಿಸಿಲ್ಲ ಎಂದರು.

ಚಿಲಕವಾಡಿಯ ಶ್ರೀಗುರುರಾಮಯೋಗೀಶ್ವರ ಮಠದ ಶ್ರೀಇಮ್ಮಡಿ ಗುರುಲಿಂಗ ಸ್ವಾಮೀಜಿಗಳು ಇಂತಹ ಅಧ್ಯಯನ ಶಿಬಿರ ಅವಶ್ಯಕ. ಈ ಶಿಬಿರದ ಸದುಪಯೋಗವನ್ನು ಎಲ್ಲರೂ ಪಡೆಯಬೇಕು. ನಿಜಗುಣ ಶಿವಯೋಗಿಗಳು ಲೋಕ ಕಲ್ಯಾಣಕ್ಕಾಗಿ ಹಲವಾರು ಗ್ರಂಥಗಳನ್ನು ರಚನೆ ಮಾಡಿ ಆಧ್ಯಾತ್ಮಿಕ ಚಿಂತನೆಗಳನ್ನು ನೀಡಿದ್ದಾರೆ ಎಂದರು.

ಮಾಜಿ ಸಂಸದ ಡಾ.ಐ.ಜಿ.ಸನದಿ ಮಾತನಾಡಿದರು. ಎಸ್.ಶಾಂತಾ ಪ್ರಾರ್ಥಿಸಿದರು.

ರೈತರು ರೇಷ್ಮೆ ಕೃಷಿ ಕೈಗೊಳ್ಳಲು ವ್ಯಾಪಕ ಪ್ರಚಾರ ಕೈಗೊಳ್ಳಿ

ಸಾಮಾನ್ಯ ಸಭೆಯಲ್ಲಿ ತಾಪಂ ಆಡಳಿತಾಧಿಕಾರಿ ಸಿದ್ದಗಂಗಮ್ಮ ಸೂಚನೆ

ಹುಣಸೂರು, ಮೇ 22– ತಾಲೂಕಿನಲ್ಲಿ ತಂಬಾಕು ಬೆಳೆಗೆ ಪರ್ಯಾಯವಾಗಿ ರೈತರು ರೇಷ್ಮೆ ಕೃಷಿ ಕೈಗೊಳ್ಳಲು ಹಳ್ಳಿಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ನಗರದ ತಾಪಂ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್ ಅವರಿಗೆ ತಾಪಂ ಆಡಳಿತಾಧಿಕಾರಿ ಸಿದ್ದಗಂಗಮ್ಮ ಹಾಗೂ ಇಓ ಹೊಂಗಯ್ಯ ಸೂಚಿಸಿದರು.


ಹುಣಸೂರಲ್ಲಿ ತಾಪಂ ಸಾಮಾನ್ಯ ಸಭೆ ನಡೆಯಿತು.

ಇದಕ್ಕೆ ಪ್ರತಿಕ್ರಿಯಿಸಿದ ಮಾದೇಶ್ ತಾಲೂಕಿನ 328 ರೈತರು 174 ಹೆಕ್ಟರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದು, ಇದೀಗ ಹೊಸದಾಗಿ 15 ರೈತರು ರೇಷ್ಮೆ ಕೃಷಿಗೆ ಮುಂದಾಗಿದ್ದಾರೆ. ಇಲಾಖೆ ವತಿಯಿಂದ ಬೆಳೆ ಬೆಳೆಯಲು ಚಾಕಿಯಿಂದ ಹಿಡಿದು ಸಲಕರಣೆ ಖರೀದಿ, ಹುಳು ಸಾಕಾಣೆ ಮನೆ, ಗೂಡಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ರೇಷ್ಮೆ ಗೂಡಿಗೆ ಉತ್ತಮ ಬೆಲೆ ಸಿಗುತ್ತಿದ್ದು, ಇಲಾಖೆ ವತಿಯಿಂದ ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ರೇಷ್ಮೆ ಕೃಷಿ ಕೈಗೊಳ್ಳುವಂತೆ ಪ್ರಚಾರ ನಡೆಸಲು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಕ್ರಮ ವಹಿಸಲಾಗುವುದು ಎಂದರು.

ಭವನ, ಅಂಗನವಾಡಿ ಕಟ್ಟಡ ಪೂರ್ಣಗೊಳಿಸಿ: ಭೂಸೇನಾ ನಿಗಮದಿಂದ ತಾಲೂಕಿನಾದ್ಯಂತ ನಿರ್ಮಿಸುತ್ತಿರುವ ಅಂಬೇಡ್ಕರ್, ಜಗಜೀವನರಾಂ ಭವನಗಳು ಹಾಗೂ ವಿವಿಧ ಹಾಡಿಗಳಲ್ಲಿ ನಿರ್ಮಿಸುತ್ತಿರುವ ಅಂಗನವಾಡಿ ಕಟ್ಟಡಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವಂತೆ ತಾಪಂ ಆಡಳಿತಾಧಿಕಾರಿ ಸೂಚಿಸಿದರು.

ಭೂಸೇನಾ ನಿಗಮದ ಇಂಜಿನಿಯರ್ ಮಾತನಾಡಿ, ಅಂಬೇಡ್ಕರ್ ಭವನಕ್ಕೆ ಹಣ ಮಂಜೂರಾಗಿದ್ದರೂ, ಹಲವೆಡೆ ದೊಡ್ಡ ಮಟ್ಟದ ಭವನ ಬೇಕೆಂಬ ಒತ್ತಾಯವಿದೆ. ಈ ಸಂಬಂಧ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಇನ್ನು ಭವನಗಳು ಹಾಗೂ ಅಂಗನವಾಡಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸೆಸ್ಕ್‌ನವರು ಇ–ಸ್ವತ್ತು ದಾಖಲಾತಿ ಕೇಳುತ್ತಿದ್ದಾರೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಆಡಳಿತಾಧಿಕಾರಿ ಇವು ಸರ್ಕಾರದ ಆಸ್ತಿಯಾಗಿರುವುದರಿಂದ ಡಿಮ್ಯಾಂಡ್ ಪಡೆದು ಅನುಮತಿ ನೀಡುವಂತೆ ಚೆಸ್ಕಾಂ ಎಇಇಗೆ ಸೂಚಿಸಿದರು.

ಗರ್ಭಕಂಠ ಕ್ಯಾನ್ಸರ್ ಲಸಿಕೆಗೆ ಜಾಗೃತಿ ಮೂಡಿಸಿ: ಆರೋಗ್ಯ ಇಲಾಖೆ ಗರ್ಭಕಂಠದ ಕ್ಯಾನರ್ಸ್ ಲಸಿಕೆಯನ್ನು 14ರಿಂದ 15ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಉಚಿತವಾಗಿ ನೀಡುತ್ತಿದೆ. ತಾಲೂಕಿಗೆ ನಿಗದಿಪಡಿಸಿರುವ 2170 ಗುರಿಗೆ 885 ಮಕ್ಕಳು ಮಾತ್ರ ಲಸಿಕೆ ಹಾಕಿಸಿಕೊಂಡಿದ್ದು, 147 ಮಂದಿ ಲಸಿಕೆ ತಿರಸ್ಕರಿಸಿದ್ದಾರೆ ಎಂಬ ಪ್ರಭಾರ ಟಿಹೆಚ್‌ಓ ಡಾ. ರವಿಕುಮಾರ್ ಅವರ ಮಾಹಿತಿಗೆ ಈ ಬಗ್ಗೆ ಶಾಲೆಗಳಲ್ಲಿ ಶಿಕ್ಷಕರ ಮೂಲಕ ಮಕ್ಕಳಿಗೆ ಹಾಗೂ ಪೋಷಕರಿಗೆ ಜಾಗೃತಿ ಮೂಡಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವಂತೆ ಬಿಇಓ ಕಾಳನಾಯಕ ಅವರಿಗೆ ಆಡಳಿತಾಧಿಕಾರಿ ಸೂಚಿಸಿದರು.

ರಸಗೊಬ್ಬರಕ್ಕೆ ಎಫ್‌ಐಡಿ ಕಡ್ಡಾಯ: ಈ ಬಾರಿ ಮುಂಗಾರು ವಿಫಲವಾಗಿದ್ದು, ಮಳೆ ಪ್ರಮಾಣ ಕಡಿಮೆಯಾಗುವ ಬಗ್ಗೆ ಹವಾಮಾನ ಇಲಾಖೆಯಿಂದ ಮಾಹಿತಿ ಬಂದಿದೆ. ಶೇ.60ರಷ್ಟು ವಾಡಿಕೆ ಮಳೆ ಕೊರತೆಯಾಗಿದೆ. ಬಿತ್ತನೆ ಪ್ರಮಾಣವೂ ಇಳಿಮುಖವಾಗಿದೆ. ಸಾಕಷ್ಟು ಬಿತ್ತನೆ ಬೀಜ ದಾಸ್ತಾನಿದೆ. ರೈತರು ರಸಗೊಬ್ಬರ ಪಡೆಯಲು ಕಡ್ಡಾಯವಾಗಿ ಎಫ್‌ಐಡಿ ನೀಡಬೇಕು. ಈ ಬಗ್ಗೆ ರಸಗೊಬ್ಬರದ ಅಂಗಡಿಗಳಿಗೂ ಸೂಚಿಸಲಾಗಿದೆ. ತಂಬಾಕು ಬೆಳೆ ವಿಸ್ತೀರ್ಣ ಕಡಿಮೆಯಾಗುತ್ತಿದ್ದು, ಮುಸುಕಿನ ಜೋಳದ ಕಡೆಗೆ ರೈತರು ವಾಲುತ್ತಿದ್ದಾರೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಅನಿಲ್ ಕುಮಾರ್ ತಿಳಿಸಿದರು.

ಈ ವೇಳೆ ಚೆಸ್ಕಾಂ, ಅರಣ್ಯ, ಸಹಕಾರ, ಪರಿಶಿಷ್ಟ ವರ್ಗ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತೋಟಗಾರಿಕೆ, ಪಶು ಸಂಗೋಪನೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು. ಸಹಾಯಕ ನಿರ್ದೇಶಕ ರಾಜೇಶ್, ಲೆಕ್ಕಾಧಿಕಾರಿ ಹರಿಣಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಮ್ಯಾಟ್ರಿಮೊನಿ ವೆಬ್‌ಸೈಟ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿ ಸಹಾಯ ಮಾಡುವ ಸೋಗಿನಲ್ಲಿ ಅಮಾಯಕರಿಗೆ ವಂಚನೆ


ಮೈಸೂರಿನ ಖತರ್ನಾಕ್ ತಾಯಿ–ಮಗ ಪರಾರಿ; ಈತನ ಬಾಡಿಗೆ ಬಂಗಲೆ ನೋಡಿ ಬೇಸ್ತು ಬಿದ್ದರು!; ಬೆಂಗಳೂರು ಮೂಲದ ಉದ್ಯಮಿ ಮಗಳ ಮದುವೆಗೆ ಯತ್ನ; ಬಣ್ಣ ಬಯಲಾಗಿ ವಿವಾಹ ರದ್ದು

ಮೈಸೂರು, ಮೇ 22(ವಿವಿಹೆಚ್)– ಮ್ಯಾಟ್ರಿಮೊನಿ ವೆಬ್‌ಸೈಟ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿ, ತಾನು ದೊಡ್ಡ ವಕೀಲ ಎಂದು ಬಿಂಬಿಸಿಕೊಂಡು ಬೆಂಗಳೂರು, ಮೈಸೂರು ಮೂಲದ ಶ್ರೀಮಂತ ಮನೆತನದ ಅಮಾಯಕ ಹೆಣ್ಣು ಮಕ್ಕಳು, ವಿಧವೆಯರು ಸೇರಿದಂತೆ ಮುಗ್ಧರಿಗೆ ಲಕ್ಷಾಂತರ ರೂಪಾಯಿ ವಂಚಿಸಿರುವ ಖತರ್ನಾಕ್ ತಾಯಿ–ಮಗ ಈಗ ಪರಾರಿಯಾಗಿದ್ದಾರೆ. ಅಲ್ಲದೇ ಈತನ ಮಾತಿಗೆ ಮರುಳಾಗಿ ಮಗಳ ಕೊಟ್ಟು ಮದುವೆ ಮಾಡಲು ಮುಂದಾಗಿದ್ದ ಬೆಂಗಳೂರು ಉದ್ಯಮಿ ಮದುವೆಯನ್ನೇ ಕೈಬಿಟ್ಟಿದ್ದಾರೆ.

ಮೈಸೂರಿನ ಸಾತಗಳ್ಳಿಯ 'ಬಿ' ಬ್ಲಾಕ್ ಡಿಟಿಎಸ್ ರಾವ್ ಲೇಔಟ್‌ನಲ್ಲಿ ಭವ್ಯ ಬಂಗಲೆ ಬಾಡಿಗೆಗೆ ಪಡೆದು ವಾಸಿಸುತ್ತಿರುವ ಆರೋಪಿ ಪ್ರದೀಪ್ ಸೊಲೊಮನ್, ಮ್ಯಾಟ್ರಿಮೋನಿಯಲ್ ಸೈಟ್‌ಗಳಲ್ಲಿ 'ಡಾ. ಪ್ರದೀಪ್ ಸೋಲೋಮನ್.ಜೆ' ಹೆಸರಿನಲ್ಲಿ ಹೈ–ಫೈ ಪ್ರೊಫೈಲ್ ತೆರೆದು, ತಾವು ಭಾರೀ ಶ್ರೀಮಂತರು ಎಂಬಂತೆ ಸಮಾಜದಲ್ಲಿ ಬಿಲ್ಡಪ್ ಕೊಡುತ್ತಿದ್ದನು. ಜೊತೆಗೆ ಸಾತಗಳ್ಳಿಯ ಡಿಪೋ ಬಳಿ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಕಟ್ಟಡದ ನೆಲಮಾಳಿಗೆಯಲ್ಲಿ ವಕೀಲ ಹಾಗೂ ನೋಟರಿ ಕಚೇರಿ ತೆರೆದಿದ್ದನು. ಅವನ ಐಷಾರಾಮಿ ಬಂಗಲೆ ಮತ್ತು ಹೈ ಲೈಫ್‌ಸ್ಟೈಲ್, ಜೊತೆಗೆ ಇವರ ಮಾತಿಗೆ ಮರುಳಾದವರ ಬಲೆಗೆ ಬೀಳಿಸಿಕೊಳ್ಳುತ್ತಿದ್ದ. ಮಗನ ಈ ವಂಚನೆ ಆಟಕ್ಕೆ ತಾಯಿ ಕಲಾವತಿ ಕೂಡ ಸಾಥ್ ನೀಡಿದ್ದಳು.



ಜನನಿಬಿಡ ಪ್ರದೇಶದಲ್ಲಿರುವ ಆರೋಪಿಯ ಒಂಟಿ ಮನೆ



ಶಾದಿ ಡಾಟ್ ಕಾಂನಲ್ಲಿರುವ ಫೇಕ್ ಪ್ರೊಫೈಲ್‌ಗಳು

ನಡೆಯಬಹುದಾದ ದೊಡ್ಡ ಅವಘಡ ತಪ್ಪಿಸಿದ ಇಮ್ರಾನ್: ಮೈಸೂರಿನ ಸಾತಗಳ್ಳಿ ನಿವಾಸಿ, ಮುಸ್ಲಿಂ ಮಹಿಳೆಯೊಬ್ಬರ ವಿಶ್ವಾಸ ಗಳಿಸಿ ಅವರ ಬಳಿ ಸುಮಾರು 7 ಲಕ್ಷ ರೂ. ಹಣ ಪಡೆದು, ಒಂದೆರಡು ತಿಂಗಳಾದರೂ ಹಣ ನೀಡದೇ ಅವರಿಗೆ ಬೆದರಿಕೆ ಹಾಕಿದ್ದಾನೆ. ಪ್ರದೀಪ್ ದರ್ಪಕ್ಕೆ ಬೆದರಿದ ಮಹಿಳೆ ತನ್ನ ಅಣ್ಣ ಇಮ್ರಾನ್ ಬಳಿ ನಡೆದಿದ್ದೆಲ್ಲವನ್ನು ವಿವರಿಸಿದ್ದಾರೆ.

ಮಾಹಿತಿ ಪಡೆದ ಇಮ್ರಾನ್, ಪ್ರದೀಪ್‌ವೊಂದಿಗೆ ಮಾತನಾಡಿದಾಗ, ವ್ಯತಿರಿಕ್ತವಾಗಿ ಮಾತನಾಡಿ, ಬೆದರಿಕೆ ಹಾಕಿದ್ದಾನೆ. ಇದರಿಂದ ಕೋಪಗೊಂಡ ಇಮ್ರಾನ್, ಆತನ ಮೇಲೆ ಕಾನೂನಾತ್ಮಕ ಕ್ರಮಕ್ಕೆ ಮುಂದಾಗಿದ್ದಾರೆ.

ಪ್ರದೀಪ್ ಅವರ ಕಚೇರಿ ಬಳಿ ನೊಂದ ಸಂತ್ರಸ್ತರು ಬರುವುದನ್ನು ಗಮನಿಸಿದ ಇಮ್ರಾನ್, ಪ್ರತಿಯೊಬ್ಬರಿಂದಲೂ ಮಾಹಿತಿಯನ್ನು ಕಲೆಹಾಕಿದ್ದಾರೆ. ಲಕ್ಷ–ಲಕ್ಷ ಹಣ ಕಳೆದುಕೊಂಡ ಸಂತ್ರಸ್ತರು, ತಮಗಾದ ಮೋಸದ ಬಗ್ಗೆ ವಿವರಿಸಿದ್ದಾರೆ. ಈ ಎಲ್ಲಾ ಮಾಹಿತಿ ತಿಳಿಯುವ ವೇಳೆಗೆ ಬೆಂಗಳೂರಿನ ಖ್ಯಾತ ಉದ್ಯಮಿ ಮಗಳೊಂದಿಗೆ ಪ್ರದೀಪ್ ಸೊಲೊಮನ್ ಜೊತೆ ಮದುವೆ ನಿಶ್ಚಯವಾಗಿದೆ ಎಂಬುದನ್ನು ತಿಳಿದು, ಆಕೆಯ ತಂದೆಗೆ ಎಲ್ಲಾ ಮಾಹಿತಿಯನ್ನು ನೀಡಿದ್ದಾರೆ.

ಮೊದಲಿಗೆ ಇದನ್ನು ನಂಬದ ಉದ್ಯಮಿ, ಖುದ್ದು ಮೈಸೂರಿಗೆ ಭೇಟಿ ನೀಡಿ, ವಂಚನೆಗೊಳಗಾದ ಸಂತ್ರಸ್ತರನ್ನು ಭೇಟಿಯಾಗಿ, ಮಾಹಿತಿ ಪಡೆದು, ತಕ್ಷಣ ಮದುವೆ ನಿಲ್ಲಿಸಿದ್ದಾರೆ. ತಮ್ಮ ಆಸ್ತಿಗಾಗಿ ಮಗಳನ್ನು ಬಲೆಗೆ ಹಾಕಿಕೊಳ್ಳಲು ಮುಂದಾಗಿರುವುದನ್ನು ತಿಳಿದ ಉದ್ಯಮಿ, ಈ ವಂಚನೆ ಜಾಲದ ಸೂತ್ರಧಾರ ಪ್ರದೀಪ್ ಸೋಲೋಮನ್ ಹಾಗೂ ಆತನಿಗೆ ಸಾಥ್ ನೀಡಿದ ತಾಯಿ ಕಲಾವತಿ ವಿರುದ್ಧ ಬೆಂಗಳೂರಿನ ಅಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಮಾಹಿತಿ ತಿಳಿದ ಖತರ್ನಾಕ್ ತಾಯಿ–ಮಗ ಈಗ ಎಸ್ಕೇಪ್ ಆಗಿದ್ದಾರೆ.

ಬೆಂಗಳೂರಿನ ಅಡುಗೋಡಿ ಠಾಣಾ ಪೊಲೀಸರು, ಈ ಖತರ್ನಾಕ್ ತಾಯಿ–ಮಗನ ಮೈಸೂರು ಮನೆಗೆ ಭೇಟಿ ನೀಡಿದ್ದಾರೆ. ಇತ್ತ ಪ್ರದೀಪ್‌ನಿಂದ ಮೋಸ ಹೋದ ಮೈಸೂರು ಮತ್ತು ಬೆಂಗಳೂರಿನ ಹಲವು ಯುವತಿಯರು ಹಾಗೂ ಅವರ ಕುಟುಂಬಸ್ಥರು ಈಗ ಮೈಸೂರಿನ ಆ ಬಂಗಲೆಯ ಮುಂದೆ ಬಂದು ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ. ಅವರನ್ನು ಸಂಪರ್ಕಿಸಿದ ಅಡುಗೋಡಿ ಪೊಲೀಸರು ನ್ಯಾಯ ಕೊಡಿಸುವ ಭರವಸೆ ನೀಡಿದ್ದಾರೆ. ಈ ಮಧ್ಯೆ ಪೊಲೀಸರು ಈ ಮನೆ ಮುಂದೆ ನೋಟೀಸ್ ಅಂಟಿಸಿ, ವಿಚಾರಕ್ಕೆ ಬರುವಂತೆ ಸೂಚಿಸಿದ್ದಾರೆ.

ಬೆಂಗಳೂರಿನ ಉದ್ಯಮಿ ಹೇಳುವುದೇನು?: ಶಾದಿ ಡಾಟ್ ಕಾಂ ನಲ್ಲಿ ವಿವಿಐಪಿ ಪ್ರೊಫೈಲ್ ಅಕೌಂಟ್ ಕ್ರಿಯೇಟ್ ಮಾಡಿದ್ದೆವು. ನಮ್ಮಂತೆಯೇ ಪ್ರದೀಪ್ ಕೂಡ ಪ್ರೊಫೈಲ್ ಕ್ರಿಯೇಟ್ ಮಾಡಿದ್ದನು. ತಾನು ಕಾನೂನು ಪದವಿ, ಪಿಹೆಚ್‌ಡಿ ಮಾಡಿದ್ದೇನೆ, ಮುಂದೆ ಜಡ್ಜ್ ಆಗುವುದಾಗಿ ಹೇಳಿದ್ದನು. ಇದನ್ನು ನಂಬಿ ನಾವು ಮದುವೆ ನಿಶ್ಚಯ ಮಾಡಿದ್ದೆವು. ತಲಾ 600 ರೂ ಬೆಲೆ ಬಾಳುವ 500 ಲಗ್ನ ಪತ್ರಿಕೆಯನ್ನು ಮುದ್ರಿಸಿಕೊಟ್ಟಿದ್ದೆವು. ಮದುವೆಗೂ ಮುನ್ನವೇ ಆತನನ್ನು ನಂಬಿ 89 ಲಕ್ಷ ರೂ. ಖರ್ಚು ಮಾಡಿದ್ದೆವು.

ಆದರೆ ಮೈಸೂರಿನ ಇಮ್ರಾನ್ ಅವರಿಂದ ಪ್ರದೀಪ್‌ನ ಮೋಸದ ಜಾಲ ಹೊರಬಂದಿತು. ಮದುವೆ ಹಂತದಲ್ಲಿಯೇ ಸಂಬಂಧ ಮುರಿದು ಬಿದ್ದಿದ್ದು ಒಳ್ಳೆಯದೇ ಆಯಿತು. ಪ್ರದೀಪ್ ಇದೇ ರೀತಿ ಹಲವಾರು ಯುವತಿಯರು, ವಿಧವೆಯರು, ಅಮಾಯಕರಿಗೆ ಮೋಸ ಮಾಡಿ ಲಕ್ಷ–ಲಕ್ಷ ಹಣ ಲಪಟಾಯಿಸಿದ್ದಾನೆ. ಹೆಣ್ಣು ಮಕ್ಕಳ ಜೀವನವನ್ನು ಹಾಳು ಮಾಡಿ, ಬ್ಲಾಕ್‌ಮೇಲ್ ಮೂಲಕ ಹಣ ಪಡೆದು ಬದುಕುವ ಚಾಳಿ ಇರುವ ಈತನಿಗೆ ತಕ್ಕ ಶಾಸ್ತಿಯಾಗಬೇಕು ಎಂದು ಕಣ್ಣೀರಿಟ್ಟಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೃಶ್ಯಂ–3 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕರುಪ್ಪು (ತ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ದೃಶ್ಯಂ–3 (ಕ)	4 ಪ್ರದರ್ಶನಗಳು
ಲಿಡೋ	
ಕೋಟಿಗೊಬ್ಬ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಕಟ್ಟೆಮಳಲವಾಡಿ ವ್ಯಾಪ್ತಿಯಲ್ಲಿ 66 ಕೆವಿ ವಿದ್ಯುತ್ ಮಾರ್ಗ ಚಾಲನೆ; ಸಾರ್ವಜನಿಕರಿಗೆ ಸೆಸ್ಕ್ ಎಚ್ಚರಿಕೆ

ಮೈಸೂರು, ಮೇ 22– ಮೈಸೂರು ಯೋಜನೆ ವಿಭಾಗದ ಹುಣಸೂರು ತಾಲೂಕು, ಕಟ್ಟೆಮಳಲವಾಡಿ ಗ್ರಾಮದಲ್ಲಿ ನೂತನವಾಗಿ ವಿದ್ಯುತ್ ಪ್ರಸರಣ ಮಾರ್ಗವನ್ನು ನಿರ್ಮಾಣ ಮಾಡುತ್ತಿದ್ದು, ಸದರಿ ವಿದ್ಯುತ್ ಮಾರ್ಗಗಳನ್ನು ಮೇ 24 ರ ನಂತರ ಯಾವುದೇ ದಿನಾಂಕದಂದು ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

ಇಲವಾಲ–ಹುಣಸೂರು ವಿದ್ಯುತ್ ಮಾರ್ಗದಿಂದ ಸಂಪರ್ಕಗೊಂಡು ಕಟ್ಟೆ ಮಳಲವಾಡಿ ಗ್ರಾಮಗಳ ಎಲ್ಲೆಯಲ್ಲಿ ಹಾದು ಹೋಗಿ ನೂತನವಾಗಿ ನಿರ್ಮಾಣವಾಗಿರುವ 66/11 ಕಟ್ಟೆಮಳಲವಾಡಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಪ್ರವಹಿಸಲಾಗುತ್ತದೆ.

ಆದ್ದರಿಂದ ಸಾರ್ವಜನಿಕರು ವಿದ್ಯುತ್ ಗೋಪುರಗಳಿಗೆ ದನಕರುಗಳನ್ನು ಕಟ್ಟುವುದಾಗಲಿ, ಲೋಹದ ಪಟ್ಟಿಯನ್ನು ತೆಗೆಯುವುದಾಗಲಿ, ಗೋಪುರಗಳನ್ನು ಹತ್ತುವುದಾಗಲಿ, ತಂತಿಗಳನ್ನು ಮುಟ್ಟುವುದಾಗಲಿ, ಗೋಪುರಗಳ ಕೆಳಗಡೆ ಮರ ಗಿಡಗಳನ್ನು ನೆಡುವುದಾಗಲಿ ಗೋಪುರಗಳಿಗೆ ಬೆಳ್ಳಿ ಮತ್ತು ಹಗ್ಗ ಮುಂತಾದುವುಗಳನ್ನು ಎಸೆಯುವುದಾಗಲಿ, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದಾಗಲೀ ಮಾಡುವುದು ತುಂಬಾ ಅಪಾಯಕಾರಿ ಹಾಗೂ ಪ್ರಾಣ ಹಾನಿಯಾಗುತ್ತದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಈ ಸೂಚನೆಯನ್ನು ಉಲ್ಲಂಘಿಸಿದಲ್ಲಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣ ಹಾನಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಜವಾಬ್ದಾರರಲ್ಲ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಮಾವು ಮೇಳದಲ್ಲಿ 100 ಟನ್ ಮಾವು, 300 ಕೆ.ಜಿ ಜೇನುತುಪ್ಪ ಮಾರಾಟ!

ಒಟ್ಟಾರೆ 35 ಲಕ್ಷ ವಹಿವಾಟು ದಾಖಲು



ಮಾವು ಮೇಳದಲ್ಲಿ ಗಿಡಗಳನ್ನು ಖರೀದಿಸುತ್ತಿರುವುದು.

ಮೈಸೂರು, ಮೇ 22(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿದ್ದ ಮಾವು ಮೇಳದಲ್ಲಿ 100 ಟನ್ ಮಾವು, 300 ಕೆಜಿ ಜೇನುತುಪ್ಪ ಮಾರಾಟವಾಗಿದ್ದು, 35 ಲಕ್ಷ ವಹಿವಾಟು ನಡೆದಿದೆ ಎಂದು ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಅಂಗಡಿ ತಿಳಿಸಿದ್ದಾರೆ.

ತೋಟಗಾರಿಕಾ ಇಲಾಖೆಯಿಂದ ಆಯೋಜಿಸಿದ್ದ ಮಾವು ಮತ್ತು ಜೇನು ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 28 ಮಳಿಗೆಗಳಲ್ಲಿ ವಿವಿಧ ಬಗೆಯ ಮಾವಿನಹಣ್ಣುಗಳನ್ನು ರೈತರು ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿತ್ತು. ಎರಡು ಮಳಿಗೆಯಲ್ಲಿ ಜೇನುತುಪ್ಪ ಮಾರಾಟ ಮಾಡಲು ಅವಕಾಶ ನೀಡಲಾಗಿತ್ತು. ಮಾವು ಮಳಿಗೆಯಲ್ಲಿ ಒಟ್ಟು 100 ಟನ್ ಮಾವಿನ ಹಣ್ಣು, 300 ಕೆಜಿ ಜೇನುತುಪ್ಪ ಮಾರಾಟವಾಗಿದೆ ಎಂದರು.

ಗಿಡಗಳಿಗೆ ಬೇಡಿಕೆ: ಮಾವು ಮತ್ತು ಜೇನು ಮೇಳದಲ್ಲಿ ತೋಟಗಾರಿಕಾ ಇಲಾಖೆಯ ವಿವಿಧ ನರ್ಸರಿಯಲ್ಲಿ ಬೆಳೆದ ಹೂವು, ಹಣ್ಣು, ಅಲಂಕಾರಿಕ ಗಿಡಗಳ ಮಾರಾಟ ಹೆಚ್ಚಾಗಿದೆ. 2–3 ಸಾವಿರ ಗಿಡಗಳು ಮಾರಾಟವಾಗಿವೆ. ಮಾವು, ಹಲಸು, ಸೀಬೆ, ಸಪೋಟ, ಕರಿಬೇವು, ನುಗ್ಗೆ ಹಾಗೂ ಅಲಂಕಾರಿಕ ಗಿಡಗಳು ಮಾರಾಟವಾಗಿವೆ ಎಂದು ವಿವರಿಸಿದ್ದಾರೆ.

ಉಚಿತ ಗಿಡಗಳ ವಿತರಣೆಗೆ ಅರ್ಜಿ ಆಹ್ವಾನ

ಮೈಸೂರು,ಮೇ 22–ಮೈಸೂರಿನ ಎಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ 15 ಸಾವಿರಕ್ಕೂ ಹೆಚ್ಚು ಗಿಡಗಳನ್ನು ವಿತರಿಸಲು ಸಿದ್ಧತೆ ನಡೆಸಲಾಗಿದ್ದು, ಸಸಿಗಳನ್ನು ಪಡೆಯಲು ಇಚ್ಛಿಸುವ ಆಸಕ್ತ ಸಂಘ–ಸಂಸ್ಥೆಗಳು, ಸಾರ್ವಜನಿಕರು ಲಿಖಿತ ರೂಪದಲ್ಲಿ ಎಚ್.ವಿ.ರಾಜೀವ್ ಸ್ನೇಹ ಬಳಗಕ್ಕೆ ಅರ್ಜಿ ಸಲ್ಲಿಸುವಂತೆ ಸಂಸ್ಥೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಶೇಷಪ್ರಸಾದ್ ಮೊ: 9353006616 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮಹಾರಾಜ ಸಂಸ್ಕೃತ ಪಾಠಶಾಲೆ ಕಟ್ಟಡ ನವೀಕರಣಕ್ಕೆ ಕೋಟಿ ಅನುದಾನ ಪ್ರಸ್ತಾವನೆ

ಮೈಸೂರು, ಮೇ 22(ಎಂಕೆ)– ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲೊಂದಾದ ಸರ್ಕಾರಿ ಮಹಾರಾಜ ಸಂಸ್ಕೃತ ಪಾಠಶಾಲೆ ನವೀಕರಣಕ್ಕಾಗಿ ಕೋಟಿ ರೂ. ಅನುದಾನ ಕಲ್ಪಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ.



ಸಂಸ್ಕೃತ ಪಾಠಶಾಲೆಯ ಹಿಂಭಾಗದಲ್ಲಿ ಶೌಚಾಲಯಕ್ಕೆ ಹೊಂದಿಕೊಂಡಂತಿರುವ ಕಾಂಪೌಂಡ್ ಕುಸಿದು ಆತಂಕ ಸೃಷ್ಟಿಯಾಗಿರುವುದಲ್ಲದೆ ಸಮಸ್ಯೆಗಳ ಸರಮಾಲೆಯನ್ನೇ ಹೊದಿಕೆಯನ್ನಾಗಿ ಮಾಡಿಕೊಂಡಿರುವ ಸಂಸ್ಕೃತ ಪಾಠ ಶಾಲೆಯ ಒಂದು ಭಾಗದ ಕೊಠಡಿಗಳ ನವೀಕರಣ ಕಾಮಗಾರಿ ಈಗಾಗಲೇ ನಡೆಯುತ್ತಿದೆ. ಕಾಂಪೌಂಡ್ ಸೇರಿದಂತೆ ಮತ್ತೊಂದು ಭಾಗದ ನವೀಕರಣಕ್ಕೆ ಅನುದಾನ ಕೋರಿ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಸಂಸ್ಕೃತ ಪಾಠ ಶಾಲೆಯ ಪ್ರಾಂಶುಪಾಲ ಡಾ.ಸತ್ಯನಾರಾಯಣ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

1868ರಲ್ಲಿ ಆರಂಭವಾದ ಸಂಸ್ಕೃತ ಪಾಠ ಶಾಲೆ ಆಡಳಿತ ಕಚೇರಿ ಕಟ್ಟಡ ಭಾಗದ ಮೇಲ್ಚಾವಣಿ(ತಾರಸಿ) ಶಿಥಿಲಗೊಂಡಿದ್ದರಿಂದ ಲೋಕೋಪಯೋಗಿ ಇಲಾಖೆಯಿಂದ 60 ಲಕ್ಷ ರೂ. ವೆಚ್ಚದಲ್ಲಿ ಕಳೆದ 6 ತಿಂಗಳಿಂದ ದುರಸ್ತಿ ಕಾಮಗಾರಿ ನಡೆಯುತ್ತಿದೆ ಹಾಗೆಯೇ ತರಗತಿ ಕೊಠಡಿಗಳ ಕಟ್ಟಡ ಹಾಗೂ ಕುಸಿದು ಬಿದ್ದಿರುವ ಕಾಂಪೌಂಡ್ ದುರಸ್ತಿ ಸೇರಿ ಕೋಟಿ ರೂ.ಅನುದಾನ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಕೋರಲಾಗಿದೆ ಎಂದು ಮಾಹಿತಿ ನೀಡಿದರು.

ಸಂಸ್ಕೃತ ಪಾಠ ಶಾಲೆಯಲ್ಲಿ 300–350 ವಿದ್ಯಾರ್ಥಿಗಳು ವೇದ, ಶಾಸ್ತ್ರ, ಆಗಮ ಅಧ್ಯಯನ ಮಾಡುತ್ತಿದ್ದು, ಪಾಠಶಾಲೆಯ ಹಿಂಭಾಗದಲ್ಲಿ ಹಾಸ್ಟೆಲ್ ವ್ಯವಸ್ಥೆಯನ್ನು ನೀಡಲಾಗಿದೆ. ಉನ್ನತ ಶಿಕ್ಷಣ ಇಲಾಖೆ ಹಾಗೂ ಸಂಸ್ಕೃತ ವಿಶ್ವವಿದ್ಯಾನಿಲಯದ ನಡುವಿನ ಗೊಂದಲದಿಂದಾಗಿ ಹಾಸ್ಟೆಲ್ ಕಟ್ಟಡ ನಿರ್ಮಾಣಗೊಂಡು ಐದು ವರ್ಷವಾದರೂ ಉದ್ಘಾಟನೆಯಾಗಿಲ್ಲ. ಆದರೂ ಅದೇ ಕಟ್ಟಡವನ್ನು ಸದ್ಬಳಕೆ ಮಾಡಿಕೊಂಡು ಊಟ–ವಸತಿ ಪೂರೈಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಖಾಸಗಿ ವಾಹನಗಳ ಹಾವಳಿ: ಸಂಸ್ಕೃತ ಪಾಠ ಶಾಲೆ ಆವರಣದಲ್ಲಿ ಖಾಸಗಿ ವಾಹನಗಳ ಹಾವಳಿ ವಿಪರೀತವಾಗಿದೆ. ಎಷ್ಟೇ ಹೇಳಿದರೂ ಕ್ಯಾಂಪಸ್ ಒಳಗಡೆಯೇ ಕಾರು, ಸ್ಕೂಟರ್‌ಗಳನ್ನು ಪಾರ್ಕಿಂಗ್ ಮಾಡುತ್ತಾರೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ಸಾಕಷ್ಟು ತೊಂದರೆಯಾಗುತ್ತಿದೆ. ಪೊಲೀಸರಿಗೆ ತಿಳಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ

ಜೀರ್ಣಾಂಗ, ಜಿಐ ಅಂಕಾಲಜಿ ಕೇಂದ್ರ ಆರಂಭ

ಮೈಸೂರು, ಮೇ 22(ಜಿಎ)–ಮೈಸೂರು ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಜೀರ್ಣಾಂಗ ಮತ್ತು ಜಿಐ ಅಂಕಾಲಜಿ ಕೇಂದ್ರವನ್ನು ಆರಂಭಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥರಾದ ಡಾ. ಅಶೋಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೀರ್ಣಾಂಗದ ಸಮಸ್ಯೆಗೆ ಬೆಂಗಳೂರು ಮೊದಲಾದ ದೊಡ್ಡ ನಗರಗಳಿಗೆ ತೆರಳಬೇಕಿತ್ತು ಆದರೆ, ಈಗ ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ಜೀರ್ಣಾಂಗ ವ್ಯೂಹದ ಕ್ಯಾನ್ಸರ್ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿವೆ. ತಡವಾಗಿ ತಪಾಸಣೆಗೆ ಬರುವುದು, ಸ್ವಯಂ ಔಷಧಿ, ಜಿಐ ವಿಧದ ಕ್ಯಾನ್ಸರ್ ನಿರ್ಲಕ್ಷ್ಯ ಇದಕ್ಕೆ ಕಾರಣ ವಾಗಿದೆ. ಇಂತಹ ಸಮಸ್ಯೆಗಳಿಂದ ಬಳಲುವವರಿಗೆ ಒಂದೇ ಸೂರಿನಡಿಯಲ್ಲಿ ಚಿಕಿತ್ಸೆ ನೀಡುವ ಸೌಲಭ್ಯ ಆಸ್ಪತ್ರೆಯಲ್ಲಿ ಆರಂಭವಾಗಿದೆ.

ಇನ್ನೂ ಮುಂದೆ ಮೈಸೂರಲ್ಲೇ ಜೀರ್ಣಾಂಗದ ಸಮಸ್ಯೆಗೆ ಚಿಕಿತ್ಸೆ

ತಪಾಸಣೆ, ಸಮಾಲೋಚನೆ, ಚಿಕಿತ್ಸೆಗಳೆಲ್ಲವೂ ಒಂದೇ ಸೂರಿನಡಿ ಲಭ್ಯವಾಗುತ್ತಿವೆ. ಇದರಿಂದಾಗಿ ರೋಗಿಗಳಿಗೆ ಹಣ, ಸಮಯ ಉಳಿತಾಯದೊಡನೆ ಸಕಾಲಿಕ ಚಿಕಿತ್ಸೆ ದೊರೆಯುವಂತಾಗಿದೆ ಹೀಗಾಗಿ ನಗರ ಹಾಗೂ ಸುತ್ತಮುತ್ತಲಿನ ಜನತೆ ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಡಾ. ನಂದೀಶ್, ಡಾ.ದೇವರಾಜ, ಡಾ. ಸುಹಾಸ್, ಪವನ್ ಕುಮಾರ್ ಪರಮಾತ್ಮಿನಿ ಮತ್ತಿತರರು ಉಪಸ್ಥಿತರಿದ್ದರು.

ಡಿಪ್ಲೋಮಾ, ಪಿಜಿ ಸಿಇಟಿ ಪರೀಕ್ಷೆ

ಪರೀಕ್ಷಾ ಕೇಂದ್ರದ ಸುತ್ತಲೂ ನಿಷೇಧಾಜ್ಞೆ

ಮೈಸೂರು, ಮೇ 22– ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮೇ 23 ರಂದು 2/3 ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಾತಿಗೆ ಡಿಪ್ಲೋಮಾ ಸಿಇಟಿ ಪರೀಕ್ಷೆ 2026 ಹಾಗೂ ಎಂಎ, ಎಂಟೆಕ್ ಕೋರ್ಸುಗಳ ಪ್ರವೇಶಾತಿಗೆ ಪಿಜಿ–ಸಿಇಟಿ ಪರೀಕ್ಷೆ–2026 ಮೈಸೂರು ನಗರದ ಒಟ್ಟು 11 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಬಳಿ ಪರೀಕ್ಷಾ ಅಕ್ರಮಗಳು ಮತ್ತು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

DCET-2026 ಪರೀಕ್ಷಾ ಕೇಂದ್ರಗಳು: ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಜೆಎಲ್‌ಬಿ ರಸ್ತೆ, ಮೈಸೂರು, ಎಸ್.ಬಿ.ಆರ್.ಆರ್ ಮಹಾಜನ ಪದವಿ ಪೂರ್ವ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು, ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಎನ್.ಎಸ್. ರಸ್ತೆ, ಮೈಸೂರು, ಎಂ.ಎಂ.ಕೆ. & ಎಸ್.ಡಿ.ಎಂ. ಪದವಿಪೂರ್ವ ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು, ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು, ಮಹಾರಾಜ ಸರ್ಕಾರಿ ಜೂನಿಯರ್ ಕಾಲೇಜ್ (ಪ್ರೌಢ ಶಾಲೆ), ಜೆಎಲ್‌ಬಿ ರಸ್ತೆ, ಮೈಸೂರು.

PGCET-2026 ಪರೀಕ್ಷಾ ಕೇಂದ್ರಗಳು: ಟೆರಿಷಿಯನ್ ಪದವಿ ಪೂರ್ವ ಕಾಲೇಜು, ಸಿದ್ದಾರ್ಥನಗರ, ಮೈಸೂರು, ಬಾಲಕಿಯರ ಪದವಿ ಪೂರ್ವ ಕಾಲೇಜು, ಮಾತೃಮಂಡಳಿ, ವಿ.ವಿ ಮೊಹಲ್ಲಾ ಮೈಸೂರು, ದೇವರಾಜ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮೈಸೂರು, ವಿಜಯ ವಿಠಲ ಪದವಿ ಪೂರ್ವ ಕಾಲೇಜು, ಸರಸ್ವತಿಪುರಂ, ಮೈಸೂರು, ವಿಜಯ ವಿಠಲ ಪದವಿ ಪೂರ್ವ ಕಾಲೇಜು, ಸರಸ್ವತಿಪುರಂ, ಮೈಸೂರು

ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ನಗರದ ರಸ್ತೆಗಳಿಗೆ ತೇಪೆ ಭಾಗ್ಯ!

ದಸರಾ ವೇಳೆ ಆಯ್ದ ರಸ್ತೆಗಳಿಗೆ ಡಾಂಬರೀಕರಣ ಮಾಡುವ ಪರಿಪಾಟ

● ತೇಪೆಯಿಂದ ರಸ್ತೆಗಳಲ್ಲಿ ಉಬ್ಬು ತಗ್ಗು ● ಕೆಲವು ಬಡಾವಣೆಗಳ ರಸ್ತೆಗಳಿಗೆ ತೇಪೆಯೂ ಇಲ್ಲ ● 460 ಕೋಟಿ ವೆಚ್ಚದ ವೈಟ್ ಟಾಪಿಂಗ್ ಆದರೆ ಸ್ವಲ್ಪ ಸುಧಾರಣೆ

ಮೈಸೂರು, ಮೇ22(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹಳ್ಳ–ಕೊಳ್ಳ ಬಿದ್ದ ರಸ್ತೆಗಳಿಗೆ ಡಾಂಬರೀಕರಣ ಮಾಡುವ ಬದಲು ತೇಪೆ ಹಾಕುವ ಕೆಲಸ ನಡೆಯುತ್ತಿದೆ.

ಕೆಲವು ವರ್ಷಗಳ ಹಿಂದೆ ಯಾವುದಾದರೊಂದು ರಸ್ತೆ ಹಾಳಾದರೆ ತಕ್ಷಣ ಡಾಂಬರೀಕರಣ ಮಾಡಲಾಗುತ್ತಿತ್ತು. ಆದರೆ ಈಗ ಮೈಸೂರು ದಸರಾ ವೇಳೆಯಲ್ಲಿ ಅದರಲ್ಲೂ ಆಯ್ದ ರಸ್ತೆಗಳಿಗೆ ಮಾತ್ರ ಡಾಂಬರೀಕರಣ ಮಾಡುವ ಪರಿಪಾಠ ಮುಂದುವರೆಸಿಕೊಂಡು ಬರಲಾಗುತ್ತಿದೆ. ಹಳ್ಳ ಬಿದ್ದಿರುವ ರಸ್ತೆಗಳು ಡಾಂಬರೀಕರಣದ ಭಾಗ್ಯ ಕಾಣಬೇಕೆಂದರೆ ದಸರಾವರೆಗೆ ಕಾಯಬೇಕಾಗಿದೆ.

ಪ್ರವಾಸಿಗರ ಪ್ರಧಾನ ಆಕರ್ಷಣೆಯ ಕೇಂದ್ರವಾದ ಮೈಸೂರು ಅರಮನೆ ಸುತ್ತಮುತ್ತಲ ರಸ್ತೆ ಗುಣಮಟ್ಟ ಚೆನ್ನಾಗಿರುತ್ತಿತ್ತು. ದೇಶ–ವಿದೇಶದ ಪ್ರವಾಸಿಗರ ಮುಂದೆ ಮೈಸೂರಿನ ಪ್ರತಿಷ್ಠೆಗೆ ಕುಂದು ಬರದಂತೆ ರಸ್ತೆ ಗುಣಮಟ್ಟ ಕಾಪಾಡಿಕೊಳ್ಳಲಾಗುತ್ತಿತ್ತು.

ಆದರೆ ಈಗ ಹೊಸದಾಗಿ ಡಾಂಬರೀಕರಣ ಮಾಡುವ ಗೋಜಿಗೆ ಹೋಗದ ಮೈಸೂರು ನಗರ ಪಾಲಿಕೆ, ತೇಪೆ ಹಾಕಿ ಕೈ ತೊಳೆದುಕೊಳ್ಳುತ್ತಿದೆ.

ಮೈಸೂರು ನಗರ ಪಾಲಿಕೆಯ ಮುಂಭಾಗ, ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ ಬಳಿ, ಅಗ್ರಹಾರ ಸೇರಿದಂತೆ ಇತರೆಡೆ ತೇಪೆ ಹಾಕುವ ಕಾರ್ಯ ಭರದಿಂದ ಸಾಗುತ್ತಿದೆ. ಇದರಿಂದ ರಸ್ತೆಗಳಲ್ಲಿ ಉಬ್ಬು ತಗ್ಗು ಕಾಣಿಸುತ್ತಿದ್ದು, ರಸ್ತೆ ಸೌಂದರ್ಯ ಹಾಳಾಗಿದೆ.

ಮೈಸೂರು ನಗರದ ಹೃದಯ ಭಾಗದಲ್ಲಿ ಮಾತ್ರ ತೇಪೆ ಹಾಕಲಾಗುತ್ತಿದೆ. ಇದು ಬಿಟ್ಟು ಉಳಿದ ರಸ್ತೆಗಳಲ್ಲಿ ಹಳ್ಳ, ಕೊಳ್ಳ ಬಿದ್ದು ಅವ್ಯವಸ್ಥೆ ತಾಂಡವ ವಾಡುತ್ತಿದೆ. ಇದರಿಂದ ರಸ್ತೆ ಅಪಘಾತ ಪ್ರತಿ ದಿನದ ಗೋಳಾಗಿದೆ.

ಮೈಸೂರು ನಗರದ ರಿಂಗ್ ರಸ್ತೆಗೆ ಹೊಂದಿಕೊಂಡ ಕೆಲವು ಬಡಾವಣೆಗಳ ಪರಿಸ್ಥಿತಿಯಂತೂ ಹೇಳ ತೀರದಾಗಿದೆ. ಬಡಾವಣೆ ನಿರ್ಮಾಣ ಮಾಡಿದಾಗ ಇಲ್ಲಿನ ರಸ್ತೆಗಳು ಡಾಂಬರೀಕರಣ ಕಂಡಿವೆ. ತರುವಾಯ ಇಲ್ಲಿನ ರಸ್ತೆಗಳಿಗೆ ತೇಪೆ ಹಾಕುವ ಕೆಲಸ ಕೂಡ ಮಾಡಿಲ್ಲ. ಇದರಿಂದ ಇಲ್ಲಿನ ಜನರ ಪರಿಸ್ಥಿತಿ ಹೀನಾಯವಾಗಿದೆ.

ರಸ್ತೆ, ಕುಡಿಯುವ ನೀರು, ಬೀದಿ ದೀಪ ಅತ್ಯವಶ್ಯಕ. ಆದರೆ ನಗರ ಪಾಲಿಕೆ ಪ್ರಮುಖವಾದ ರಸ್ತೆಗಳ ಸುಧಾರಣೆಗೆ ಒತ್ತು ನೀಡುತ್ತಿಲ್ಲ. ಮೈಸೂರು ನಗರದಲ್ಲಿ 460 ಕೋಟಿ ವೆಚ್ಚದಲ್ಲಿ 46 ಕಿಲೋಮೀಟರ್‌ಗೆ ವೈಟ್ ಟಾಪಿಂಗ್ ಮಾಡಲಾಗುತ್ತಿದೆ. ಈ ಕಾಮಗಾರಿ ಪೂರ್ಣಗೊಂಡರೆ ಮೈಸೂರಿನ ರಸ್ತೆಗಳ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತದೆ.



ಮೈಸೂರು ನಗರ ಪಾಲಿಕೆಯ ಮುಂಭಾಗ ಸೇರಿದಂತೆ ಕೆಲವು ರಸ್ತೆಗಳಿಗೆ ತೇಪೆ ಹಾಕಲಾಗುತ್ತಿದೆ.

ಮಧ್ಯ ಪ್ರಾಚ್ಯ ಯುದ್ಧದಿಂದ ಡಾಂಬರ್ ಆಮದು ಸ್ಥಗಿತ

ಮಧ್ಯ ಪ್ರಾಚ್ಯ ಯುದ್ಧದ ಪರಿಣಾಮ ಡಾಂಬರ್ ಅಥವಾ ಬಿಟುಮಿನ್ ಆಮದು ಸ್ಥಗಿತಗೊಂಡಿದೆ. ಇರಾನ್, ಯುಎಇ, ಅಮೇರಿಕಾ, ಸೋಮಾಲಿಯಾ ಹಾಗೂ ಕೊಲಂಬಿಯಾದಿಂದ ಭಾರತಕ್ಕೆ ಡಾಂಬರ್ ಆಮದಾಗುತ್ತದೆ. ಆದರೆ ಯುದ್ಧದ ಕಾರಣ ಸಮರ್ಪಕವಾಗಿ ಡಾಂಬರ್ ಪೂರೈಕೆಯಾಗುತ್ತಿಲ್ಲ.

ಭಾರತದಲ್ಲಿ ಕಚ್ಚಾ ತೈಲ ಸಂಸ್ಕರಣೆಯ ಮೂಲಕ ದೇಶಿಯವಾಗಿ ಡಾಂಬರ್ ಉತ್ಪಾದನೆಯಾಗುತ್ತದೆ. ಆದರೂ ಭಾರತವು ಪ್ರತಿ ವರ್ಷ ಸುಮಾರು 2.5 ರಿಂದ 3.2 ಮೆಟ್ರಿಕ್ ಟನ್ ಡಾಂಬರು ಆಮದು ಮಾಡಿಕೊಳ್ಳುತ್ತದೆ. ಮಧ್ಯ ಪ್ರಾಚ್ಯ ಯುದ್ಧದಿಂದ ಉದ್ವಿಗ್ನ ಪರಿಸ್ಥಿತಿ ಹಿನ್ನೆಲೆಯಲ್ಲಿ ಡಾಂಬರ್ ಬೆಲೆ ಕೂಡ ದುಬಾರಿಯಾಗಿದೆ. ಇದರಿಂದ ಆಗಾಗೆ ನಡೆಯುತ್ತಿದ್ದ ರಸ್ತೆ ಡಾಂಬರೀಕರಣ ಸ್ಥಗಿತಗೊಂಡಿದೆ.

ಮೈಸೂರು ನಗರದಲ್ಲಿ ಪುಂಡ–ಪೋಕರಿಗಳ ಹಾವಳಿ ತಡೆಗೆ ಏರಿಯಾ ಡಾಮಿನೇಷನ್ ತೀವ್ರ

ಪಾರ್ಕು, ಸ್ಮಶಾನಗಳಲ್ಲಿ ಕುಡಿದು ರಂಪಾಟ ಮಾಡುವವರ ಬಗ್ಗೆ 112ಗೆ ಕರೆ ಮಾಡಿ

ಮೈಸೂರು, ಮೇ 22(ಜಿಎ)–ಮೈಸೂರು ನಗರದಲ್ಲಿ ಪುಂಡ–ಪೋಕರಿಗಳ ಹಾವಳಿ ತಡೆಯಲು ಏರಿಯಾ ಡಾಮಿನೇಷನ್ ತೀವ್ರಗೊಳಿಸಿದ್ದಾರೆ.

ಮೈಸೂರಿನಲ್ಲಿ ರಾತ್ರಿ ಸಮಯದಲ್ಲಿ ಪೊಲೀಸರು ಗಸ್ತು ನಡೆಸಿ, ಜನರಿಗೆ ಜಾಗೃತಿ ಮತ್ತು ಭರವಸೆ ಮೂಡಿಸುತ್ತಿದ್ದಾರೆ. ಆದರೆ, ಕೆಲವು ಪ್ರದೇಶದಲ್ಲಿ ಪುಂಡರಿಂದ ಸಮಸ್ಯೆಗಳು ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಏರಿಯಾ ಡಾಮಿನೇಷನ್ ಕಾರ್ಯಾಚರಣೆಯನ್ನು ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ವಿಶೇಷವಾಗಿ 13 ಮಂದಿ ಕಮಾಂಡರ್‌ಗಳ ತಂಡ ರಚಿಸಲಾಗಿದೆ.

ನಗರದಲ್ಲಿ ಪೊಲೀಸರು ಗಸ್ತು ನಡೆಸುತ್ತಿದ್ದಾಗ ರಾತ್ರಿ 10.30ರಿಂದ 11ಗಂಟೆಯೊಳಗೆ ಎಲ್ಲಾ ಅಂಗಡಿಗಳನ್ನು ಬಂದ್ ಮಾಡಿಸಿ, ಮೈಸೂರಿನ ಶಾಂತಿಯನ್ನು ಕಾಪಾಡುತ್ತಿದ್ದರು. ಆದರೆ ಪೊಲೀಸರ ಈ ಗಸ್ತು ಯಶಸ್ವಿಯಾದ ನಂತರ ಪುಂಡ–ಪೋಕರಿಗಳು ಏರಿಯಾ ಒಳಭಾಗದಲ್ಲಿರುವ ಉದ್ಯಾನವನ, ಸ್ಮಶಾನವನ್ನು ತಮ್ಮ ಪಾರ್ಟಿ ಅಡ್ಡ ಮಾಡಿಕೊಂಡಿದ್ದಾರೆ.

ಸಾರ್ವಜನಿಕರು ಏನೇ ಸಮಸ್ಯೆ ಆದ ತಕ್ಷಣ 112ಗೆ ಕರೆ ಮಾಡಿ ದೂರು ಮಾಹಿತಿ ನೀಡುತ್ತಿದ್ದಾರೆ. ಈ ಕಾರಣದಿಂದ ಈಗ ಏರಿಯಾ ಡಾಮಿನೇಷನ್ ತೀವ್ರಗೊಳಿಸಲಾಗುತ್ತಿದೆ. ನಗರದ ಕೆಲವು ಸೂಕ್ಷ್ಮ ಪ್ರದೇಶದಲ್ಲಿ ತಡರಾತ್ರಿ ಗಸ್ತು ನಡೆಸಿದ ಹಿನ್ನೆಲೆಯಲ್ಲಿ ಉದ್ಯಾನವನ, ಸ್ಮಶಾನದಲ್ಲಿ ಪಾರ್ಟಿ ಮಾಡಿ ಅಕ್ಕ–ಪಕ್ಕದ ಮನೆಯವರಿಗೆ ಕಿರಿಕಿರಿ ಉಂಟು ಮಾಡಿರುವ ಸಂಬಂಧ 112ಗೆ ಕೆಲವು ದೂರುಗಳು ಬಂದಿದೆ.



ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ಗುರುವಾರ ಸಂಜೆ ಡಿಸಿಪಿ ಡಾ.ಹರ್ಷ ಪ್ರಿಯಂವದ ಏರಿಯಾ ಡಾಮಿನೇಷನ್‌ಗೆ ಸಂಬಂಧಿಸಿದಂತೆ ಚಾಮುಂಡಿ ಕಮಾಂಡೋ ಮತ್ತು ಪ್ಯಾಂಥರ್ ಪಡೆಯ ಅಧಿಕಾರಿ, ಸಿಬ್ಬಂದಿಗಳ ಸಭೆ ನಡೆಸಿದರು.

> ಏರಿಯಾ ಡಾಮಿನೇಷನ್ ಕಾರ್ಯಾಚರಣೆ ಉತ್ತಮವಾಗಿ ನಡೆಯುತ್ತಿದ್ದು, ಕೆಲವು ಪ್ರದೇಶದಿಂದ ಬಂದ ದೂರಿನನ್ವಯ ಕಮಾಂಡೋಗಳನ್ನು ಬಳಕೆ ಮಾಡಿಕೊಂಡು ತೀವ್ರಗೊಳಿಸುತ್ತಿದ್ದೇವೆ.
> –ಡಾ.ಹರ್ಷ ಪ್ರಿಯಂವದ, ಡಿಸಿಪಿ

ಡಿಸಿಪಿ ಡಾ.ಹರ್ಷ ಪ್ರಿಯಂವದ ಈ ಸಂಬಂಧ ಗುರುವಾರ ಸಂಜೆ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ಚಾಮುಂಡಿ ಕಮಾಂಡೋ ಮತ್ತು ಪ್ಯಾಂಥರ್ ಪಡೆಯ ಅಧಿಕಾರಿ, ಸಿಬ್ಬಂದಿಗಳ ಸಭೆ ನಡೆಸಿ ಏರಿಯಾ ಡಾಮಿನೇಷನ್ ಕಾರ್ಯಾಚರಣೆಯನ್ನು ಪರಿಣಾಮಕಾರಿಗೊಳಿಸುವ ಬಗ್ಗೆ ಸಲಹೆ ಮತ್ತು ಮಾರ್ಗಸೂಚಿಯನ್ನು ನೀಡಿದ್ದಾರೆ.

ಪ್ರದೇಶಗಳ ಪಟ್ಟಿ : 112ಗೆ ಸಾರ್ವಜನಿಕರು ಕರೆ ಮಾಡಿ ನೀಡಿರುವ ದೂರಿನ ಮೇರೆಗೆ ಪಾರ್ಕ್, ಸ್ಮಶಾನ ಸೇರಿದಂತೆ ವಿವಿಧ ಸ್ಥಳಗಳನ್ನು ಪಟ್ಟಿ ಮಾಡಿಕೊಂಡಿದ್ದು, ಬೀಟ್ ಪೊಲೀಸರೊಂದಿಗೆ 13 ಮಂದಿ ಕಮಾಂಡರ್‌ಗಳು ಆ ಸ್ಥಳಗಳಿಗೆ ದಿಢೀರ್ ಭೇಟಿ ನೀಡಲಿದ್ದಾರೆ.